MOTION

re: Scarcity conditions in certain areas of the State and relief measures (Debate Continued)

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).— ಈ ಕರ್ನಾಟಕ ರಾಜ್ಯದ ವಿಧಾನಸಭೆಯ ಗೌರವಾನ್ವಿತರಾದಂಥಾ ಅಧ್ಯಕ್ಷರೇ, ಶ್ರೀ ಮಾನ್ಯ ಡಿ. ದೇವರಾಜ ಅರಸ್‌ರವರ ಮುಖಂಡತ್ವದಲ್ಲಿರುವ ಸರ್ಕಾರದ ರೆವಿನ್ಯೂ ಸಚಿವರಾದ ಶ್ರೀಮಾನ್ ಎನ್. ಹುಚ್ಚಮಾಸ್ತಿಗೌಡರೇ ಈ ಸಭೆಯ ಮುಂದೆ ತಾವು ಏನು ಸೂಚನೆಯನ್ನು ಮಂಡಿಸಿದ್ದೀರಿ ಅದರ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾದುದು ಉಚಿತ. 1973 ನೇ ಇಸವಿಯಲ್ಲಿ ಪುಣ್ಯ ಪುರುಷರು ಅಧಿಕಾರಕ್ಕೆ ಬಂದ ಮೇಲೆ ಉತ್ತರ ಕರ್ನಾಟಕದಲ್ಲಿ ದುಷ್ಕಾಲ ಕ್ಷಾಮ ಬಂತು. ಕೇವಲ 4 ಜಿಲ್ಲೆಗೆ ಕ್ಷಾಮ ಬಂದಾಗ ಆ ದಿವಸ ನಮ್ಮ ಪಕ್ಷವನ್ನು ಬಿಟ್ಟು ನಿಮ್ಮ ಪಕ್ಷಕ್ಕೆ ಏನು ಬಂದಿದ್ದಾರೆ. ಅವರು ಧರಣಿ ಹೂಡಿದ್ದಾರೆ, ಅದಕ್ಕಾಗಿ ಹೋರಾಡಿದ್ದಾರೆ. ಆವಾಗಲೇ ಅದು ಪ್ರಾರಂಭವಾಯಿತು. ಆದುದರಿಂದ ನಾನು ತಮ್ಮ ಮುಖಾಂತರ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವೊತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ವಿರೋಧ ಪಕ್ಷದವರನ್ನು ಕೈಕಾಲು ಮುರಿಯುವಂಥಾ ಒಂದು ಪ್ರಯತ್ನವನ್ನು ಮಾಡಿದ್ದೀರಿ.

ಅಧ್ಯಕ್ಷರು.— ಅದೂ ಈಗ ಸಭೆಯ ಮುಂದೆ ಚರ್ಚೆಯಾಗುತ್ತಿರುವ ವಿಷಯದಲ್ಲಿ ಬರುತ್ತದೆಯೇ?

ಶ್ರೀ ಪುಟ್ಟಸ್ವಾಮಯ್ಯ — ಈ ವಿಷಯ ಬಹಳ ಪ್ರಾಮುಖ್ಯವಾದುದು. ಹೇಗೆಂದರೆ ಆ ದಿವಸ ಕೇವಲ 4 ಜಿಲ್ಲೆಗೆ ಉತ್ತರ ಕರ್ನಾಟಕದಲ್ಲಿ ಭೀಕರ ಕ್ಷಾಮ ಬಂದಾಗ, ದುಷ್ಕಾಲ ಬಂದಿದ್ದಾಗ ಆಡಳಿತ ಪಕ್ಷದಲ್ಲಿದ್ದವರೇ ಧರಣಿ ಹೂಡಿದ್ದಾರೆ. ಹೀಗಿರುವಾಗ ಈವಾಗ ನಮ್ಮ ಹಳೇ ಮೈಸೂರು ಭಾಗವನ್ನು ತಾತ್ಸಾರ ಮಾಡಿದ್ದೀರಿ, ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇನ್ನೊಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ತಮ್ಮ ಪಕ್ಷದವರೇ ಆದಂಥಾ ಪಾರ್ಲಿಮೆಂಟ್ ಸದಸ್ಯರು ನಮ್ಮ ರಾಜ್ಯದಲ್ಲಿ ಪ್ರವಾಸ ಮಾಡಿ ಈ ಬಗ್ಗೆ ತಮಗೆ ಮತ್ತು ಕೇಂದ್ರ ಸರ್ಕಾರಕ್ಕೆ ಏನು ಒಂದು ವರದಿಯನ್ನು ಸಲ್ಲಿಸಿದ್ದಾರೆ ಆ ವರದಿಯನ್ನು ಈ ಸಭೆಯ ಗಮನಕ್ಕೆ ತರಬೇಕಾದುದು ಅತಿ ಮುಖ್ಯ.

ಶ್ರೀ ಡಿ. ದೇವರಾಜ ಅರಸ್.— ಆ ವರದಿ ನಮಗೆ ಬಂದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ —ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳ ತಂಡ ಈ ರಾಜ್ಯದಲ್ಲಿ ಪ್ರವಾಸ ಮಾಡಿ ಇಲ್ಲಿ ತಲೆದೋರಿರತಕ್ಕ ಭೀಕರ ಕ್ಷಾಮ ಏನು ಇತ್ತು ಅದನ್ನು ಅವರು ಅಧ್ಯಯನ ಮಾಡಿ ಇದರ ಬಗ್ಗೆ ಅವರು ಏನು ವರದಿ ಮಾಡಿದ್ದಾರೆ. ಅದನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಗೆ ತಿಳಿಸಬೇಕಾದುದು ಅವಶ್ಯಕ. ಜೊತೆಗೆ ಶ್ರೀಮಾನ್ ಕೆ. ಹೆಚ್. ರಂಗನಾಥರವರು ಶಿವಮೊಗ್ಗಾ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಅಲ್ಲಿ ಸಾವಿರಾರು ಹಳ್ಳಿಗಳಿಗೆ ದುಷ್ಕಾಲ ಬಂದಿದೆ ಎಂದು ಪತ್ರಿಕಾ ವರದಿಯಲ್ಲಿ ಹೇಳಿದ್ದಾರೆ ಮತ್ತು ಅನೇಕ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಎನ್. ಹುಚ್ಚಮಾಸ್ತಿಗೌಡರು ಮತ್ತು ಶ್ರೀಮಾನ್ ಎಸ್. ಎಂ ಕೃಷ್ಣ ಅವರು ಇನ್ನೂ ಅನೇಕ ಮಾನ್ಯ ಮಂತ್ರಿಗಳು ಈ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಬಹಳ ಭೀಕರವಾದ ಕ್ಷಾಮ ಇದೆ ಎಂದು ಪತ್ರಿಕೆಗಳಲ್ಲಿ ಹೇಳಿದ್ದಾರೆ. ಅದರಿಂದ ನಾನು ತಮ್ಮ ಮುಖಾಂತರ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಿಂದೆ ಉತ್ತರ ಕರ್ನಾಟಕದಲ್ಲಿ ದುರ್ಭಿಕ್ಷ ಇದ್ದಾಗ ಆ ದಿವಸ ಆ ಭಾಗಕ್ಕೆ ಏನು ಹಣ ಖರ್ಚು ಮಾಡಿದಿರೋ ಅದರಲ್ಲಿ ಒಂದು ಲವಲೇಶವಾದರೂ ಕೂಡ ಈ ಭಾಗದ ಜನರಿಗೆ ಖರ್ಚು ಮಾಡದೇ ಇರುವುದಕ್ಕೆ ಕಾರಣ ಏನು ? ಆದುದರಿಂದ ನಾನು ಹೇಳುತ್ತೇನೆ. ಈ ಸರ್ಕಾರ ಈ ರಾಜ್ಯದಲ್ಲಿ. ಆಡಳಿತ ನಡೆಸುವುದರಲ್ಲಿ ವಿಫಲವಾಗಿದೆ ಎಂದು ನಾನು ಒಂದು ಸವಾಲನ್ನು ತಮ್ಮ ಮುಂದೆ ಹಾಕಬೇಕಾಗಿದೆ. ಕಾರಣವಾದರೂ ಇಷ್ಟೆ. ಹಳೇ ಮೈಸೂರಿನ ಜನ ಈ ದುಷ್ಕಾಲಕ್ಕೆ ಏನು ತುತ್ತಾಗಿದ್ದಾರೆ ಅದನ್ನು ಉದಾರಿಯಾಗಿ ನೋಡುವಷ್ಟೂ ಕೂಡ ಇಲ್ಲ. ಮಾನ್ಯ ಮಂತ್ರಿಗಳು ಸರ್ಕಾರದ ಅಧಿಕಾರಿಗಳನ್ನು ಆ ಭಾಗದಲ್ಲಿ ಕಳುಹಿಸಿ ನೋಡಿ

ಕೊಂಡು ಬರುವುದಕ್ಕೂ ಸಹ ಪ್ರಯತ್ನ ಮಾಡಿಲ್ಲ. ಹಳೇ ಮೈಸೂರಿನ ಭಾಗದವರನ್ನು ಬಹಳ ನಿರ್ಲಕ್ಷ್ಯ ಮಾಡಿದ್ದಾರೆ. ಆದ ದ್ದರಿಂದ ನಾನು ಸರ್ಕಾರಕ್ಕೆ ಹೇಳುತ್ತೇನೆ. ಈಗಲಾದರೂ ಕೂಡ ನಿಮಗೆ ಕರುಣೆ ಬರಲಿ ಅವಾಗೂ ಈಗಲಾದರೂ ಕರುಣೆ ಇಡದೇ ಹೋದರೆ ಹಳೇ ಮೈಸೂರಿನ ಜನ ಅಷ್ಟೇನೂ ಷಂಡರಲ್ಲ ಅನ್ನುವುದನ್ನು ತಿಳಿದು ಕೊಳ್ಳಬೇಕು. ಮಾನ ರೆವಿನ್ಯೂ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹಳೇ ಮೈಸೂರಿನ ಭಾಗದಲ್ಲಿ ಏನು ತೊಂದರೆ ಇದೆ ಅನ್ನುವುದನ್ನು ತಿಳಿದ ಕೊಳ್ಳುವುದಕ್ಕೆ ತಾತ್ಸಾರ ಮಾಡುತ್ತಿದ್ದಾರೆ ಎಂದು ಹೇಳುತ್ತೇನೆ. ಈಗೇನೂ ದುರದೃಷ್ಟ ವಶಾತ್ ಮಳೆ ಬಂದಿದೆ ನಮ್ಮ ಹಳೇ ಮೈಸೂರು ಭಾಗಕ್ಕೆ ಕ್ಷಾಮದ ಪ್ರದೇಶಕ್ಕೆ ಯಥೇಚ್ಛ ವಾಗಿ ಹಣ ದೊರಕಿಸಿಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ. ಅಲ್ಲದೆ ಶ್ರೀಮಾನ್ ಅರಸರವರು ಕೇಂದ್ರ ಸರ್ಕಾರದಲ್ಲೂ ಕೂಡ ಇದರ ಬಗ್ಗೆ ಪ್ರಭಾವ ಬೀರಿ ಹೆಚ್ಚು ಹಣದೊರಕಿಸಿ ಕೊಳ್ಳುವುದಕ್ಕೆ ಸಾಮರ್ಥ್ಯ ಇಲ್ಲ. ಅವರು ಇದರಲ್ಲಿ ನಿರ್ವೀರ್ಯರಾಗಿದ್ದಾರೆ. ಇದರ ಬಗ್ಗೆ ತಮ್ಮ ಅಭಿಪ್ರಾಯ ಏನು ಇದೆ ಅನ್ನುವುದನ್ನು ಈ ಸಭೆಗೆ ತಿಳಿಸಬೇಕು. ಕೇಂದ್ರ ಸರ್ಕಾರದಿಂದ 7 ಕೋಟಿ ರೂಪಾಯಿ ಮಾತ್ರ ಬಂದಿದೆ ಎಂದು ಹೇಳಿದ್ದಾರೆ. ಇನ್ನೆಷ್ಟು ತರುತ್ತೀರಿ ಅನ್ನುವುದನ್ನು ಹೇಳಬೇಕು ಈ ಗಾಗಲೇ ಸುಮಾರು 15 ಜಿಲ್ಲೆಗಳು ಈ ಬರಗಾಲಕ್ಕೆ ಈಡಾಗಿವೆ ಆದುದರಿಂದ ತಾವು ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ. ಎಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಂಡಿದ್ದೀರಿ ಅನ್ನುವುದನ್ನು ಈ ಸಭೆಗೆ ತಿಳಿಸಬೇಕು. ಎಷ್ಟು ಕಡೆಗಳಲ್ಲಿ ಕೆರೆಗಳಲ್ಲಿ ಹೂಳು ಗಳನ್ನು ತೆಗೆದಿದ್ದೀರಿ ಹೇಳಬೇಕು, ಇಲ್ಲದೇ ಹೋದರೆ ಈ ಮಂತ್ರಿಮಂಡಲ ಕರ್ನಾಟಕದಲ್ಲಿ ಅಸ್ತಿತ್ವ ದಲ್ಲ ಇರತಕ್ಕಂಥಾ ಒಂದು ನೈತಿಕ ಹಕ್ಕು ಪಡೆದಿಲ್ಲ ಎಂದು ಹೇಳಬೇಕಾಗಿದೆ ಶ್ರೀಮಾನ್ ಘೋರ್ಪಡೆಯವರು ಮಾತನಾಡಿದಾಗ ಹೇಳಿದರು ಬಡ್ಜೆಟ್ಟಿನಲ್ಲ ಬಾಹಿರವಾದಂಥಾ ಅಂಕಿಅಂಶ ಗಳನ್ನು ಕೊಟ್ಟಿದ್ದಾರೆ ಬಡ್ಜೆಟ್ಟಿನಲ್ಲಿ ಕಾಮಗಾರಿಗಳ ಬಗ್ಗೆ ಅಲಾಟ್ ಆಗಿರುವುದನ್ನು ಪ್ರಸ್ತಾಪ ಮಾಡಿದರು ಹಿಂದೆ 63 ಕೋಟಿ ರೂಪಾಯಿ ಬಡ್ಜೆಟ್ಟಿನಲ್ಲಿರುವ ವ್ಯಾಪ್ತಿಯಲ್ಲಿ ಏನು ಇತ್ತೋ ಅದನ್ನು ಖರ್ಚು ಮಾಡಿದ್ದಾರೆ ಈ ದಿವಸದ ಬಡ್ಜೆಟ್ಟಿನಲ್ಲಿರುವ ವ್ಯಾಪ್ತಿಯಿಂದ ಹೊರಗಡೆ ಎಷ್ಟೆಷ್ಟು ಹಣ ಯಾವ ಯಾವ ಭಾಗಕ್ಕೆ ಯಾವ ಯಾವ ಕಾಮಗಾರಿಗಳಿಗೆ ಖರ್ಚು ಮಾಡಿ ದ್ದೀರಿ ಅನ್ನುವುದರ ಬಗ್ಗೆ ಸ್ಪಷ್ಟವಾಗಿ ಈಸಭೆಗೆ ಸನ್ಮಾನ್ಯ ದೇವರಾಜ್ ಅರಸ್‌ರವರು ಘೋಷಿಸಬೇಕು ಎಂದು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಮಂತ್ರಿಗಳು ತಾವು ಉಳಿದು ಕೊಳ್ಳುವುದಕ್ಕೆಅಲ್ಲಿಗೆ ಹೋಗುವ ಬದಲು ಈ ಕ್ಷಾಮ ನಿವಾರಣೆಗೆ ಹೆಚ್ಚು ಹೆಚ್ಚು ಹಣ ತರುವುದಕ್ಕೆ ಕೇಂದ್ರಕ್ಕೆ ಪ್ರಭಾವ ಬೀರುವು ದಕ್ಕೆ ಡೆಲ್ಲಿಗೆ ಹೋದರು ಚಿಂತೆ ಇಲ್ಲ. ಒಟ್ಟಿನಲ್ಲ ನಮ್ಮ ರಾಜ್ಯದಲ್ಲಿ ಅಭಾವಕ್ಕೆ ತುತ್ತಾಗಿರತಕ್ಕಂಥಾ ಜನರಿಗೆ ಸಹಾಯ ನೀಡುವುದಕ್ಕೆ ಕೇಂದ್ರದಿಂದ ಹಣ ತರುವುದಕ್ಕೆ ಪ್ರಯತ್ನ ಮಾಡಬೇಕು ಈ ಬಗ್ಗೆ ತಮ್ಮ ನಿಲುವನ್ನು ಈ ಸಭೆಗೆ ಸ್ಪಷ್ಟಪಡಿಸಬೇಕು ಎಂದು ಹೇಳುತ್ತೇನೆ. ಹಳೇ ಮೈಸೂರಿನ ಭಾಗದ ಜನರ ಪರವಾಗಿ ಸನ್ಮಾನ್ಯ ದೇವರಾಜ ಅರಸ ರವರು ಈ ಬರಗಾಲದ ಪ್ರದೇಶದ ಜನರಿಗೆ ಆಪದ್ಬಾಂಧವರಾಗಿ ಬರದೇ ಹೋದರೆ ಮುಂದೆ ಅವರ ಶಾಪ ನಿಮಗೆ ಬರುತ್ತದೆ ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಐ ಜಿ ಸನದಿ(ಹುಬ್ಬಳ್ಳಿ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಶ್ರೀಮಾನ್ ದೇವರಾಜ್ ಅರಸ ರವರ ಮಂತ್ರಿಮಂಡಲ ಬಂದಮೇಲೆ ಬರಗಾಲ ಬಂತು ಎನ್ನತಕ್ಕಂಥಾ ಮಾತನ್ನು ವಿರೋಧ ಪಕ್ಷದ ಹಿರಿಯರು ಸದಸ್ಯರಾದಂಥಾ ಶ್ರೀಮಾನ್ ಬಿ ಪುಟ್ಟಸ್ವಾಮಯ್ಯ ಏನು ಹೇಳಿದರು ಅದನ್ನು ನಾನು ನಂಬುವುದಿಲ್ಲ.ಏತಕ್ಕೆಂದರೆ ನಮಗೂ ಬರಗಾಲಕ್ಕೂ ಶತಮಾನದ ನಂಟು ಋಗ್ವೇದದಲ್ಲಿಯೂ ಕೂಡ 'ಒಡತನವನ್ನು —ಬರಗಾಲದಿಂದ ರಕ್ಷಿಸು ' ಎಂಬ ಮಂತ್ರ ಇದೆ. 1876ರಲ್ಲಿ ಬಂದು 1978ರ ವರೆಗೆ ಕರ್ನಾಟಕದಲ್ಲಿ ಬೀಡುಬಿಟ್ಟಿದ್ದ ಈ ಸೆಂಚುರಿ ಸ್ನೇಹಿತ 1972-73ರಲ್ಲಿ ಗುಲ್ಬರ್ಗ ದಲ್ಲಿ ಹಣಕಿ ಹಾಕಿ 1976ರಲ್ಲಿ ಕರ್ನಾಟಕದ 15 ಜಿಲ್ಲೆಗಳಲ್ಲಿ ಕಾಲಿರಿಸಿದ್ದಾನೆ.

"ಬಂದೆಯಾ ಬಾ ಅತಿಥಿ,
ನಿನಗೆ ಸುಸ್ವಾಗತದ ತೋರಣಗಳಿಲ್ಲ,
ಹಸಿದವರ ಕಂಗಾಲಾದವರ
ಕಣ್ಣೀರಿನ ಅರ್ಘ್ಯ ಆಚಮನಗಳಿಲ್ಲ,
ಜನ-ದನಗಳ ಅಸ್ಥಿ ಪಂಜರದ
ಅಭರಣಗಳ ಸಾಲಿವಂತೂ ಮೊದಲೇ ಇಲ್ಲ.
ಹಿಂಸಾ-ಕ್ರೌರ್ಯದ ಕಾಲಕ್ಕೆ ತಿಳಿಸಂದು ಬಿಟ್ಟು
ಹೊರಡು ಅತಿಥಿ,
ಬಂದ ಹಾದಿಗೆ ಸುಂಕವಿಲ್ಲ.

ಎನ್ನುತಕ್ಕಂಥಾ ಮತ್ತಕ್ಕೆ ಕರ್ನಾಟಕ ಜನತೆ ಹೋರಾಡಲಿಕ್ಕೂ ಸಿದ್ಧವಾಗಿದೆ. ಕ್ಷಾಮ ನಿವಾರಣೆಗಾಗಿ ಈ ಕರ್ನಾಟಕದ ಜನ—ಮಾನ ಎಚ್ಚೆತ್ತಿದೆ; ಬದ್ಧ ಕಂಕಣವಾಗಿದೆ ಸರ್ಕಾರ ಸನ್ನಿದ್ಧಿಯಿಂದ ಕೆಲಸಕಾರ್ಯಗಳು ಆರಂಭವಾಗಲಿವೆ. ಎಂದು ಶ್ರೀಮಾನ್ ಅರಸ್‌ರವರು ಅಭಯ ವಚನವನ್ನು ಈಗಾಗಲೇ ಇತ್ತಿದ್ದಾರೆ. ನಮ್ಮ ಅರ್ಥಮಂತ್ರಿಗಳೂ ಕೂಡ ಏನು ಬಂದರೂ ಕೂಡ ಎಲ್ಲಾ ಕೆಲಸಕಾರ್ಯಗಳನ್ನೂ ಬದಿಗೊತ್ತಿ ಈ ಕಲಸಗಳಿಗೆ ಪ್ರಾಮುಖ್ಯತೆ ಕೊಟ್ಟು ಮಾಡಿಸುತ್ತೇವೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದನ್ನು ತಾವೆಲ್ಲಾ ಕೇಳಿರಬಹುದು.

ನಾನು ಕೇಂದ್ರದ ಗೃಹಖಾತೆಯ ಉಪಮಂತ್ರಿಗಳಾದ ಶ್ರೀ ಮೊಹಿಸಿನ್ ಅವರ ಜೊತೆಯಲ್ಲಿ ಧಾರವಾಡದ ದಕ್ಷಿಣ ಭಾಗದ 8 ತಾಲ್ಲೂಕುಗಳಿಗೆ ಸೇರಿದಂತಿರುವ ಹಳ್ಳಿಗಳಿಗೆ ಹೋಗಿ ಅಲ್ಲಿಯ ಜನರ ಕಷ್ಟಗಳನ್ನು ಅರ್ಥ ಮಾಡಿಕೊಂಡು ಬರತಕ್ಕಂಥ ಒಂದು ಪ್ರಸಂಗದಲ್ಲಿ ನಾನು ಪಾಲುಗೊಂಡಿದ್ದೆ. ಅಲ್ಲಿ ದನಗಳನ್ನು ದಾನ ಮಾಡುವಂತಹ ಕೆಲವು ಸಂದರ್ಭಗಳನ್ನು ನಾನು ಕಂಡಿದ್ದೇನೆ. ಮಕ್ಕಳನ್ನು ಹೆತ್ತ ತಾಯಿಂದಿರು ತಮ್ಮ ಮಕ್ಕಳನ್ನು ಬಸ್‌ಸ್ಟ್ಯಾಂಡ್‌ನಲ್ಲಿ ಬಿಟ್ಟು ಹೋಗಿದ್ದನ್ನು ನಾನು ಕಂಡಿದ್ದೇನೆ. ಹಸಿವನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಂತಹ ಕೆಲವು ರೈತರಿದ್ದರೆ, ಮತ್ತೆ ಕೆಲವು ರೈತರು ಭಿಕ್ಷೆ ಎತ್ತಿ ಜೀವನ ಮಾಡುತ್ತಿದ್ದಾರೆ. ಇದನ್ನೆಲ್ಲಾ ನಾವು ರಾವುಗನ್ನಡಿ ಹಿಡಿದು ನೋಡಬೇಕಾಗಿದೆ. ಪ್ಯಾನಿಕ್ ಅಟ್‌ಮಾಸ್ಫಿಯರ್ ಕ್ರಿಯೇಟ್ ಮಾಡಬೇಕೆಂದು ನನ್ನ ಮನಸ್ಸಿನಲ್ಲಿ ಇಲ್ಲ. ಮತ್ತು ಆ ಒಂದು ದೃಷ್ಟಿಯಿಂದ ನಾನು ಇದನ್ನೆಲ್ಲಾ ಹೇಳುತ್ತಿಲ್ಲ. ಆದರೆ ಇದಕ್ಕೆ ಒಂದು ತೆರೆ ಹಾಕತಕ್ಕಂಥಾ ಕೆಲಸವನ್ನು ನಾವು ಮಾಡಬೇಕಾಗಿದೆ. ನಾವು ಕನ್ನಡ ಜನತೆಗೆ ಈಗಿನ ಒಂದು ಪ್ರಜಾಪ್ರಭುತ್ವದಲ್ಲಿ ಅನ್ನ ಕೊಡುತ್ತೇವೆಂದು ಹೇಳಿದ್ದೇವೆ. ಅನ್ನ ಕೊಡುತ್ತೇವೆಂದರೆ, ಎರಡು ಹೊತ್ತು ಊಟಕ್ಕೆ ಹಾಕುತ್ತೇವೆಂದು ಅರ್ಥವಲ್ಲ. ನನ್ನ ದೃಷ್ಟಿಯಲ್ಲಿ ಅನ್ನ ಹಾಕುತ್ತೇವೆಂದರೆ ಎಲ್ಲರಿಗೂ ಆರ್ಥಿಕ ಭದ್ರತೆಯನ್ನು ತಂದುಕೊಡುವುದು, ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವುದು ಎಂದು ಅರ್ಥ. ಸಮಾಜವಾದವೇ ನಮ್ಮ ಗುರಿಯಾಗಿದೆ. ಒಂದು ದಿನದ ಜನರ ಹಸಿವನ್ನು ಹೋಗಲಾಡಿಸುವ ಪ್ರಶ್ನೆ ಇದಲ್ಲ. ಮುಖ್ಯವಾಗಿ ಶ್ರೀಮಂತರು ಕೂಡ ಬಡತನವೆಂದರೆ ಏನು, ಮತ್ತು ಈ ದೇಶದಲ್ಲಿ ಕ್ಷಾಮ ತಲೆದೋರಿದೆ ಎಂಬುದನ್ನು ತಿಳಿದುಕೊಂಡಿದ್ದಾರೆ. ನಮ್ಮ ಕರ್ನಾಟಕ ಸರ್ಕಾರವೂ ನದಿ ನೀರನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ರೈತರಿಗೆ ನೀರಿನ ಅನುಕೂಲ ಒದಗಿಸುತ್ತಿದೆ. ಅದೇ ರೀತಿ ಕೆರೆಗಳ ದುರಸ್ತಿಗೆ ಮತ್ತು ಚಿಕ್ಕ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕಲ್ಲದೆ, ಭೂಸಾರ ಸಂರಕ್ಷಣೆಗೆ ಮತ್ತು ಅರಣ್ಯಾಭಿವೃದ್ಧಿಗೂ ಹೆಚ್ಚಿನ ಗಮನ ಕೊಟ್ಟು ಯುದ್ಧ ಸನ್ನದ್ಧ ರೀತಿಯಲ್ಲಿ ಈ ಕಲಸಗಳನ್ನೆಲ್ಲಾ ಕೈಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

10-00 A. M.

ಇನ್ನು ನಮ್ಮ ಸರ್ಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದೆ ಆದಕಾರಣ ಅಲ್ಲಿಯ ನೀರನ್ನು ರೈತರಿಗೆ ಸರಿಯಾಗಿ ವಿತರಣೆ ಮಾಡುವಂತಹ ಒಂದು ಜವಾಬ್ದಾರಿಯನ್ನು ನೀರಾವರಿಯ ಸಲಹಾ ಮಂಡಲಿಯನ್ನು ರಚನೆ ಮಾಡಿ. ಅದಕ್ಕೆ ವಹಿಸಬೇಕು. ಎರಡು ಬೆಳೆಗಳನ್ನು ತೆಗೆಯುವುದಕ್ಕೆ ನೀರಿನ ಅನುಕೂಲವನ್ನು

ರೈತರಿಗೆ ಕಲ್ಪಿಸಿಕೊಟ್ಟರೆ ಆಹಾರ ಉತ್ಪಾದನೆ ಜಾಸ್ತಿಯಾಗುವುದಲ್ಲದೆ, ಹಸಿರು ಕ್ರಾಂತಿಯೂ ಸಹ ಆಗುತ್ತದೆ. ಆದಕಾರಣ ನೀರು ವ್ಯರ್ಥವಾಗಿ ಹರಿದು ಹೋಗದಂತೆ ನೋಡಿಕೊಳ್ಳಲು ಒಂದು ಸಲಹಾ ಮಂಡಲಿಯನ್ನು ರಚನೆ ಮಾಡುವುದಕ್ಕೆ ಸರ್ಕಾರ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೊನೆಯ ಮಾತೆಂದರೆ, ಇಂದು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಜನರು ಬಹಳ ಭಯಭೀತರಾಗಿದ್ದಾರೆ. ಆದಕಾರಣ ಮಂತ್ರಿಗಳಾಗಲೀ, ಶಾಸಕರಾಗಲೀ, ಈ ಬರಗಾಲ ನಿವಾರಣೆಯಾಗುವರೆಗೆ ಮತ್ತು ಕರ್ನಾಟಕ ರಾಜ್ಯದಲ್ಲಿ ಸುಭಿಕ್ಷ ತಲೆದೋರುವವರೆಗೆ ಸಭೆ ಸಮಾರಂಭಗಳಿಗೆ ಮತ್ತು ಭಾರಿ ಭೋಜನಗಳಿಗೆ ಬಹಿಷ್ಕಾರ ಹಾಕಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಮತ್ತು ಕಷ್ಟದಲ್ಲಿರತಕ್ಕಂಥ ಜನತೆಯ ಸೇವೆಗೆ ನಾವೆಲ್ಲಾ ಸದಾ ಸಿದ್ಧರಾಗಿದ್ದೇವೆಂಬುದನ್ನು ಒಗ್ಗಟ್ಟಿನಿಂದ ತೋರಿಸಿಕೊಡಬೇಕಾಗಿದೆ. ಈ ದಿಶೆಯಲ್ಲಿ ಸರ್ಕಾರವೂ ಕೂಡ ಕೆಲಸಕಾರ್ಯಗಳನ್ನು ಕೈಕೊಂಡು ಅದಕ್ಕಾಗಿ ಹಣ ಒದಗಿಸುತ್ತಿದೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿಮಾನದಿಂದ ಅಭಿನಂದಿಸಿ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸಕಾರ್ಯಗಳನ್ನು ಕೈಗೊಂಡು ಜನತೆಗೆ ಅನುಕೂಲ ಮಾಡಿಕೊಡಲಿ ಎಂದು ಈ ಸಭೆಯ ಮೂಲಕ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ ಶರಣಪ್ಪ, (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ದಿನ ಮಾನ್ಯ ಕಂದಾಯ ಸಚಿವರು ಈ ಮಾನ್ಯ ಸಭೆಯ ಮುಂದೆ ಅಭಾವ ಪರಿಸ್ಥಿತಿಯ ಬಗ್ಗೆ ಒಂದು ಸೂಚನೆಯನ್ನು ಮಂಡಿಸಿ, ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಜಿಲ್ಲೆಗಳ ಪೈಕಿ ಎಷ್ಟು ಜಿಲ್ಲೆಗಳಲ್ಲಿ ಹಾಗೂ ಎಷ್ಟು ತಾಲ್ಲೂಕ್‌ಗಳಲ್ಲಿ ಈ ಒಂದು ಪರಿಸ್ಥಿತಿ ಬಂದಿದೆ ಮತ್ತು ಎಷ್ಟು ಜನರು ತೊಂದರೆಗೀಡಾಗಿದ್ದಾರೆಂಬ ಬಗ್ಗೆ ಅಂಕಿಅಂಶಗಳನ್ನು ಕೊಟ್ಟು, ಈ ಬಗ್ಗೆ ಇನ್ನೂ ಹೆಚ್ಚಿನ ಕಾರ್ಯಗಳನ್ನು ಕೈಕೊಳ್ಳಲು ಮಾನ್ಯ ಸದಸ್ಯರು ಸೂಚನೆಗಳನ್ನು ಕೊಡಬೇಕೆಂದು ತಿಳಿಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದುವರೆಗೆ ಮಾತನಾಡಿದ ಮಾನ್ಯ ಸದಸ್ಯರುಗಳು ಹೇಳಿದಂತೆ. 97ರಲ್ಲಿ ಕರ್ನಾಟಕ ರಾಜ್ಯದಲ್ಲಿ ಕೇವಲ ನಾಲ್ಕನೇ ಒಂದು ಅಂಶದಷ್ಟು ಅಭಾವ ಪರಿಸ್ಥಿತಿ ಉಂಟಾದಾಗ ಸರ್ಕಾರದವರು 63 ಕೋಟಿ ರೂ ಗಳನ್ನು ಖರ್ಚು ಮಾಡಿ ಜನರಿಗೆ ಕೆಲಸಗಳನ್ನು ಒದಗಿಸುವುದರ ಮೂಲಕ ಆ ಒಂದು ಪರಿಸ್ಥಿತಿಯನ್ನು ಧೈರ್ಯದಿಂದ ಪಾರು ಮಾಡಿದಂತಹ ಒಂದು ಕೀರ್ತಿ ಮಾನ್ಯ ಕಂದಾಯ ಮಂತ್ರಿಗಳಿಗೆ ಸಲ್ಲುತ್ತದೆ ಮತ್ತು ಅದೇ ಕಾಲಕ್ಕೆ ನಮ್ಮ ಭಾಗದಲ್ಲಿ ಅಂದರೆ ಬೀದರೆ ರಾಯಚೂರು, ಗುಲ್ಬರ್ಗ ಜಿಲ್ಲೆಗಳಲ್ಲಿ ಹಣಕಾಸಿನ ಮಂತ್ರಿಗಳಾದ ಮಾನ್ಯ ಘೋರ್ಪಡೆಯವರು ಸಂಚಾರ ಮಾಡಿ ಅನೇಕ ಒಳ್ಳೆಯ ಕಾರ್ಯಗಳನ್ನು ಮಾಡಿದ್ದೇ ಅಲ್ಲದೆ, ಜನರ ಕುಂದುಕೊರತೆಗಳನ್ನು ನಿವಾರಣೆ ಮಾಡಿದ್ದಾರೆ. ಆದರೆ ಈಗ ನಮ್ಮ ರಾಜ್ಯದ ಬಹುಭಾಗಗಳಲ್ಲಿ ಅಭಾವ ಪರಿಸ್ಥಿತಿ ತಲೆದೋರಿರುವುದರಿಂದ ಮಾನ್ಯ ಕಂದಾಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ದೇವೇಗೌಡರು ಹೇಳಿದಂತೆ ನೂರು ಕೋಟಿ ರೂ. ಗಳಿಗೂ ಹೆಚ್ಚು ಹಣವನ್ನು ಖರ್ಚು ಮಾಡಿ, ಇಂತಹ ಪರಿಸ್ಥಿತಿ ಇನ್ನು ಮುಂದೆ ಬಾರದಂತೆ ಶಾಶ್ವತವಾದಂಥ ಕಾರ್ಯಕ್ರಮವನ್ನು ಹಾಕಿಕೊಂಡು ಈಗಿನ ಪರಿಸ್ಥಿತಿಯನ್ನು ನಿವಾರಣೆ ಮಾಡುವುದರಲ್ಲಿ ಧೈರ್ಯದಿಂದ ಮುಂದೆ ಹೆಜ್ಜೆ ಇಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಈ ಬಗ್ಗೆ ನನ್ನ ಕೆಲವೊಂದು ಅಭಿಪ್ರಾಯಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈಗ ಕೆಲವು ಮೇಜರ್ ಇರಿಗೇಷನ್ ಕಾಮಗಾರಿ ಕೆಲಸಗಳನ್ನು ಕೈಕೊಂಡು ಅರ್ಧದಲ್ಲಿಯೇ ನಿಲ್ಲಿಸಲಾಗಿದೆ. ಇವುಗಳು ಶಾಶ್ವತವಾದಂಥ ಯೋಜನೆಗಳಾದ ಕಾರಣ, ಇವುಗಳನ್ನು ಪೂರೈಸುವುದಕ್ಕೆ ಹಣ ಒದಗಿಸಬೇಕೆಂದು ಹೇಳುತ್ತೇನೆ. ಅದೇ ರೀತಿ ಮೈನರ್ ಇರಿಗೇಷನ್ ಕೆಲಸಗಳನ್ನು ಕೈಕೊಳ್ಳಬೇಕು. ಸಣ್ಣ ಸಣ್ಣ ಕೆರೆಗಳ ಕೆಲಸಗಳನ್ನು ಕೈಕೊಳ್ಳಬೇಕಲ್ಲದೆ, ಒಡೆದುಹೋದಂಥ ಕೆರೆಗಳನ್ನು ತಾತ್ಕಾಲಿಕವಾಗಿ ದುರಸ್ತಿ ಮಾಡಬೇಕು. ಹೊಸ ಕೆರೆಗಳ ಕೆಲಸವನ್ನು ಕೈಕೊಳ್ಳಲು ಒಂದು ಸೆಂಟರ್‌ನ್ನು ತೆಗೆದು, ಆ ಮೂಲಕ ಕೆಲಸ ಮಾಡಿಸಬೇಕಲ್ಲದೆ, ಅಫಾರೆಸ್ಟೇಷನ್ ವರ್ಕ್‌ನ್ನೂ ಕೈಕೊಳ್ಳಬೇಕು. ರಾಯಚೂರು, ಗುಲ್ಬರ್ಗ, ಬೀದರೆ ಈ ಜಿಲ್ಲೆಗಳಲ್ಲಿ ವಸತಿಗಳ ಅಭಾವವಿದೆ.

ಇದನ್ನು ಹೋಗಲಾಡಿಸಬೇಕು. ಈ ರಸ್ತೆಗಳ ಕೆಲಸವನ್ನು ಮಾಡಲು ಈಗ ಜನರು ಸಿಗುತ್ತಿದ್ದಾರೆ. ಆದಕಾರಣ ಇಂತಹ ಕೆಲಸವನ್ನು ಮಾಡಿಸಲು ಬಡ್ಜೆಟ್‌ನ ಹೊರಗಡೆ ಹಣ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಮುಖ್ಯ ಮಂತ್ರಿಗಳು ಆಹಾರ, ಕುಡಿಯುವ ನೀರು, ದನಗಳಿಗೆ ಬೇಕಾದಂಥ ಮೇವನ್ನು ಒದಗಿಸುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ. ಆದರಂತೆ ಕಾರ್ಯಗತ ಮಾಡುತ್ತಾರೆಂಬ ವಿಶ್ವಾಸ ನನಗಿದೆ.

ಇನ್ನು ಈ ದಿಶೆಯಲ್ಲಿ ಒಂದು ಮುಖ್ಯವಾದಂಥ ಅಂಶವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಏನೆಂದರೆ, ನಮ್ಮ ಕಡೆಯಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು ಮತ್ತು ಸಹಕಾರ ಸಂಘಗಳವರು ರೈತರಿಂದ ಹಿಂದಿನ ಬಾಕಿಯನ್ನು ಈಗಲೂ ವಸೂಲಿ ಮಾಡುತ್ತಿದ್ದಾರೆ. 8-10 ದಿವಸಗಳ ಹಿಂದೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು ಒಬ್ಬ ಬಡ ರೈತರಿಂದ 3 ಸಾವಿರ ರೂ ಬಾಕಿ ಬರಬೇಕಾಗಿದೆ ಎಂದು, ಒಂದು ಎತ್ತನ್ನು ಹೊಡೆದುಕೊಂಡು ಹೋದರು. ಇದರಿಂದ ಅವನು ಒಕ್ಕಲುತನ ಮಾಡುವುದು ನಿಂತು ಹೋಯಿತು. ಇಂತಹ ಒಂದು ದುಷ್ಕಾಳ ಪರಿಸ್ಥಿತಿ ಬಂದಿರುವಾಗ ಆ ಬಡ ರೈತ ಸಾಲ ತೀರಿಸುವುದಾದರೂ ಹೇಗೆ ? ಮತ್ತೆ ಕೆಲವು ರೈತರ ಪಂಪ್ ಸೆಟ್ಟುಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಇದರಿಂದ ಬರಬೇಕಾಗಿದ್ದ ಬೆಳೆಯೂ ಸಹ ಬರದಂತೆ ಆಗಿದೆ. ತಾವೇನೋ ಇಲ್ಲಿ ಸಾಲ ವಸೂಲಿ ಮಾಡುವುದಿಲ್ಲವೆಂದು ಆಶ್ವಾಸನೆಯನ್ನು ಕೊಡುತ್ತೀರಿ. ಆದರೆ ಹಳ್ಳಿಗಳಲ್ಲಿ ಸಾಲದ ವಸೂಲಿ ನಿರ್ದಾಕ್ಷಿಣ್ಯವಾಗಿ ನಡೆಯುತ್ತಿದೆ. ಯಾರು ಬಡವರಿದ್ದಾರೋ, ಯಾರ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲವೋ, ಅಂತಹವರಿಂದ ಸಾಲದ ವಸೂಲಿ ನಡೆಸಿದ್ದಾರೆ. ಇದರ ಒಂದು ಪರಿಣಾಮವಾಗಿ ತಾವು ಜೀವನ ನಡೆಸುವುದಾದರೂ ಹೇಗೆ ಎಂಬತಕ್ಕಂಥ ವಿಚಾರ ಆ ಜನರಲ್ಲಿ ಮೂಡಿ ಬರುತ್ತಿದೆ. ಆದಕಾರಣ ಈ ಸಾಲದ ಬಾಕಿಗಳನ್ನು ತಾತ್ಕಾಲಿಕವಾಗಿ ಮುಂದೂಡುವುದಕ್ಕೆ ಸರ್ಕಾರ ಒಂದು ಆಜ್ಞೆ ಹೊರಡಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಡೆಟ್ ರಿಲೀಫ್ ಆಕ್ಟ್ ಮತ್ತು ಇನ್ನಿತರ ವಿಷಯಗಳು ಬಂದ ಮೇಲೆ ಎಲ್ಲಾ ತಾಲ್ಲೂಕುಗಳಲ್ಲೂ ನೆರವು ನೀಡತಕ್ಕ ಬ್ಯಾಂಕುಗಳು ಓಪನ್ ಆಗಿವೆ. ಆದರೆ ರಾಯಚೂರು ಜಿಲ್ಲೆಯಲ್ಲಿ ಯಾವ ರೂರಲ್ ಬ್ಯಾಂಕುಗಳಾಗಲೀ, ನ್ಯಾಷನಲ್ ಬ್ಯಾಂಕುಗಳಾಗಲೀ ಸಾಲ ಕೊಡತಕ್ಕ ಕ್ರಮವನ್ನು ತೆಗೆದುಕೊಂಡಿಲ್ಲ. ಆದುದರಿಂದ ಜನಗಳಿಗೆ ಸಾಲವನ್ನು ಕೊಡುವುದನ್ನು ಅತೀ ತೀವ್ರವಾಗಿ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಈ ಒಂದು ದಿಶೆಯಲ್ಲಿ ನಮ್ಮ ತಾಲ್ಲೂಕು ಮತ್ತು ಜಿಲ್ಲಾಮಟ್ಟದಲ್ಲಿ ಅಭಾವ ಪರಿಸ್ಥಿತಿ ಬಗ್ಗೆ ಕಮಿಟಿಗಳನ್ನು ಫಾರಂ ಮಾಡಿ ಆ ಒಂದು ಭಾಗದಲ್ಲಿ ಮಾಡಬೇಕಾದಂಥ ಕಾರ್ಯಕ್ರಮಗಳ ಪಟ್ಟಿ ತಯಾರು ಮಾಡಿ ಯೋಗ್ಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಎಲ್ಲಾ ಕಾರ್ಯಗಳು ಸರ್ಕಾರದಿಂದ ಆಗುತ್ತವೆ ಎಂದು ನಾವು ಕಣ್ಣುಮುಚ್ಚಿ ಕೂಡಲು ಸಾಧ್ಯವಿಲ್ಲ. ಅಲ್ಲಲ್ಲಿ, ಅಂದರೆ ಹಳ್ಳಿಗಳಲ್ಲಾಗಲೀ ಪಟ್ಟಣಗಳಲ್ಲಾಗಲೀ ಶ್ರೀಮಂತರು ತಮ್ಮ ತಮ್ಮ ಆಯಕಟ್ಟಿನಲ್ಲಿ 10-20-100 ಜನಗಳಿಗೆ ಕೆಲಸವನ್ನು ಒದಗಿಸಿ ನೆರವು ಕೊಡುವುದಾದರೆ, ಸರ್ಕಾರ ಮತ್ತು ಜನತೆ ಮಾಡತಕ್ಕಂಥ ಈ ಕೆಲಸಗಳಿಂದ ಅಭಾವ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಎದುರಿಸಲು ಸಾಧ್ಯವಾಗುತ್ತದೆ. ಆದುದರಿಂದ ಇವತ್ತಿನ ದಿವಸ ಅಂಥಾ ಒಂದು ಹೆಜ್ಜೆಯನ್ನು ದಿಟ್ಟತನದಿಂದ ಇಡಬೇಕು. ತಾವು 21 ಕೋಟಿ ನೆರವು ಕೇಳಿದ್ದು ಸಾಲದು, ಇನ್ನೂ ಹೆಚ್ಚಾಗಿ ಹಣ ಒದಗಿಸಬೇಕು. ಇನ್ನೂ ಹೆಚ್ಚು ಹಣವನ್ನು ಒದಗಿಸಿ ರಿಲೀಫ್ ವರ್ಕ್ಸನ್ನು ತೆಗೆದುಕೊಂಡು ಅಭಾವ ಪರಿಸ್ಥಿತಿ ಉಂಟಾದಂಥ ಅನೇಕಾನೇಕ ಜಿಲ್ಲೆಗಳಲ್ಲಿ ಪರಿಹಾರ ಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಕೇಳಿಕೊಂಡು, ಮಾನ್ಯ ಅಧ್ಯಕ್ಷರು ಈ ಸಮಯದಲ್ಲಿ ಒಂದೆರಡು ಮಾತುಗಳನ್ನು ಆಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ಅಭಿನಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್, (ಗದಗ್) —ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಹಿಂದೆಂದೂ ಇಲ್ಲದಂಥ ಭೀಕರವಾದ ಬರಗಾಲ ಇಂದು ನಮ್ಮ ಪಾಲಿಗೆ ಬಂದಿದೆ. ಇದು ರಾಜ್ಯ ಸರ್ಕಾರಕ್ಕೂ ಜನತೆಗೂ ದೇವರಿಂದ ನಿರ್ಮಿತವಾದಂಥ ಒಂದು ಚಾಲೆಂಜ್ ಎನ್ನುವುದಕ್ಕೆ ಅಡ್ಡಿಯಿಲ್ಲ. ನಮ್ಮ ಸರ್ಕಾರದವರೂ ಸಹ ಈ ಬರಗಾಲ ನಿವಾರಣೆ ವಿಷಯದಲ್ಲಿ ವಿಶೇಷ ಆಸಕ್ತಿ ವಹಿಸಿ ಅನೇಕ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಉತ್ಸುಕರಾಗಿದ್ದಾರೆ. ನಮ್ಮ ರಾಜ್ಯದ ಕಾಂಗ್ರೆಸ್ ಪಾರ್ಲಿಮೆಂಟ್ ಸದಸ್ಯರೆಲ್ಲ ಕೇಂದ್ರಸರ್ಕಾರದ ಸಂಬಂಧಪಟ್ಟ ಸಚಿವರನ್ನು ಮತ್ತು ಪ್ರಧಾನಿಗಳನ್ನು ಭೆಟ್ಟಿಯಾಗಿ ಸಹಾಯದ ಬಗ್ಗೆ ಕೋರಿದ್ದಾರೆ. ನಾನು ಸಹ ಆಹಾರ ಸಚಿವರೊಡನೆ ಮತ್ತು ಆರ್ಥಿಕ ಸಚಿವರೊಡನೆ ಮಾತನಾಡಿದಾಗ, ಕರ್ನಾಟಕ ರಾಜ್ಯಕ್ಕೆ ಸಮರ್ಪಕವಾದ ಸಹಾಯವನ್ನು ಮಾಡುವ ಭರವಸೆಯನ್ನು ಅವರು ನೀಡಿದ್ದಾರೆ. ರಾಜ್ಯಸರ್ಕಾರದ ಮಂತ್ರಿಗಳೂ ಸಹ ಅನೇಕ ಜಿಲ್ಲೆಗಳಲ್ಲಿ ಈಗಾಗಲೇ ಪ್ರವಾಸ ಮಾಡಿ ಅನುಭವವನ್ನು ಪಡೆದಿದ್ದಾರೆ. ನಮ್ಮ ಎದುರಿಗೆ ಇರತಕ್ಕಂಥ ಭೀಕರವಾದ ಸಮಸ್ಯೆಯನ್ನು ಹೇಗೆ ನಿವಾರಣೆ ಮಾಡಬೇಕು ಎನ್ನುವುದು ಮುಖ್ಯ. ಮಾನ್ಯ ಅಧ್ಯಕ್ಷರ ಮತಕ್ಷೇತ್ರದಲ್ಲೂ ಸಹ ಭೀಕರವಾದ ವಾತಾವರಣವನ್ನು ನಾನು ಕಣ್ಣಾರೆ ಕಂಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆಯ ದಿವಸ ಇದೇ ಸದನದಲ್ಲಿ ಮಾತನಾಡುವಾಗ ಕೇವಲ ಸರ್ಕಾರದಿಂದಲೇ ಸಂಪೂರ್ಣವಾಗಿ ಜನತೆಯನ್ನು ಸಮಾಧಾನ ಮಾಡುವುದು ಸಾಧ್ಯವಿಲ್ಲ, ಆದಕ್ಕೆ ಎಲ್ಲಾ ಶಾಸಕರ ಸಹಾಯವನ್ನು ಅವರು ಕೋರಿ, ಬಹಳ ಉತ್ತಮವಾದಂಥ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ. ಶಾಸಕರು ಅಷ್ಟೇ ಅಲ್ಲ, ಈ ಸದನದ ಮುಖಾಂತರ ಸಮಸ್ತ ಕರ್ನಾಟಕ ರಾಜ್ಯದ ಜನತೆಯಲ್ಲಿ ಸಾಮಾನ್ಯ ಜನತೆಗೆ ನೈತಿಕ ಧೈರ್ಯವನ್ನು ತರುವುದಕ್ಕಾಗಿ ಸಹಕಾರವನ್ನು ಕೋರುವುದು ಅತ್ಯಂತ ಅವಶ್ಯಕವಾಗಿದೆ. ಇಂದು ನಮ್ಮಲ್ಲಿರುವ ಬರಗಾಲವನ್ನು 3-4 ವಿಭಾಗಗಳನ್ನಾಗಿ ಮಾಡಬಹುದು. ಮೊದಲನೆದಾಗಿ, ಆಹಾರ ಸಮಸ್ಯೆ ಕೇಂದ್ರದಲ್ಲೂ ಸಾಕಷ್ಟು ಆಹಾರಧಾನ್ಯ ಇದೆ ರಾಜ್ಯದಲ್ಲೂ ಸಹ ಹಿಂದಿನದಕ್ಕಿಂತ ಇದು ಸಾಕಷ್ಟು ಆಹಾರ ಇದೆ ಎಂದು ಕೇಳುತ್ತಾ ಇದ್ದೇವೆ ಆದರೆ ಇಂದು ಹಂಚುವಿಕೆ ಪದ್ಧತಿ ಕೇವಲ ಷಹರುಗಳಿಗೆ ಮಾತ್ರ ಮೀಸಲಾಗಿಟ್ಟಿದೆ, ನಿನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಅನೇಕ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಿಗೆ ಆಹಾರವನ್ನು ಸರ್ಕಾರ ಕೊಟ್ಟರೂ ಅವರು ಒಯ್ಯಲ್ಪಟ್ಟಿಲ್ಲ ಎಂದು ಹೇಳಿದರು. ಈ ಪರಿಸ್ಥಿತಿಯನ್ನು ನೋಡಿದರೆ ನಿಜವಾಗಿಯೂ ನಮ್ಮ ಹಂಚುವಿಕೆ ಪದ್ಧತಿಯಲ್ಲಿ ತೀವ್ರ ಅಗತ್ಯವಾದ ಬದಲಾವಣೆಯಾಗಬೇಕು ಎನ್ನುವ ಮಾತು ಸ್ಪಷ್ಟವಾಗುತ್ತದೆ. ಆಹಾರವನ್ನು ಸಹಕಾರ ಸಂಘಗಳು ಹಂಚಲಿ, ಮತ್ತಿತರ ಮಾರ್ಕೆಟಿಂಗ್ ಸೊಸೈಟಿಗಳು ಹಂಚಲಿ ಸರ್ಕಾರ ಹಾಗೂ ನಮ್ಮೆಲ್ಲರ ಕರ್ತವ್ಯ ಜನತೆಗೆ ಆಹಾರವನ್ನು ಮುಟ್ಟಿಸುವುದಾಗಿದೆ. ಒಂದು ವೇಳೆ ಸಹಕಾರ ಸಂಘಗಳು ತಮ್ಮ ಕರ್ತವ್ಯ ಮಾಡುವುದರಲ್ಲಿ ಲೋಪವಾದರೆ ಅಲ್ಲ ಬೇರೆ ರೀತಿಯ ಗ್ರಾಹಕರ ಸಂಘಗಳು, ಮತ್ತು ಪಂಚಾಯಿತಿಗಳು ಏನು ಇರುತ್ತವೆ ಅವುಗಳಿಗೆ ಈ ಕಾರ್ಯವನ್ನು ವಹಿಸಿ ಎಲ್ಲಾ ಹಳ್ಳಿಗಳಲ್ಲೂ ಆಹಾರವನ್ನು ಹಂಚುವ ಪದ್ಧತಿಯನ್ನು ಅನುಸರಿಸುವುದು ಒಳ್ಳೆಯದು. ಈ ಕಡೆ ಮಾನ್ಯ ಮುಖ್ಯ ಮಂತ್ರಿಗಳು ಗಮನಹರಿಸುವುದು ಅಗತ್ಯ. ಚಿತ್ರದುರ್ಗ ಮುಂತಾದ ಕಡೆಗಳಲ್ಲಿನ ಆಹಾರದ ಕೊರತೆಯನ್ನು ಮುಖ್ಯ ಮಂತ್ರಿಕಳ ಗಮನಕ್ಕೆ ನಾನು ತಂದಾಗ ಕೂಡಲೇ ಆದಕ್ಕೆ ಸೂಕ್ತ ವ್ಯವಸ್ಥೆ ಮಾಡಿ ನನ್ನ ಕೃತಜ್ಞತೆಗೆ ಪಾತ್ರರಾದರು. ಸುದೈವದಿಂದ ಭಾರತ ದೇಶದಲ್ಲಿ ಬಹಳ ಕಡೆಗೆ ಬರಗಾಲ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಎಷ್ಟೇ ಬರಗಾಲವಿದ್ದರೂ ಆದನ್ನು ನಾವೆಲ್ಲಾ ಕೂಡಿ ಎದುರಿಸುವೆವು ಎನ್ನುವ ಆತ್ಮವಿಶ್ವಾಸ ನಮಗೆ ಇದೆ. ಇದನ್ನು ಪ್ರತಿಯೊಬ್ಬ ಸದಸ್ಯರು ಎಲ್ಲಾ ಜನತೆಗೂ ಮುಟ್ಟಿಸಬೇಕು ಎನ್ನುವುದೇ ನನ್ನ ಕಳಕಳಿಯ ಪ್ರಾರ್ಥನೆ ಅನೇಕ ಹಳ್ಳಿಗಳಲ್ಲಿ ನೀರು ಇಲ್ಲದಂಥ ಪರಿಸ್ಥಿತಿ ಉಂಟಾಗಿದೆ. ಈ ದಿಶೆಯಲ್ಲಿ ನಾವು ನಿಯಮವನ್ನು ಹಾಕಿಕೊಂಡರೂ, ಪ್ರಣಾಳಿಕೆಯಲ್ಲಿ ಎಲ್ಲಾ ಕಡೆಗೂ ನೀರನ್ನು ಕೊಡುತ್ತೇವೆ ಎಂದು ಹೇಳಿದರೂ ಮನುಷ್ಯ ಪ್ರಯತ್ನಕ್ಕೆ ಹೊರತಾಗಿ ಅನೇಕ ಹಳ್ಳಿಗಳಲ್ಲಿ ನೀರು ಇಲ್ಲದಂತಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಅವರ ಹೇಳಿಕೆಯಲ್ಲಿ ಇದಕ್ಕೆ ಉತ್ತರ ಕೊಡುತ್ತಾರೆ ಎಂದು ಭಾವನೆ ಮಾಡುತ್ತೇನೆ. ಏನಾದರು ಪ್ರಯತ್ನಮಾಡಿ ಯಾವ ಹಳ್ಳಿಯಲ್ಲೂ ನೀರಿನ ಅಭಾವ ಆಗದಂತೆ ಕಾರ್ಯಕ್ರಮ ಕೈಗೊಳ್ಳಬೇಕು. ಸಾಲವನ್ನು ಕೊಡುವುದರಿಂದಲೇ ಎಲ್ಲಾ ಮಾಡಿದಂತಾಗುತ್ತದೆ ಎಂದು ಮಾತನಾಡುವುದು ಅಲ್ಲ. ಇದನ್ನು ಒಂದು ಯೋಜನೆಯಿಂದ ತೀವ್ರ ರೀತಿಯಲ್ಲಿ ಕಾರ್ಯಕ್ರಮ

ತೆಗೆದುಕೊಂಡಾಗಲೆ ನಮಗೆ ಸಮಾಧಾನವಾಗುತ್ತದೆ ಎಂದು ಹೇಳದೆ ಗತ್ಯಂತರವಿಲ್ಲ. ಈ ಸ್ಕೇರ್ಸಿಟಿ ವರ್ಕ್ಸ್ ಬಗ್ಗೆ ಮಾನ್ಯ ರೆವಿನ್ಯೂ ಮಿನಿಸ್ಟರ್ ನಿನ್ನೆ ದಿವಸ ಬಹಳ ಸಮಾಧಾನಕಾರಕವಾದಂಥ ರೀತಿಯ ಹೇಳಿಕೆಯನ್ನು ಕೊಟ್ಟಿದ್ದಾರೆ ನಾವು ಸಾಕಷ್ಟು ಕಾರ್ಯಗಳನ್ನು ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಫೈನಾನ್ಸ್ ಮಿನಿಸ್ಟರ್ ಹಣದ ಕೊರತೆ ಆಗದಂತೆ ನೀಡುತ್ತೇವೆ ಎಂದು ಹೇಳಿದರು. ಇದು ನಿಜವಾಗಿಯೂ ಅಭಾವ ಪರಿಸ್ಥಿತಿ ಬಗ್ಗೆ ಸರ್ಕಾರ ತೋರಿಸುವಂಥ ಉತ್ಸುಕತೆಯಾಗಿದೆ. ಇದು ನಿಜವಾಗಿಯೂ ಜನತೆಗೆ ತೀವ್ರಗತಿಯಲ್ಲಿ ಮುಟ್ಟಬೇಕು. ತಡವಾದಷ್ಟೂ ನಮ್ಮ ಪರಿಸ್ಥಿತಿ ಪ್ರಕ್ಷುಬ್ಧವಾಗುವ ಅವಶ್ಯಕತೆ ಇದೆ. ಶ್ರೀಮಾನ್ ಸನದಿಯವರು ಹೇಳಿದಂತೆ ಈ ಪರಿಸ್ಥಿತಿಯನ್ನು ಪ್ರಕ್ಷುಬ್ಧಗೊಳಿಸಲಿಕ್ಕೆ ಪ್ರಯತ್ನ ಮಾಡುವುದು ಬೇಡ-ಅದನ್ನು ಹತೋಟಿಯಲ್ಲಿಡಲು ಎಲ್ಲರೂ ಸಹಕಾರ ನೀಡುವುದಕ್ಕೆ ಪ್ರಯತ್ನ ಪಡಬೇಕಾಗಿದೆ. ಮೈಸೂರು ಜಿಲ್ಲೆಯಲ್ಲಿ, ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರತಿಯೊಂದು ತಾಲ್ಲೂಕುಗಳನ್ನು ನಾನು ಕಣ್ಣಾರೆ ಕಂಡಿರುವುದರಿಂದ ಅಲ್ಲಿನ ಪರಿಸ್ಥಿತಿ ತೀವ್ರ ಪ್ರಕ್ಷುಬ್ಧವಾಗಿದೆ. ಕೇವಲ ನೀರಾವರಿಯಿಂದ ಬೆಳೆಯುತಕ್ಕ ಪ್ರದೇಶಗಳನ್ನು ಬಿಟ್ಟರೆ ಉಳಿದ ಪ್ರದೇಶಗಳು ತೀರ ಪ್ರಕ್ಷುಬ್ಧವಾಗಿವೆ ಧಾರವಾಡದ ಅನೇಕ ಜಿಲ್ಲೆಗಳು ಬರಗಾಲಕ್ಕೆ ತುತ್ತಾಗಿದ್ದರೂ ಈ ಪ್ರಕ್ಷುಬ್ಧದ ಕಹಿಯನ್ನು ನೋಡಿದಾಗ ಹಳೇ ಮೈಸೂರು ಪ್ರದೇಶವಲ್ಲಿ ಹೆಚ್ಚು ಪ್ರಕ್ಷುಬ್ಧತೆ ಇದೆ ಎನ್ನುವುದನ್ನು ನಾನು ಮನಸಾರೆ ಕಂಡಿದ್ದೇನೆ, ಒಪ್ಪಿದ್ದೇನೆ. ಉಳಿದ ಜಿಲ್ಲೆಗಳು ಅಂದರೆ ಬಿಜಾಪುರ ಜಿಲ್ಲೆ, ಮತ್ತು ಧಾರವಾಡದ ಕೆಲವು ಭಾಗಗಳಲ್ಲಿ ಆಗಾಗ ಬರಗಾಲದ ಪರಿಸ್ಥಿತಿ ಇರುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ಒಂದು ಪ್ರದೇಶಕ್ಕೆ ಒಂದು ರೀತಿ ಇನ್ನೊಂದು ಪ್ರದೇಶಕ್ಕೆ ಇನ್ನೊಂದು ರೀತಿ ಮಾಡುವುದು ಬೇಡ. ಸರ್ವರನ್ನೂ ಸಮನಾಗಿ ಕಾಣಬೇಕಾಗಿರುವುದರಿಂದ ಎಲ್ಲಾ ಕಡೆಯೂ ಒಂದೇ ರೀತಿ ಬರಗಾಲ ನಿವಾರಣೆ ಮಾಡುವಂಥ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಈಗ ನಮ್ಮೆದುರಿಗೆ ಇರುವಂಥ ಸಮಸ್ಯೆಗಳಿಗೆ ಹಲವಾರು ಸೂಕ್ತವಾದಂಥ ಯೋಜನೆಗಳನ್ನು ಹಾಕಿದ್ದೀರಿ. ಹೆಚ್ಚುಹೆಚ್ಚಾಗಿ ನಿರಂತರವಾಗಿ ನೀರಾವರಿಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ ಅದೇ ರೀತಿಯಲ್ಲಿ ಕೇಂದ್ರಸರ್ಕಾರಕ್ಕೆ ಈಗಾಗಲೇ ಅನೇಕ ಮನವಿಗಳನ್ನು ಸಲ್ಲಿಸಿದೇನೆ ಅಷ್ಟಾದರೂ ಕೂಡ ಜನತೆಯ ಬರಗಾಲ ವಾತಾವರಣ ಮುಗಿಯುವುದಕ್ಕಾಗಿಲ್ಲ ಅದರಿಂದಾಗಿ ಮಧ್ಯಮ ತರಗತಿಯ ಜನಗಳು ಅಲ್ಲಿ ಇಲ್ಲಿ ಸಾಲಗಳನ್ನು ತೆಗೆದುಕೊಂಡು ತುಂಬಾ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ ತೆಗೆದುಕೊಂಡು ಸಾಲವನ್ನು ಸಹ ಕೊಡುವ ಪರಿಸ್ಥಿತಿಯಲ್ಲಿಯೂ ಅನೇಕರು ಇಲ್ಲ. ಈಗಿನ ಒಂದು ಸನ್ನಿವೇಷದಲ್ಲಿ ಕೆಲವಾರು ಕಾನೂನುಗಳ ಜಾರಿಯಿಂದ ಎಲ್ಲಿಯೂ ಸಾಲಗಳು ಹುಟ್ಟಲಾರದೆ ಜನಗಳಿಗೆ ಇಂತಹ ಒಂದು ಕಠಿಣ ಪರಿಸ್ಥಿತಿ ಈ ಅಭಾವ ಕಾಲದಲ್ಲಿ ಉಂಟಾಗಿದೆ. ಈ ರೀತಿಯಾದ ಒಂದು ಕಷ್ಟಪರಿಸ್ಥಿತಿ ನಿರ್ಮಾಣವಾಗಿ ಇರುವುದರಿಂದ ಇನ್ನು ಮುಂದೆ ಮಧ್ಯಮವರ್ಗದ ತರಗತಿಯವರಿಗೆ ಕೂಲಿಗಳನ್ನು ಹೆಚ್ಚಿಗೆ ಕೊಡಬೇಕಾಗಿದೆ ಅದರಿಂದಾದರೂ ಅವರವರು ತಮ್ಮ ಸಂಸಾರಗಳನ್ನು ಬಿಟ್ಟು ಬೇರೆ ಕಡೆಗೆ ಹೋಗಿ ಹೊಟ್ಟೆ ಹೊರೆಕೊಳ್ಳುವ ಗೋಜಿಗೆ ಹೋಗುವ ಸಂದರ್ಭಗಳು ವಿರಳವಾಗುತ್ತವೆ ಮೂರು ನಾಲ್ಕು ಮೈಲಿಗಳೊಳಗೇ ಜನರಿಗೆ ಕೂಲಿ ಸಿಗುವ ವ್ಯವಸ್ಥೆಮಾಡಬೇಕೆಂದು ನಾನು ಸರ್ಕಾರಕ್ಕೆ ಕಳಕಳಿಯಿಂದ ಮನವಿ ಮಾಡುತ್ತೇನೆ. ಅದರ ಜೊತೆಗೆ ನೀರಾವರಿ ಯೋಜನೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಕೂಡಲೇ ಮಾಡಿಸಬೇಕು, ಎಲ್ಲಿ ಸಾಧ್ಯವಿಲ್ಲವೋ ಅಲ್ಲಲ್ಲಿ ಅಂತಹ ಕಡೆಗಳಲ್ಲಿ ಬಾವಿಗಳನ್ನಾದರೂ ತೆಗೆಸಬೇಕು ಓಪನ್ ವೆಲ್ ತೆಗೆಯಲು ಜನರಿಗೆ ಸಾಕಷ್ಟುಸಾಲ ಕೊಡುವ ವ್ಯವಸ್ಥೆ ಮಾಡಬೇಕು ಸಾಲ ಕೊಡುವ ವಿತರಣೆಯ ಕಾರ್ಯದಲ್ಲಿ ಹೆಚ್ಚಿಗೆ ಗಮನ ಇಡಬೇಕು. ಅಫಾರೆಸ್ಟೇಷನ್ ಸಲುವಾಗಿ ಅನೇಕ ಕೆಲಸ ಕಾರ್ಯಗಳನ್ನು ಕೈಗೊಂಡಿದ್ದರೂ ಕೆಲವು ಕಡೆಗಳಲ್ಲಿ ಸರಿಯಾಗಿ ಕೆಲಸಗಳಾಗದೆ ಸ್ಥಗಿತವಾಗಿವೆ. ಅಫಾರೆಸ್ಟೇಷನ್ ಕೆಲಸಕಾರ್ಯಗಳು ಸರಿಯಾಗಿ ನಡೆಯುತಿದ್ದರೆ ಮುಂದೆ ನಿಜವಾಗಿಯೂ ಬರಗಾಲ ಬವಣೆಯನ್ನು ಪುನ: ಕಾಣುವ ಪರಿಸ್ಥಿತಿ ಬರುತದೆ ಜನಗಳಿಗೆ ಕೂಲಿಗಳು ಸರಿಯಾಗಿ ಸಿಗುವ ವ್ಯವಸ್ಥೆಮಾಡಬೇಕು ನಮ್ಮ ಜಿಲ್ಲೆಯಲ್ಲಿ ಹೆಚ್ಚಿಗೆ ಅಫಾರೆಸ್ಟೇಷನ್ ಮಾಡುವುದಕ್ಕೆ ಹೆಚ್ಚಿನ ಅನುಕೂಲಗಳಿವೆ. ಅದರಲ್ಲಿಯೂ ರಾಣೆಬೆನ್ನೂರ್ ತಾಲ್ಲೂಕಿನಲ್ಲಿ ಇಂತಹ ಬರಗಾಲ ಬಂದಾಗ ಹಿಂದೆ ಹೆಚ್ಚುಹೆಚ್ಚಾಗಿ ಕಾಡಿನ ಸಂಪತ್ತು ಹೆಚ್ಚಿಸಲು ನಾನಾ ಪ್ರಯತ್ನಗಳನ್ನು ಮಾಡಿ ಸರ್ಕಾರ ನಾನಾ ಯೋಜನೆಗಳನ್ನು ಕೈಗೊಂಡು ಬರಗಾಲದ ಬವಣೆಯನ್ನು ನೀಗಿಸಲಾಯಿತು ಅದೇ ರೀತಿಯಲ್ಲಿ ರಾಜ್ಯದ ಎಲ್ಲಾ ಕಡೆಗಳಲ್ಲ ಕಾಡಿನ ಸಂಪತ್ತನ್ನು

ಹೆಚ್ಚಾಗಿ ಬೆಳೆಸಬೇಕು. ಬೆಂಗಳೂರು ಸುತ್ತಲೂ ಸುಮಾರು 20ಮೈಲಿಗಳು ದೂರದಲ್ಲಿ ಒಳ್ಳೊಳ್ಳೆಯ ದೊಡ್ಡ ದೊಡ್ಡ ತೋಟಗಳನ್ನು ಮಾಡಲು ಹಾಗೂ ಉದ್ಯಾನವನಗಳನ್ನು ಬೆಳೆಸಲು ನಾನಾ ಯೋಜನೆಗಳನ್ನು ಹಾಕಿಕೊಂಡಿದ್ದರೂ ಅದು ಇದ ವರಿಗೆ ಇನ್ನೂ ಪೂರ್ತಿಯಾಗಿ ಕಾರ್ಯಗತವಾಗಿಲ್ಲ ಮಾನ್ಯ ಮುಖ್ಯಮಂತ್ರಿಗಳು ಸ್ವತ ಇತ್ತಕಡೆಗೆ ತಮ್ಮ ಗಮನವನ್ನು ಹರಿಸಬೇಕು ಬರಗಾಲದ ಅವಧಿಯಲ್ಲಿ ಜನಗಳಿಗೆ ಖಾಯಂ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಇಲ್ಲದಿದ್ದರೆ ನಾವು ಏನು ಕಲಶ ಸಾಧಿಸಿದಂತಾಗುತ್ತದೆ, ಇನ್ನು ಬಹು ಮುಖ್ಯವಾಗಿ ಸರ್ಕಾರ ಮಾಡಬೇಕಾದ ಕೆಲಸವೆಂದರೆ ದನಗಳಿಗೆ ಹುಲ್ಲು ಸಾಕಷ್ಟು ಒದಗಿಸುವ ಯೋಚನೆ ಮಾಡಬೇಕು ಜನರು ಈಗಾಗಲೆ ನಾನಾ ಕಡೆಗಳಿಂದ ಸರ್ಕಾರಕ್ಕೆ ಹೆಚ್ಚು ಹುಲ್ಲು ಒದಗಿಸುವ ಕ್ರಮಗಳನ್ನು ಕೈಗೊಳ್ಳಬೇಕೆಂದು ಮನವಿಗಳು ಬಂದಿವೆ ಆದರೂ ದನಗಳಿಗೆ ಸಾಕಷ್ಟು ಮೇವು ದೊರಕುತಾ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳದಂತೆ ಈ ಒಂದು ವಿಚಾರದಲ್ಲಿ ಸರ್ಕಾರ ಅಸಮರ್ಥರಾಗದೆ ಎಲ್ಲಾ ಕಡೆಯೂ ಹೆಚ್ಚು ಹೆಚ್ಚಿಗೆ ಹುಲ್ಲು ಸರಬರಾಜು ಮಾಡುವ ಕ್ರಮವನ್ನು ಕೈಗೊಳ್ಳುತ್ತಿದ್ದಾರೆ ಆದರೆ ಎಲ್ಲಾ ಕಡೆಯೂ ಒಂದೇ ಸಾರಿ ಹುಲ್ಲು ತಂದುಹಾಕುತ್ತೇವೆಂದು ಆಶ್ವಾಸನೆಯನ್ನು ಈಗಲೇ ಕೊಡುವುದಕ್ಕಾಗುವುದಿಲ್ಲ ಸುದೈವದಿಂದ ಚೆನ್ನಾಗಿ ಮಳೆ ಕೆಲವು ಪ್ರದೇಶಗಳಲ್ಲಿ ಆಗಿದೆ ಎಲ್ಲಾ ಕಡೆಯೂ ಚೆನ್ನಾಗಿ ಮಳೆ ಯಾದರೆ ಹುಲ್ಲು ಹೆಚ್ಚಿಗೆ ಬೆಳೆಯಲು ಅನುಕೂಲವಾಗುತ್ತದೆ. ದನಗಳಿಗೂ ಸಹ ಸಂಪ್ರಪ್ತಿಯಾಗುತ್ತದೆ ಇನ್ನು ಕೆಲವು ಫಾರೆಸ್ಟ್‌ಗಳ ಪ್ರದೇಶಗಳಲ್ಲಿ ಕೆಲವಾರು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಯೋಜನೆಯನ್ನು ಸರ್ಕಾರ ಕೂಡಲೇ ಕೈಗೊಳ್ಳಬೇಕು ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೊರೇಷನ್‌ಗೆ ಹಿಂದೆ ಒಂದು ಸ್ಕೀಮನ್ನು ಮಂಜೂರುಮಾಡಲಾಗಿತ್ತು ಅದು ಈಗ ಏನಾಗಿದೆಯೆಂಬುದು ನನಗೆ ಗೊತ್ತಾಗಲಿಲ್ಲ ದಾಂಡೇಲಿ ಪ್ರದೇಶದಲ್ಲಿ ಬೆಳೆಯುವ ಹುಲ್ಲನ್ನು ಇಡೀ ರಾಜ್ಯಕ್ಕೆ ಹಂಚುವುದಕ್ಕಾಗುತ್ತದೆ ಅದು ಹಾಗೆಯೇ ಅಲ್ಲಿ ಉಳಿದಿವೆ ತೀವ್ರವಾಗಿ ಅದನ್ನೆಲ್ಲಾ ಎಲ್ಲಾ ಕಡೆಯೂ ಹಂಚಬೇಕೆಂದು ಅದಕ್ಕೆ ಸರಿಯಾದ ಹಾಗೂ ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಅರಣ್ಯಶಾಖಾ ಸಚಿವರಿಗೆ ಹೇಳುತ್ತೇನೆ. ಆದರೆ ನನಗೆ ತಿಳಿದಮಟ್ಟಿಗೆ ದನಗಳಿಗೆ ಆಹಾರ ಒದಗಿಸುವ ಕಾರ್ಯ ಮಾತ್ರ ಬಹಳ ಕಠಿಣವಾದುದಾದರೂ ಅದರ ಬಗ್ಗೆ ಸರ್ಕಾರ ಹೆಚ್ಚಿಗೆ ಗಮನ ಕೊಡಬೇಕು. ಆ ವಿಚಾರ ಪ್ರತಿಯೊಬ್ಬ ಸದಸ್ಯರಿಗೂ ಸೇರಿದ್ದು ಅವರ ಜವಾಬ್ದಾರಿಯೂ ಇವರಲ್ಲದೆ ಸದಸ್ಯರೆಲ್ಲರೂ ತಂತಮ್ಮ ತಾಲ್ಲೂಕುಗಳಲ್ಲಿ ಯಾವಾಗ ದನಗಳಿಗೆ ಮೇವಿನ ಕೊರತೆಯಾಗುತ್ತದೆಯೊ ಅಂತಹ ಸಂದರ್ಭಗಳಲ್ಲಿ ಕೂಡಲೇ ಸರ್ಕಾರಕ್ಕೆ ತಿಳುಹಿಸಿ ಸೂಕ್ತ ಕಾರ್ಯಕ್ರಮವನ್ನು ಅಲ್ಲಿ ತೆಗೆದು ಕೊಳ್ಳಲು ಸಹಕಾರಿಯಾಗಬೇಕು. ಆದರೆ ಸರ್ಕಾರವೇ ಎಲ್ಲವನ್ನೂ ಮಾಡಬೇಕೆಂದರೆ ಬಹಳ ಕಷ್ಟ ವಾಗುತ್ತದೆ ಅದಕ್ಕೆಲ್ಲಾ ಸದಸ್ಯರ ಸಹಕಾರವು ಅತ್ಯಗತ್ಯವಾಗಿದೆ ದನಗಳಿಗೆ ಆಹಾರವನ್ನು ಒದಗಿಸುವ ವಿಷಯದಲ್ಲಿ ಸರ್ಕಾರ ಎಷ್ಟೇ ಆಸಕ್ತಿ ವಹಿಸಿದರೂ ಇನ್ನೂ ಸಾಲದಾಗಿದೆ. ಹೆಚ್ಚು ಹೆಚ್ಚಾಗಿ ಮುತುವರ್ಜಿ ವಹಿಸಿ ಎಲ್ಲಾ ಕಡೆಗಳಲ್ಲಿಯೂ ಅವುಗಳ ಒಂದು ಕಷ್ಟವನ್ನು ಪರಿಹಾರಮಾಡಬೇಕು. ಬಹು ಮುಖ್ಯವಾಗಿ ಎಲ್ಲೆಲ್ಲಿ ನೀರು ದೊರಕುತ್ತದೋ ಅಲ್ಲೆಲ್ಲಾ ಹುಲ್ಲನ್ನು ಬೆಳೆಸಬೇಕು ದನಗಳ ಆಹಾರವನ್ನು ಬೆಳೆಸುವುದಕ್ಕೆ ಸೂಕ್ತ ಕ್ರಮ ಅಗತ್ಯ ಯಾವ ರೀತಿಯಲ್ಲಿ ಜನಗಳಿಗೆ ಆಹಾರವನ್ನು ಸರಬರಾಜು ಮಾಡಲು ಸರ್ಕಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತದೋ ಅದೇ ರೀತಿಯಲ್ಲಿ ದನಗಳಿಗೂ ಆಹಾರವನ್ನು ಒದಗಿಸಲು ತಕ್ಕ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಬೇಕು ಪರಿಪುಷ್ಟ ವಾದ ಆಹಾರವನ್ನು ಬೆಳೆಯುವುದಕೆ ಸರ್ಕಾರ ಗಮನ ಕೊಡಬೇಕಾಗಿದೆ ಪ್ರತಿಯೊಂದು ಜಿಲ್ಲೆಯ ಲ್ಲಿಯೂ ತಾಲ್ಲೂಕುಗಳಲ್ಲಿಯೂ ಹಾಗೂ ಹಳ್ಳಿಗಳಲ್ಲಿಯೂ ಆಹಾರಧಾನ್ಯಗಳ ವಿತರಣೆಯ ಕಾರ್ಯ ದಲ್ಲಿ ಸ್ವಲ್ಪಮಟ್ಟಿಗೆ ಲೋಪದೋಷಗಳು ಕಂಡಬರುತ್ತಿವೆ ಅದನ್ನು ಸರಿಮಾಡಬೇಕು. ಬರಗಾಲ ಪರಿಸ್ಥಿತಿ ಉಂಟಾದಾಗ ಗ್ರಾಮಗಳಲ್ಲಿರತಕ್ಕ ಜನರಿಗೆ ಕೂಲಿ ಕೆಲಸಗಳನ್ನಾದರೂ ಸಿಗುವ ವ್ಯವಸ್ಥೆ ಮಾಡಬೇಕು. ಆಗ ಜನರಿಗೆ ಜೀವನಕ್ಕೆ ಒಂದು ದಾರಿ ಮಾಡಿಕೊಟ್ಟಂತಾಗುತ್ತದೆ ಅಧಿಕಾರಿಗಳಿಗೆ ಹೆಚ್ಚಿಗೆ ಅಧಿಕಾರವನ್ನು ಕೊಟ್ಟು ಅವರ ಮೂಲಕ ಉತ್ತಮವಾಗಿ ಆಹಾರ ಹಂಚಿಕೆಯ ಕೆಲಸವನ್ನು ಮಾಡಬೇಕು. ಕೇವಲ 3 4-5 ಮೈಲಿಗಳೊಳಗೆ ಕೂಲಿ ಕೆಲಸ ಸಿಗುವಂತೆ ಮಾಡಬೇಕು. ಇಲ್ಲದಿದ್ದರೆ ಅವರಿಗೆ ಬಹಳ ಕಷ್ಟವಾಗುತ್ತದೆ, ಆದ್ದರಿಂದ ಈ ಸದನದ ಸದಸ್ಯರೆಲ್ಲರೂ ಸರ್ಕಾರಕ್ಕೆ ಬೆಂಬಲ ವನ್ನು ಕೊಟ್ಟು ನಾನಾ ರೀತಿಯಲ್ಲಿ ಧನಸಹಾಯ ಮಾಡಲು ಸಂಘಸಂಸ್ಥೆಗಳ ಮೂಲಕ ಕೆಲಸಮಾಡಲ ಮುಂದೆ ಬರಬೇಕು ಕೇಂದ್ರಸರ್ಕಾರದಿಂದಲೂ ರಾಜ್ಯ ಸರ್ಕಾರ ಇದಕ್ಕಾಗಿ ಹೆಚ್ಚಿನ ನೆರವನ್ನು ಪಡೆಯಬೇಕು ಸುದೈವದಿಂದ ಇತ್ತೀಚೆಗೆ ಎಲ್ಲಾ ಸದಸ್ಯರೂ ಕೂಡ ತಂತಮ್ಮ ಶಕ್ತಿಮೀರಿ

ಸಹಾಯ ಮಾಡಲು ಹತ್ತಿದ್ದಾರೆ ರಾಜ್ಯದಲ್ಲಿ ತಮ್ಮದಂಡನ್ನು ಕಳುಹಿಸಿದ್ದಾರೆ ಎರಡನೆಯದಾಗಿ ಇನ್ನೂ ಆ ರೀತಿ ಕಳುಹಿಸುವ ಪ್ರಯತ್ನವನ್ನೂ ಸಹ ಮಾಡುತ್ತಿದ್ದಾರೆ. ಇಡೀ ದೇಶದಲ್ಲೆಲ್ಲಾ ಕೇವಲ ಕೇರಳ ಸರ್ಕಾರಕ್ಕೆ ಅಲ್ಲಿನ ಜನತೆ ಸಂಪೂರ್ಣವಾಗಿ ಬೆಂಬಲ ಕೊಟ್ಟು ಸರ್ಕಾರದ ಕೈ ಬಲಪಡಿಸಿ ಸರ್ಕಾರದಿಂದ ಬರಗಾಲ ನಿವಾರಣೆಗೋಸ್ಕರ ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಈ ಕಾರ್ಯವನ್ನು ಸಫಲಗೊಳಿಸುವಂತೆ ಪ್ರಯತ್ನಮಾಡಬೇಕು. ಬರಗಾಲ ಪರಿಸ್ಥಿತಿಯನ್ನು ಸುಧಾರಿಸುವ ಕಾರ್ಯವನ್ನು ನಿಧಾನಮಾಡಬಾರದು. ಇನ್ನು ಮುಂದೆ ಎಲ್ಲಾ ಮನರಂಜನೆಯ ಕಾರ್ಯಕ್ರಮವನ್ನು ಕೈಗೊಳ್ಳುವುದನ್ನು ಬಿಟ್ಟು ಮುಂದೆಯಾದರೂ ಜನತಾಸೇವೆಯೇ ಜನಾರ್ಧನ ಸೇವೆಯೆಂಬುದಾಗಿ ಇವರು ಕೀರ್ತಿಯನ್ನು ಪಡೆಯಲಿ ಎಂಬುದಾಗಿ ಹಾರೈಸಿ ಮಾನ್ಯ ಅಧ್ಯಕ್ಷರು ನನಗೆ ಇಲ್ಲಿ ಮಾತನಾಡಲು ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್); ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಕಂದಾಯ ಮಂತ್ರಿಗಳು ನಮ್ಮ ಎದುರಿಗೆ ಕೆಲವು ಸವಿಸ್ತಾರವಾದಂಥ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಕೆಲವಾರು ವಿಚಾರಗಳನ್ನು ನಾನು ನೋಡಿದ್ದೇ ಅದರೆ ಸರ್ಕಾರಕ್ಕೆ ಈ ರೀತಿಯಾಗಿ ತಪ್ಪು ಅಂಕಿಅಂಶಗಳನ್ನು ಅಧಿಕಾರಿಗಳಾಗಿರುವವರು ಒದಗಿಸಿದ್ದಾರೆಂದು ನನಗೆ ಅರ್ಥವಾಗುತ್ತದೆ. ತುಂತುರು ಮಳೆ ಬಂದಿರತಕ್ಕದನ್ನು ನಾವು ಕೆಲವು ದೊಡ್ಡದೊಡ್ಡ ಮದುವೆ ಸಮಾರಂಭಗಳಲ್ಲಿ ಪನ್ನೀರು ಹಾಕಿದ ಹಾಗೆ ಆಗಿದೆಯೆಂದು ಈಗ ತಿಳಿಯಬೇಕಾಗಿದೆ. ಈ ರೀತಿಯಾಗಿ ಮಳೆ ಬಂದಿರುವುದನ್ನು ಬಹಳ ಚೆನ್ನಾಗಿ ಮಳೆಯಾಗಿದೆಯೆಂಬುದಾಗಿ ತಪ್ಪು ಅಂಕಿಅಂಶಗಳನ್ನು ಕೊಟ್ಟಿದ್ದಾರೆ ದುರಾದೃಷ್ಟದಿಂದ ಏನಾದರೂ ಬೆಂಗಳೂರಿನಲ್ಲಿ ಮಳೆ ಬಂದರೆ ಎಲ್ಲಾ ರೈತರೂ ತಂತಮ್ಮ ಹೊಲಗಳಿಗೆ ಹೆಚ್ಚಿಗೆ ನೀರು ಬಂದಿದೆ ಬೆಳೆ ಚೆನ್ನಾಗಿ ಆಗುತ್ತವೆಂದು ನಿರೀಕ್ಷಣೆಮಾಡುತ್ತಾರೆ ಅದರಂತೆಯೂ ಮಾನ್ಯ ಮಂತ್ರಿಗಳೂ ಮತ್ತು ಅಧಿಕಾರಿಗಳು ಅಭಿಪ್ರಾಯಪಡುತ್ತಾರೆಂದು ಹೇಳಿದರೆ ಅದೇನೂ ತಪ್ಪಾಗಲಾರದು.

ಒಬ್ಬ ಸದಸ್ಯರು.—ವರ್ತಮಾನ ಪತ್ರಿಕೆಗಳಲ್ಲಿ ಬರುವುದು ಗೊತ್ತಾಗುವುದಿಲ್ಲವೇ ?

ಶ್ರೀ ಎಚ್. ಹುಚ್ಚಮಾಸ್ತಿಗೌಡ. ರೇನ್ ಗೇಜ್ ಬೇರೆ ಇದೆ.

ಶ್ರೀ ಸಿ. ಬೈರೇಗೌಡ ಮಾನ್ಯ ಮಂತ್ರಿಗಳು ಲಾಲ್‌ಬಾಗ್‌ನಲ್ಲಿ ಹಾಗೂ ಕಬ್ಬನ್ ಪಾರ್ಕ್‌ನಲ್ಲಿ ಎಷ್ಟು ಮಳೆಯಾಗಿದೆಯೆಂದು ಅದರಿಂದ ಕಂಡುಹಿಡಿಯಬಹುದು. ಕೋಲಾರದಲ್ಲಿ ಎಷ್ಟು ಮಳೆಯಾಗಿದೆ ಮತ್ತು ಇತರ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಮಳೆಯಾಗಿದೆ ಎಂಬುದನ್ನು ಯಾವ ರೇನ್ ಗೇಜ್‌ನಿಂದ ನೋಡುತ್ತಾರೆಯೋ ಗೊತ್ತಿಲ್ಲ ಕೆಲವು ಕಡೆಗಳಲ್ಲಿ ಆ ರೇನ್‌ಗೇಜ್ ಆಧಾರದಿಂದಲೆ ಇಷ್ಟಿಷ್ಟು ಮಳೆ ಇಂತಹ ಪ್ರದೇಶಗಳಲ್ಲಿ ಆಗಿದೆಯೆಂದು ತಿಳಿಯುತ್ತಾರೆ. ಆ ರೀತಿ ಮಾಡದೆ ಬೆಂಗಳೂರಿನಲ್ಲಿ ಮಳೆ ಯಾಗಿದ್ದಕ್ಕೆ ಒಂದು ರೇನ್ ಗೇಜ್‌ನಿಂದ ಎಲ್ಲಾ ಕಡೆಯೂ ಮಳೆ ಬಿದ್ದಿದೆಯೆಂದು ಪರಿಗಣಿಸುವುದು ಸರಿಯಲ್ಲ. ಎಲ್ಲಾ ಕಡೆಯೂ ಈಗ ಸುಭಿಕ್ಷ ಇದೆಯೆಂದು ಕಳುಹಿಸಿರುವ ಅಧಿಕಾರಿಗಳ ವರದಿಯ ಬಗ್ಗೆ ಕೂಲಂಕಷವಾಗಿ ವಿಚಾರಮಾಡಬೇಕು ಜನ ಈಗಾಗಲೇ ಕಂಗಾಲಾಗುವ ಪರಿಸ್ಥಿತಿಯಲ್ಲಿ ಇದ್ದಾರೆ ನಾನು ಇತರ ಜಿಲ್ಲೆಗಳ ವಿಷಯವಾಗಿ ಏನು ಹೇಳದೆ ಕೇವಲ ನನ್ನ ಕ್ಷೇತ್ರವಾದ ಕೋಲಾರ ಜಿಲ್ಲೆಯ ವಿಷಯವನ್ನು ಮಾತ್ರ ಹೇಳುತ್ತೇನೆ ಇವತ್ತು ಬರಗಾಲವೆಂದು ಏನು ಹೇಳುತ್ತೇವೆಯೋ ಅದು ಹೆಚ್ಚಿಗೆ ಕೋಲಾರ ಜಿಲ್ಲೆಯಲ್ಲಿ ಎಂದು ಹೆಸರಿಸಬಹುದು. ಆದ್ದರಿಂದ ಬರಗಾಲಕ್ಕೆ ಕೋಲಾರ ಜಿಲ್ಲೆ ಮೊದಲನೆಯದಾಗಿದೆ ಇನ್ನು ಗೌರಿಬಿದನೂರು ತಾಲ್ಲೂಕ್ ಒಂದು ಮಾತ್ರ ಡ್ರೈಬೆಲ್ಟ್ ಏರಿಯಾದಲ್ಲಿ ಮಾತ್ರವಿದೆ ಅಲ್ಲಿಯೂ ಕೂಡ ದೊಡ್ಡ ದೊಡ್ಡ ಅಣೆಕಟ್ಟುಗಳಿವೆ. ಅಪ್ಪರ್ ಕೃಷ್ಣಾ ಮತ್ತು ಕೆ ಆರ್ ಎಸ್. ಗಳಿಂದ ಎಷ್ಟು ಎಕರೆ ಜಮೀನುಗಳಿಗೆ ನೀರಾವರಿಯಾಗುತ್ತದೆಂಬುದನ್ನು ಸಹ ಮೊದಲನೆಯ ಪಟ್ಟಿಯಲ್ಲಿ ತಿಳಿಸಿಲ್ಲ ಎರಡನೆಯ ಸಾರಿ ಮಾಡಿರುವ ಪಟ್ಟಿಯಲ್ಲಿ 9 ತಾಲ್ಲೂಕುಗಳ ಪೈಕಿ ಕೇವಲ ನಮ್ಮ ಜಿಲ್ಲೆಯ ಎರಡು ತಾಲ್ಲೂಕುಗಳನ್ನು ಮಾತ್ರ ಅದರಲ್ಲಿ ಸೇರಿಸಿದ್ದಾರೆ ಅವು ಗುಡಿಬಂಡೆ ಮತ್ತು ಶ್ರೀನಿವಾಸಪುರ ಅಲ್ಲಿನ ಜನರನ್ನು ಕೆಲಸಕ್ಕಾಗಿ ಆಂಧ್ರಕ್ಕೆ ಕಳುಹಿಸುವ ಏರ್ಪಾಡು ಮಾಡಿದ್ದಾರೆ. ಇದರಿಂದ ಅಲ್ಲಿನ ಜನ ಮಾಡಿದ ಅಪಕಾರವಾದರೂ ಏನು ತಿಳಿಸಬೇಕು.

10-30 A.M.

ನಾವು ಮೊದಲಿನಿಂದಲೂ ನಮ್ಮ ರಾಜ್ಯದಲ್ಲಿ ಅನೇಕ ಜಿಲ್ಲೆಗಳು ಪದೇಪದೇ ಕ್ಷಾಮಕ್ಕೆ ತುತ್ತಾಗುವುದರಿಂದ ಇದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಮಾಡಬೇಕೆಂದು ಹೇಳುತ್ತಾ ಬಂದಿದ್ದೇವೆ ಆದರೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಕೇವಲ 27 ಗ್ರಾಮಗಳಲ್ಲಿ ಮಾತ್ರ ಬರಗಾಲದ ಸಮಸ್ಯೆ ಇದೆಯೆಂದು ಹೇಳುತ್ತಾ ಇದ್ದಾರೆ ನನ್ನ ಜೊತೆಯಲ್ಲಿ ಮಾನ್ಯ ಮಂತ್ರಿಗಳು ಮುಳುಬಾಗಲಿಗೆ ಬಂದರೆ ಅವರಿಗೆ ಕಣ್ಣಾರೆ ಅಲ್ಲಿನ ಪರಿಸ್ಥಿತಿಯನ್ನು ತೋರಿಸುತ್ತೇನೆ. ಇಲ್ಲಿಯವರೆಗೂ ಯಾವ ಮಂತ್ರಿಗಳು ನಮ್ಮ ತಾಲ್ಲೂಕಿನಲ್ಲಿ ಪ್ರವಾಸ ಮಾಡಿಲ್ಲ ಜೊತೆಗೆ ಕೋಲಾರ ಜಿಲ್ಲೆಯಲ್ಲಿ ಮಾಡಿಲ್ಲವೆಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ ಪ್ರಾರಂಭದಲ್ಲಿ ಮಾತ್ರ ಮಾನ್ಯ ರೆವಿನ್ಯೂ ಮಂತ್ರಿಗಳು ಬಂದು ಗಂಟೆಕಾಲ ನನ್ನ ಜೊತೆಯಲ್ಲಿ ಇದ್ದು ಅಲ್ಲಿನ ಅಧಿಕಾರಿಗಳಿಗೆ ಸೂಕ್ತವಾದ ಆದೇಶಗಳನ್ನು ಕೊಟ್ಟು ಬಂದರು ಅವರು ಏನು ಆದೇಶ ಕೊಟ್ಟು ಬಂದರು ಅದು ಏನಾದರೂ ಒಂದು ಅಂಶ ಕಾರ್ಯಗತವಾಗಿದೆಯೋ ? ಕಾರ್ಯಗತವಾಗಿದ್ದರೆ ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಎಷ್ಟು ಜನರಿಗೆ ಕೆಲಸಗಳನ್ನು ಕೊಟ್ಟಿದ್ದಾರೆ ಮೊದಲು ಸುಮಾರು 20-6-976 ರಲ್ಲಿ ಕೋಲಾರ ಜಿಲ್ಲೆಯಲ್ಲಿ 36 ಗ್ರಾಮಗಳಿಗೆ ಕುಡಿಯುವ ನೀರಿನ ಅಭಾವ ಇದೆ ಎಂದು ಹೇಳಿದ್ದರು ಅದನ್ನಾದರೂ ಪೂರೈಸಿದ್ದಾರೆಯೋ ಇಲ್ಲ ನನಗೆ ಒಂದು ಸರ್ಕಾರದಿಂದ ಕಾಗದವನ್ನು ಕಳುಹಿಸಿರುತ್ತಾರೆ. ಆರ್‌ಡಿಸಿ 27 ವಿಆರ್‌ಡಬ್ಲ್ಯೂ 76 ದಿನಾಂಕ: 20 6 1976 ಅದರಲ್ಲಿ 36 ಗ್ರಾಮಗಳಲ್ಲಿ ಬೋರ್‌ವೆಲ್ ಹಾಕಬೇಕೆಂದು ಆಜ್ಞೆ ಮಾಡಿದ್ದಾರೆ ಆದರೆ ಅದರಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಹಾಕಿದ್ದಾರೆಂದು ನನಗೆ ದಯಮಾಡಿ ತಿಳಿಸಬೇಕು ಅಲ್ಲಿನ ಅಧಿಕಾರಿಗಳು ನನಗೆ ತಿಳಿಸಿದ ಪ್ರಕಾರ 10-16 ಗ್ರಾಮಗಳಿಗೆ ಹಾಕಿದ್ದೇವೆಂದು ಹೇಳಿದರು. ನಾನು ಕೇಳುವುದು ಇಷ್ಟೇ ಕುಡಿಯುವ ನೀರಿನ ಅಭಾವವನ್ನಾದರೂ ಪೂರೈಸಿದ್ದಾರೆಯೋ ಇದನ್ನು ನಾನು ಅನೇಕ ಸಂದರ್ಭಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಕೂಡಾ ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಿ ಹೇಳಿದರೂ ಕೂಡ ಇಲ್ಲಿಯವರೆಗೆ ಕೆಲಸಗಳು ನಡೆಯದೆ ಇದ್ದರೆ ಇದಕ್ಕೆ ಏನು ಮಾಡುವುದು. ತಾವು ನೋಡಿದರೆ ವಿರೋಧಪಕ್ಷದವರು ನಮ್ಮ ಜೊತೆಯಲ್ಲಿ ಸಹಕರಿಸಬೇಕು. ಎಂದು ನಾವು ಯಾರ ಪರವಾಗಿ ಬಂದು ಇಲ್ಲಿ ನಿಂತಿದ್ದೇವೆ ಅವರ ಪರವಾಗಿ ಅಷ್ಟು ಕೆಲಸವನ್ನು ಮಾಡದೆ ಇದ್ದರೆ ಹೇಗೆ ತಾವೇ ಇದಕ್ಕೆ ಉತ್ತರ ಹೇಳಿ ನಾವು ಯಾವಾಗಲೂ ಸರ್ಕಾರದ ಜೊತೆಯಲ್ಲಿ ಸಹಕಾರ ಮಾಡುವುದಕ್ಕೆ ತಯಾರಿದ್ದೇವೆ. ನಾವು ಕೊಟ್ಟಂತಹ ಸಹಕಾರ ಮತ್ತು ಸಲಹೆಗಳನ್ನು ಪುರಸ್ಕರಿಸುತ್ತಾ ಇಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ಸಣ್ಣ ನದಿ ಹರಿಯುತ್ತದೆ ಆದರೆ ಮಾನ್ಯ ಸ್ನೇಹಿತರಾರ ಇದನ್ನು ತಪ್ಪು ಕಲ್ಪನೆ ಮಾಡಿಕೊಳ್ಳಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ ಅದು ಏನೆಂದರೆ ನದಿ ಎಂದು ಹೆಸರಿಗೆ ಮಾತ್ರ ಹೇಳಬೇಕೇ ಹೊರತು ಅದು ಯಾವಾಗಲೂ ಹರಿಯುವುದಿಲ್ಲ. ವರ್ಷದಲ್ಲಿ ಕೇವಲ ಎರಡು-ಮೂರು ದಿನಗಳು ಮಾತ್ರ ಹರಿಯುವಂತಹ ನದಿ ಅದರ ಹೆಸರು ಪಾಲಾರ್ ಎಂದು. ಆದರೆ ಆ ನದಿಯ ಹತ್ತಿರದ ಭೂಮಿಯಲ್ಲಿ ಯಥೇಚ್ಛವಾಗಿ ನೀರಿನ ಜಲವಿದೆಯೆಂದು ತಿಳಿದಿದೇನೆ. ಮಾನ್ಯ ನಗರಾಳ್ ಮತ್ತು ಮಾನ್ಯ ಹುಚ್ಚಮಾಸಿಗೌಡರು ಬಂದಾಗ ಅವರಿಗೆ ತೋರಿಸಿದ್ದೇನೆ, ಅಲ್ಲಿ ಭೂಮಿಯಲ್ಲಿ ನೀರು ಇದೆ ಅದನ್ನು ಏನಾದರೂ ಮಾಡಿ ಸಿಕ ತಕ್ಕಂಥ ನೀರನ್ನು ತೆಗೆಯುವುದಕ್ಕೆ ಪ್ರಯತ್ನಿಸಬೇಕು. ಅದರಿಂದ 2-3 ಫರ್ಲಾಂಗ್‌ವರೆಗೂ ಯಾರ ಭೂಮಿ ಇದೆಯೋ ಆ ರೈತರಿಗೆ ಸಹಾಯ ಮಾಗಿಸುವುದಕ್ಕೆ ಸಾಧ್ಯವೆಂದು ಹೇಳಿದರೂ ಇಲ್ಲಿಯವರಿಗೆ ಅಧಿಕಾರಿಗಳು ಯಾವ ಕಾರ್ಯಕ್ರಮ ತೆಗೆದುಕೊಂಡಿಲ್ಲ ಇನ್ನು ಕೆಲವು ರೈತರೂ ಭೂ ಅಭಿವೃದ್ಧಿ ಬ್ಯಾಂಕುಗಳಿಂದ ಸಾಲ ತೆಗೆದುಕೊಂಡು ಪಂಪ್ ಸೆಟ್‌ಗಳನ್ನು ಹಾಕಬೇಕೆಂದು ಇದ್ದರೂ ಕೂಡ ಅವರ ಬಾವಿಗಳಿಗೆ ವಿದ್ಯುತ್ ಇಲಾಖೆಯವರು ವಿದ್ಯುತ್ ಕೊಟ್ಟಿಲ್ಲ ಸುಮಾರು ಎರಡು ವರ್ಷಗಳಿಂದ ಬರೀ ವಿದ್ಯುತ್ ಕಂಬಗಳು ನಿಂತಿವೆಯಷ್ಟೆ ಈಗಾಗಲೇ ರೈತರು ತೆಗೆದುಕೊಂಡ ಸಾಲವನ್ನು ಆದರಿಂದ ಯಾವ ಸಹಾಯವನ್ನು ತೆಗೆದುಕೊಳ್ಳದೆ ಎರಡು ಮೂರು ಕಂತುಗಳನ್ನು ವಾಪಸ್ ಕೊಟ್ಟಿದ್ದಾರೆ ಈ ರೀತಿಯಾದರೆ ರೈತರ ಸ್ಥಿತಿ ಏನಾಗುತ್ತದೆಂದು ಯೋಚನೆ ಮಾಡಬೇಕು. ನಾವು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ಅಲ್ಯೂಮಿನಿಯಮ್ ಕಂಡಕ್ಟರ್ಸ್ ಇಲ್ಲ ಎಂದು ಹೇಳುತ್ತಾರೆ ರೈತರು ಸಾಲ ತೆಗೆದುಕೊಂಡು ಬರೀ ಬಡ್ಡಿ ಕೊಟ್ಟು ತೊಂದರೆಗೆ ಈಡಾಗಿದ್ದಾರೆ. ಇಂತಹ ಪರಿಸ್ಥಿತಿಯಿಂದ ಅವರನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಬಹಳ ನಮ್ರತೆಯಿಂದ ಕೇಳಿಕೊಳ್ಳುತ್ತೇನೆ.

ಇವತ್ತು ಈ ಕ್ಷಾಮ ಪರಿಸ್ಥಿತಿಯಲ್ಲಿ ಎಷ್ಟೋ ಕುಟುಂಬಗಳಿಗೆ ಇದರಿಂದ ಸಹಾಯ ಪಡೆಯುವುದಕ್ಕೆ ಸಾಧ್ಯವಿತ್ತು. ನಾನು ಅನೇಕ ಸಾರಿ ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಫೋನ್ ಮಾಡಿದರೆ ನಮಗೆ ಸಿಗುವ ಉತ್ತರ ಅವರು ಊರಿನಲ್ಲಿ ಇಲ್ಲ ಡೆಲ್ಲಿಗೆ ಹೋಗಿದ್ದಾರೆಂದು ನನಗೆ ಇದು ಅರ್ಥವಾಗುವುದಿಲ್ಲ 2 ವರ್ಷಗಳಿಂದ ಬರೀ ಕಂಬಗಳು ನಿಂತಿವೆಯೆಂದರೆ ಜನರ ಪರಿಸ್ಥಿತಿ ಏನಾಗಬೇಕು, ಆಂಧ್ರದಲ್ಲಿಯೂ ಇದೇ ಪರಿಸ್ಥಿತಿ ಒದಗಿದಾಗ ಅವರು ಒಂದು ರೂರಲ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿದ್ದಾರೆ ಅದರಿಂದ ಹೆಚ್ಚಿನ ಸಹಾಯವನ್ನು ಜನರಿಗೆ ಒದಗಿಸುತ್ತಿದ್ದಾರೆಂದು ಕೇಳಿದ್ದೇನೆ ಈ ತರದ ಒಂದು ಬೋರ್ಡ್ ನಮ್ಮಲ್ಲಿಯೂ ರಚನೆ ಮಾಡಬೇಕೆಂದು ಅನೇಕ ಸಾರಿ ಒತ್ತಾಯ ಮಾಡಿದ್ದೇನೆ ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುವಾಗ ಯಾವ ಸ್ಥಿತಿಯಲ್ಲಿ ಈ ವಿಷಯ ಇದೆಯೆಂದು ದಯಮಾಡಿ ತಿಳಿಸಬೇಕು, ನಮ್ಮ ಬಯಲು ಸೀಮೆಗಳು ಪದೇಪದೇ ಕ್ಷಾಮಕ್ಕೆ ತುತ್ತಾಗುವುದರಿಂದ ಈ ರೀತಿಯ ಯಾವುದಾದರೂ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕೆಂದು ಹೇಳುತ್ತೇನೆ. ನಮಗೆ ಇಲ್ಲ ಕುಡಿಯುವುದಕ್ಕೆ ನೀರು ಇಲ್ಲದೆ ಇರತಕ್ಕಂಥ ಸಮಯದಲ್ಲಿ ಯಾರ ಮಾತನ್ನು ಕೇಳಿ ನಮ್ಮ ಕೃಷ್ಣರಾಜಸಾಗರದಿಂದ ತಮಿಳು ನಾಡಿಗೆ ನೀರು ಕೊಡುವುದಕ್ಕೆ ಒಪ್ಪಿದ್ದಾರೆಂದು ಕೇಳಿದೆ. ಇದು ನಮಗೆ ಅರ್ಥವಾಗುವುದಿಲ್ಲ ಇಷ್ಟನ್ನು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು. ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಉತ್ತರ ಕೊಡಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ. ?

ಶ್ರೀ ಎನ್. ಹುಚ್ಚಮಾಸ್ತಿಗೌಡರು :—ಅನೇಕ ಸದಸ್ಯರು ಅನೇಕ ಶಂಕೆಗಳನ್ನು ವ್ಯಕ್ತಪಡಿಸಿದ್ದಾರೆ ಮತ್ತು ಸಲಹೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಕನಿಷ್ಟ ನನಗೆ ಒಂದು ಗಂಟೆ ಕಾಲವಕಾಶ ಬೇಕಾಗುತ್ತದೆ.

† ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ನಮ್ಮ ರಾಜ್ಯದ ಈ ಪರಿಸ್ಥಿತಿಯಲ್ಲಿ ನಮ್ಮ ಪಕ್ಷದ ಅಧ್ಯಕ್ಷರು ಹೇಳಿದಹಾಗೆ ಈಗ ಬಂದಿರತಕ್ಕಂಥ ಬರಗಾಲ ಪರಿಸ್ಥಿತಿ ಎಲ್ಲರಿಗೂ ಅರ್ಥವಾಗಿದೆ, ಸರ್ಕಾರಕ್ಕೂ ಅರ್ಥವಾಗಿದೆ, ಜನತೆಗೂ ಅರ್ಥವಾದೆ ಜನತೆಯ ಪ್ರತಿನಿಧಿಗಳಿಗೂ ಅರ್ಥವಾಗಿದೆ. ಇದು ಎಲ್ಲರಿಗೂ ಅರ್ಥವಾಗಿದ್ದರೂ ಸಹಿತ ನಮ್ಮ ದೊಡ್ಡಬಳ್ಳಾಪುರದ ತಾಲ್ಲೋಕಿನಲ್ಲಿ ಈಗತಾನೇ ಕಳೆದ ಕೆಲವು ದಿವಸಗಳಿಂದ ನಮಗೆ ಮಳೆ ಬಂದಿದೆ. ಆದರಿಂದ ಜನರಿಗೆ ಸ್ವಲ್ಪ ಸಂತೋಷವನ್ನು ಉಂಟುಮಾಡಿದೆ. ಆದರೆ ಇದು ಹೇಗೆ ಎಂದರೆ ಸತ್ತವರಿಗೆ ಅನ್ನವನ್ನು ಇಟ್ಟಂತೆ. ಪೈರುಗಳೆಲ್ಲಾ ಗೆದ್ದಲು ಹಿಡಿದು ಹೋಗಿರುವಾಗ ಈ ಮಳೆಯಿಂದ ಏನು ಪ್ರಯೋಜನವಾಗಿದೆ ಎಂದು ನಾವು ತಿಳಿದುಕೊಳ್ಳಬಹುದು. ಈಗ ಏನಾಗಿದೆ ಎಂದರೆ ಈ ಮಳೆಯಿಂದ ಒಂದು ತಂಪಾದ ವಾತಾವರಣವನ್ನು ಉಂಟುಮಾಡಿದೆ. ಆದರೆ ಅದರಿಂದ ಪೈರು ಪಚ್ಚೆಗಳಿಗೆ ಯಾವ ರೀತಿಯಿಂದಲೂ ಸಹಾಯವಾಗಿಲ್ಲವೆಂದು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಈಗ ಬಂದಿರುವ ಸಮಸ್ಯೆ ಏನು ಎಂದರೆ ಜನರನ್ನು ಅದರಲ್ಲೂ ವ್ಯವಸಾಯ ಕೂಲಿಗಾರರನ್ನು ಮತ್ತು ದನಗಳನ್ನು ಸುಧಾರಿಸುವುದೇ ಮುಖ್ಯ ಪ್ರಶ್ನೆಯಾಗಿದೆ. ಇವತ್ತು ದನಗಳನ್ನು ಸುಧಾರಿಸಲಿಕ್ಕೆ ಆಗುತ್ತದೆಯೋ ಇಲ್ಲವೋ ಎನ್ನುವ ಅನುಮಾನವಿದೆ. ಮಂಡ್ಯ ಜಿಲ್ಲೆಯಿಂದ ನೆಲ್ಲು ಹುಲ್ಲನ್ನು ತಂದು ಬೆಂಗಳೂರು ಜಿಲ್ಲೆಯವರಿಗೆ ಕೊಡತಕ್ಕಂಥ ವ್ಯವಸ್ಥೆ 3 ವರ್ಷಗಳ ಹಿಂದೆಯೂ ಇತ್ತು. ಅದನ್ನು ಸರ್ಕಾರದವರು ಮಾಡಬಾರದು ಏತಕ್ಕೆಂದರೆ ಹುಲ್ಲನ್ನು ಅಲ್ಲಿಂದ [illegible] ಲಾರಿಗಳಲ್ಲಿ ತಂದು ಮಾರಿದರೆ ಅದರ ಬೆಲೆ ಜಾಸ್ತಿಯಾಗುತ್ತದೆ. ಅಲ್ಲಿಯ ಲಕ್ಷಾಂತರ ಜನರಿಗೆ ಹುಲ್ಲನ್ನು ದೊರಕಿಸಲಿಕ್ಕೆ ಸಾಧ್ಯವಾಗುವುದಿಲ್ಲವಾದುದರಿಂದ ಈ ಯೋಜನೆಯನ್ನು ಬಿಡಬೇಕು. ಈಗ ಅಲ್ಲಿಯೇ ಹುಲ್ಲನ್ನು ಬೆಳೆಯಿಸುವುದಕ್ಕೆ ತಾವು ಸಹಾಯ ಮಾಡಬೇಕು ಇದು ಬಹಳ ಮುಖ್ಯವಾದದ್ದು. ಈಗ ತಾವು ಕೊಡ ತಕ್ಕಂಥ ಹಣ ಕ್ರಮವಾಗಿ ಒಂದು ವಾರವೂ ನಿಲ್ಲಿಸದ ಹಾಗೆ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ನನ್ನ ತಾಲ್ಲೂಕಿನಲ್ಲಿ 1 ಲಕ್ಷದ 75 ಸಾವಿರ ಜನರಿದ್ದಾರೆ. 1 ಲಕ್ಷ ಜನರಿಗೆ ಮಾತ್ರ ತಾವು ಕೂಲಿ ಒದಗಿಸಿದ್ದೀರಿ ವಾರಕ್ಕೊಮ್ಮೆ ಅವರಿಗೆ ಕೆಲಸವನ್ನು ಕೊಟ್ಟರೆ ಅವರು ಇನ್ನು 2 ತಿಂಗಳು ಅವರ ಗತಿ ಏನು ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಇವತ್ತು ಇರುವ ಅಲ್ಪ ವೇಳೆಯಲ್ಲಿ ಹಲವಾರು ಸಲಹೆಗ

ಕೊಡಲು ಇಚ್ಛೆಪಡುತ್ತೇನೆ. ಮಾನ್ಯ ಮಂತ್ರಿಗಳಾದ ಶ್ರೀ ನಾಗರಾಳ್‌ರವರಿಗೆ ನಾವು ಆಭಾರಿಯಾಗಿದ್ದೇವೆ ನನ್ನ ತಾಲ್ಲೂಕಿನಲ್ಲಿ 4 ಕೆರೆಗಳ ಕೆಲಸವನ್ನು ಪ್ರಾರಂಭ ಮಾಡಿಸಿದ್ದಾರೆ. ಅಲ್ಲಿಯ ಜನರಿಗೆ ನೀರು ಸಿಕ್ಕುವ ಹಾಗೆ ಮಾಡಿದ್ದಾರೆ. ದುರಾದೃಷ್ಟವಶಾತ್ ಇನ್ನು ಕೆಲವು ಹೋಬಳಿಯವರಿಗೆ ಕುಡಿಯಲು ನೀರು ಇಲ್ಲವೇ. ಇರುವುದರಿಂದ ಅಂಥ ಕಡೆಗೂ ಕೂಡ 7 ಕೆರೆಯನ್ನು ಕಟ್ಟಿಸಿ ಕೊಡುತ್ತೇವೆಂಬ ಆಶ್ವಾಸನೆಯನ್ನು ಕೊಟ್ಟಿದ್ದಾರೆ ಆದರೆ ಅದಕ್ಕೆ ಇನ್ನೂ ಅವರಿಂದ ಹುಕ್ಕುಂ ಬಂದಿಲ್ಲ. ಈ ತಿಂಗಳಾದರೂ ತಾವು ಹುಕ್ಕುಂ ಕೊಟ್ಟರೆ ಇನ್ನು 4 ತಿಂಗಳು ಸುಧಾರಿಸಬಹುದು. ಹೀಗೆ ಮಾಡುವುದರಿಂದ ಡಿಸೆಂಬರ್‌ನಿಂದ ಮುಂದಿನ ಮೇ ವರೆಗೆ ಸುಧಾರಿಸಬಹುದು ಎನ್ನುವುದನ್ನು ಸರ್ಕಾರದವರು ಗಮನದಲ್ಲಿಡಬೇಕು. ಜನಗಳಿಗೆ ಕೆಲಸ ಒದಗಿಸುವುದಲ್ಲದೇ ದನಗಳಿಗೆ ನೀರನ್ನು ಒದಗಿಸತಕ್ಕಂಥ ಒಂದು ವ್ಯವಸ್ಥೆ ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ 3 ನೂರು ಕೆರೆಯಲ್ಲಿಯೂ ಕೂಡ ಇವತ್ತು ಕುಡಿಯುವುದಕ್ಕೂ ನೀರಿಲ್ಲ, ಆದುದರಿಂದ ದನಗಳಿಗೆ ಮೊದಲು ನೀರನ್ನು ಒದಗಿಸಬೇಕಾದದು ಬಹಳ ಮುಖ್ಯ. ಪ್ರತಿಯೊಂದು ಕೆರೆಯಲ್ಲೂ 10-12 ಅಡಿ ಆಳ ತೆಗೆದರೆ ನೀರು ಬರತಕ್ಕಂಥ ಸ್ಥಳಗಳಿವೆ ಎಂದು ಈಗಾಗಲೇ ಸರ್ಕಾರದವರ ಗಮನಕ್ಕೆ ತಂದಿದ್ದೇವೆ ತಾವು ಅಲ್ಲಿ ಸ್ವಲ್ಪ ಹಣವನ್ನು ಖರ್ಚು ಮಾಡಿದರೆ ದನಗಳಿಗೆ 4 ತಿಂಗಳವರೆಗೆ ಕುಡಿಯುವ ನೀರು ದೊರಕಿದಂತಾಗಿದೆ. ಎರಡನೆಯದಾಗಿ ಅರ್ಕಾವತಿ ನದಿ ನಮ್ಮ ತಾಲ್ಲೂಕಿಗೆ 12 ಮೈಲು ದೂರದಲ್ಲಿದೆ. ಅದರಲ್ಲಿ ನೀರು ಇಲ್ಲದೆ ಒಣಗಿ ಹೋಗಿದೆ. ಆದರೆ 10-15 ಅಡಿ ಆಳ ತೆಗೆದರೆ ನೀರು ದೊರೆಯುತ್ತದೆ ಆದರಿಂದ ಅವರ ಅಕ್ಕ ಪಕ್ಕದಲ್ಲಿರತಕ್ಕಂಥವರು ಹುಲ್ಲು ಮತ್ತು ಜೋಳವನ್ನು ಬೆಳೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ಸರ್ಕಾರದವರ ಅಡಚಣೆ ಇದೆ. ಅರ್ಕಾವತಿ ನೀರು ಬೆಂಗಳೂರಿಗೆ ಬರುವುದರಿಂದ ಅವಲ್ಲಿ ಯಾರೂ ಗುಣಿ ತೆಗೆಯುವ ಹಾಗಿಲ್ಲ. ಆದುದರಿಂದ ಈಗಿನ ಪರಿಸ್ಥಿತಿಯಲ್ಲಿ ಮಾತ್ರ ಅಲ್ಲಿ ಗುಣಿಯನ್ನು ತೆಗೆಯಲು ಅಪ್ಪಣೆ ಕೊಟ್ಟು ಅಲ್ಲಿಂದ ನೀರು ಹರಿಯಲು ಅವಕಾಶ ಮಾಡಿಕೊಟ್ಟರೆ 3 ತಿಂಗಳವಟ್ಟಿಗಾದರೂ ಸಾವಿರಾರು ಜನಗೆ ಕುಡಿಯುವ ನೀರಿನ ಅನುಕೂಲವನ್ನು ಮಾಡಿಕೊಟ್ಟಂತಾಗುತ್ತದೆ ಇದರ ಬಗ್ಗೆ ತಾವು ಒಂದು ಸ್ಪೆಷಲ್ ಆರ್ಡರನ್ನು ಹೊರಡಿಸಿದರೆ ಅರ್ಕಾವತಿ ನೀರಿನಿಂದ ಮುಂದಿನ ಮೇ ತಿಂಗಳವರೆಗೂ ನೀರನ್ನು ಹಾಯಿಸಬಹುದು. ಇದಕ್ಕೆ ತಾವು ಒಂದು ವಿಶೇಷ ಹುಕುಂನ್ನು ಹೊರಡಿಸಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನ ಸಾಸಲು ಹೋಬಳಿಯಾಗಿದ್ದರೂ ಕೂಡ, ನಮ್ಮ ಸ್ವಾತಂತ್ರ್ಯ ದೊರೆತು 30 ವರ್ಷಗಳಾಗಿದ್ದರೂ ಕೂಡ ಅಲ್ಲಿ ಎಲೆಕ್ಟ್ರಿಸಿಟಿ ಇಲ್ಲ, ಕಂಬಗಳನ್ನು ಮಾತ್ರ ಎಳೆದಿದ್ದಾರೆ, ಕೇಳಿದರೆ ವೈರ್ ಇಲ್ಲವೆಂದು ಹೇಳಿ ಸರ್ವಿಸ್ ಕೊಟ್ಟಿಲ್ಲ. ಇದನ್ನಾದರೂ ತಾವು ಕೂಡಲೇ ಮಾಡಿಸಿಕೊಟ್ಟರೆ ಅಲ್ಲ ಅವರು ಪಂಪ್‌ಸೆಟ್‌ಗಳನ್ನು ಹಾಕಿಕೊಂಡು ನೀರನ್ನು ಹಾಯಿಸಿಕೊಂಡು ಅದರಿಂದ ನೂರಾರು ಸಂಸಾರಗಳು ಬದುಕುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ತಕ್ಷಣ ಮಾಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇಲ್ಲಿಯವರೆಗೂ ತಾವು ಉತ್ತರ ಕೊಟ್ಟ ಹಾಗೆ ಕೊಡದೆ ತಕ್ಷಣವೇ ಅಲ್ಲಿಗೆ ಸರ್ವಿಸ್ ಕೊಡಿಸತಕ್ಕಂಥ ವ್ಯವಸ್ಥೆ ಮಾಡಿದರೆ ಬಹಳ ಜನರಿಗೆ ಅವರ ಮನಸ್ಸಿಗೆ ಶಾಂತಿ, ನೆಮ್ಮದಿ ದೊರಕಿದಂತಾಗುತ್ತದೆ ಎನ್ನುವ ಒಂದು ಅಭಿಪ್ರಾಯವಿರುವುದರಿಂದ ದಯವಿಟ್ಟು ತಾವು ಆ ಕೆಲಸವನ್ನು ಮಾಡಿಕೊಡಬೇಕು.

ಇನ್ನೊಂದು ನಮ್ಮ ರಾಜ್ಯದಲ್ಲಿ ಇಲ್ಲದೇ ಇರತಕ್ಕಂಥ ಒಂದು ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿ ಉಂಟಾಗಿದೆ ಕಳೆದ 3 ತಿಂಗಳುಗಳಿಂದ ಕಾಲರ ನಮ್ಮ ತಾಲ್ಲೂಕಿನಲ್ಲಿ ಶುರುವಾಗಿದೆ. ಅದಕ್ಕೆ ಏನು ಕಾರಣವೂ ಗೊತ್ತಿಲ್ಲ 15 ಜನರಿಗೆ ಅಟ್ಯಾಕ್ ಆಗಿದೆ, ಅದರಲ್ಲಿ 10 ಜನರು ಸತ್ತಿದ್ದಾರೆ. ಅದಕ್ಕೆ ಏನು ಕಾರಣವೆಂದು ನಾನು ಮತ್ತು ನಮ್ಮ ಸ್ನೇಹಿತರು ಕೂತು ಮಾತನಾಡಿದಾಗ ಅವಕ್ಕೆ ಎರಡು ಮುಖ್ಯವಾದ ಕಾರಣಗಳು ಕಂಡು ಬಂದವು. ಮೊದಲನೆಯದಾಗಿ ಕುಡಿಯುವ ನೀರಿಲ್ಲದೇ ಇರುವುದು, ಎರಡನೆಯದಾಗಿ ಒಳ್ಳೆಯ ತಿಂಡಿ ತೀರ್ಥ ಇಲ್ಲದೆ ಹಳಸಿದ್ದು, ಕೊಳೆತ ಹಣ್ಣುಗಳನ್ನು ತಿಂದು ಕಾಲರಕ್ಕೆ ಈಡಾಗಿದ್ದಾರೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಬರಗಾಲದ ಪರಿಸ್ಥಿತಿಯಲ್ಲಿ ಸರ್ಕಾರದವರು ಮೊದಲು ಅದನ್ನು ಹತೋಟಿಯಲ್ಲಿ ತರಬೇಕು. ಸರ್ಕಾರದ ಹೆಲ್ತ್ ಇಲಾಖೆಯವರು ಸ್ವಲ್ಪ ಹೆಚ್ಚಿನ ನಿಗಾ ವಹಿಸಿ ಅಲ್ಲಿ ಕೆಲಸ ಮಾಡಬೇಕಾಗಿದೆ.

ಮೊದಲು ಅಲ್ಲಿಗೆ ಬಂದಿರತಕ್ಕಂಥ ಹಣ್ಣುಗಳು ಶುದ್ಧವಾಗಿವೆ ಎಂಬುದನ್ನು ನೋಡಬೇಕು ಒಂದು ವೇಳೆ ಅಲ್ಲಿಗೆ ಹಣ್ಣುಗಳು ಬಾರದಿದ್ದರೂ ಪರವಾಗಿಲ್ಲ. ಶುಚಿಯಾದ ಆಹಾರ ಪದಾರ್ಥಗಳು ದೊರೆಯುವಂತೆ ವ್ಯವಸ್ಥೆ ಮಾಡಬೇಕು. ಯಾವಾಗ ಜನಗಳಿಗೆ ತಿನ್ನುವುದಕ್ಕೆ ಒಳ್ಳೆಯ ಆಹಾರ ಪದಾರ್ಥಗಳು ಸಿಕ್ಕುವುದಿಲ್ಲವೋ ಆಗ ಸಿಕ್ಕಿದ್ದನ್ನು ತಿನ್ನುವುದಕ್ಕೆ ಶುರು ಮಾಡುತ್ತಾರೆ ಆಗ ಅವರು ಕಾಲರಕ್ಕೆ ಅಟ್ಯಾಕ್ ಆಗುತ್ತಾರೆ. ಹೆಚ್ಚಿಗೆ ಬಡವರೇ ಕಾಲರಕ್ಕೆ ತುತ್ತಾಗಿದ್ದಾರೆ ಎಂಬುದನ್ನು ನಾವು ಪರಿಶೀಲನೆ ಮಾಡಿದ್ದೇವೆ. ಅದು ದುರಾದೃಷ್ಟವಶಾತ್ ನಮ್ಮ ತಾಲ್ಲೂಕಿನಲ್ಲಿ ಕಂಡು ಬಂದಿದೆ. ಸರ್ಕಾರ ಇದಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದ ಹಾಗೆ ನಮ್ಮ ತಾಲ್ಲೂಕಿನಲ್ಲಿ ಕ್ಷಾಮ ಪರಿಹಾರದ ಕಾಮಗಾರಿಗಳನ್ನು ವಾರ ವಾರವೂ ಅವರಿಗೆ ಕೆಲಸ ಕೊಡುವಂಥ ವ್ಯವಸ್ಥೆ ಮಾಡಬೇಕು. ಇನ್ನು ನಿಮ್ಮ ಎರಡು ಇಲಾಖೆಯವರು ಏನೂ ಕೆಲಸ ಮಾಡುತ್ತಿಲ್ಲ ಮೊದಲನೆಯದಾಗಿ ಅರಣ್ಯ ಇಲಾಖೆಯವರು ಮತ್ತು ಸಾಯಿಲ್ ಕನ್‌ಸರ್ವೇಷನ್ ಇಲಾಖೆಯವರು. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಅಲ್ಲಿ ಕೆಲಸ ಮಾಡಬೇಕಾಗಿದೆ ಆದರೆ ಅದನ್ನು ಮಾಡಿಸುತ್ತಿಲ್ಲ ಈ ಅಫಾರೆಸ್ಟೇಷನ್ ಮತ್ತು ಸಾಯಿಲ್ ಕನ್‌ಸರ್ವೇಷನ್ ಕೆಲಸಗಳನ್ನು ಮತ್ತು 7 ಹೊಸ ಕೆರೆಗಳನ್ನು ಕಟ್ಟಿಸಲು 306 ಪ್ರಕಾರ ಹಣವನ್ನು ಕೊಡುತ್ತೇವೆಂದು ಹೇಳಿದ್ದರು. ಆದುದರಿಂದ ಹಳೆಯ ಕೆರೆಗಳ ರಿಪೇರಿ ಕೆಲಸವನ್ನು ಮತ್ತು ಹೊಸ ಕೆರೆಗಳನ್ನು ಕಟ್ಟಿಸುವ ಕೆಲಸವನ್ನೂ ಮಾಡಿಕೊಟ್ಟರೆ ನಮ್ಮ ಜನಗಳಿಗೆ ಸಮಾಧಾನ ಉಂಟಾಗುತ್ತದೆಂದು ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿರುವ ಜಿಲ್ಲಾಧಿಕಾರಿಗಳು ಬಹಳ ಒಳ್ಳೆಯ ದಕ್ಷ ಅಧಿಕಾರಿಗಳಿದ್ದಾರೆ. ನಿಷ್ಠಾವಂತ ಅಧಿಕಾರಿಗಳಿದ್ದಾರೆ. ಅವರು ನಮ್ಮ ತಾಲ್ಲೂಕಿನಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಲು ತಾವು ಸ್ವಲ್ಪಮಟ್ಟಿಗಾದರೂ ಧನ ಸಹಾಯ ಮಾಡಿದರೆ ನಮ್ಮ ತಾಲ್ಲೂಕ್ ಇನ್ನು 5 ತಿಂಗಳವರೆಗೆ ಹೇಗಾದರೂ ಸುಧಾರಿಸಬಹುದೆಂದು ಇಷ್ಟು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ.ಬಿ. ಪಾಟೀಲ್.—(ಬೈಲಹೊಂಗಲ್) ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಕಂದಾಯ ಮಂತ್ರಿಗಳವರು ಮಂಡಿಸಿದಂಥ ನಿರ್ಣಯದ ಮೇಲೆ ಎರಡು ಮಾತನ್ನು ಆಡಲು ಬಯಸುತ್ತೇನೆ.

ಬಯಲು ಹೊಂಗಲ, ಖಾನಾಪುರ ಮತ್ತು ಬೆಳಗಾಂ ಈ 3 ತಾಲ್ಲೂಕ್‌ಗಳನ್ನು ಬಿಟ್ಟು ಉಳಿದ ಎಲ್ಲಾ ತಾಲ್ಲೂಕ್‌ಗಳಲ್ಲಿ ಮಳೆಯಾಗಿಲ್ಲವೆಂದು ಡೆಪ್ಯುಟಿ ಕಮಿಷನರ್‌ರವರು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಇದೇ ತಿಂಗಳು 6ನೇ ತಾರೀಖು ಡೆಪ್ಯುಟಿ ಕಮಿಷನರ್‌ರವರು ಬರಗಾಲದ ಬಗ್ಗೆ ಮೀಟಿಂಗ್ ಕರೆದಿದ್ದಾಗ ನಮಗೆ ಮಳೆಯಾಗಿರುವ ಬಗ್ಗೆ ಒಂದೊಂದು ಕಾಪೀಸ್‌ನ್ನು ಕೊಟ್ಟಿದ್ದಾರೆ. ಬಯಲು ಹೊಂಗಲು ನಲ್ಲಿ ಮಳೆಯಾಗಿರುವಂಥ ಸ್ಟ್ಯಾಟಿಸ್‌ಟಿಕ್‌ನ್ನು ನೋಡಿದರೆ ಜೂನ್ ನಿಂದ ಜುಲೈ ಈ ಎರಡು ತಿಂಗಳ ವರೆಗೆ ಮಳೆಯಾಗಿದೆ. ಆಗಸ್ಟ್ ಮತ್ತು ಸೆಪ್ಟೆಂಬರ್ ಮತ್ತು ಅಕ್ಟೋಬರ್ ಈ 3 ತಿಂಗಳಿಲ್ಲ ನಾರ್ಮಲ್ ಆಗಿ ಎಷ್ಟು ಮಳೆ ಬರಬೇಕೋ ಅದರ ಅರ್ಧದಷ್ಟು ಕೂಡ ಮಳೆ ಬಾರದೇ ಇರುವುದರಿಂದ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಬರುವಂಥ ಜೋಳದ ಪೀಕು ಬರಲಿಲ್ಲ. ಎರಡನೇಯ ಪೀಕು ಕೂಡ ಬರಲಿಲ್ಲ. ಎಲ್ಲಾ ಹೊರಟು ಹೋಗಿ ಬಿಟ್ಟಿದೆ. ಬಯಲು ಹೊಂಗಲು ನಲ್ಲಿ ಮಳೆಯಾಗಿದೆ ಆದರೆ ವಿಶೇಷವಾಗಿ ಆಗಿಲ್ಲ. ಆದರೆ ಕಲೆಕ್ಟರ್‌ರವರ ರಿಪೋರ್ಟ್‌ನ್ನು ನೋಡಿದರೆ ಬಹಳ ವ್ಯಥೆ ಎನ್ನಿಸುತ್ತದೆ. ಅದೇ ಬೇರೆ ತಾಲ್ಲೂಕ್‌ಗಳ ರೇನ್ ಫಾಲ್‌ನ್ನು ನೋಡಿದರೆ ರಾಯಭಾಗ್‌ನಲ್ಲಿ 46 ಮಿಲಿ ಮೀಟರ್ ಮಳೆಯಾಗುವುದು ಜೂನ್ ನಲ್ಲಿ 79 ಮಿಲಿ ಮೀಟರ್ ಆಗಿದೆ ಜುಲೈನಲ್ಲಿ ಕೂಡ ಜಾಸ್ತಿಯಾಗಿ ಮಳೆಯಾಗಿದೆ. ಆದರೂ ಕೂಡ ಆ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶವೆಂದು ಸಾರಿದ್ದಾರೆ. ಅದೇ ಬಯಲು ಹೊಂಗಲದ ಲೆಕ್ಕವನ್ನು ನಾವು ನೋಡುವುದಾದರೆ ಜೂನ್ ನಲ್ಲಿ 10 ಮಿಲಿ ಮೀಟರ್ ಮಳೆಯಾಗಬೇಕಾದಂಥದ್ದು 117 ಆಯಿತು ಅದರ ಜುಲೈ ನಲ್ಲಿ 130 ಮಿಲಿ ಮೀಟರ್ ಆಗಬೇಕಾದಂಥದ್ದು 94 ಮಿಲಿ ಮೀಟರ್ ಆಯಿತು ಮುಂದೆ ಆಗಸ್ಟ್ ತಿಂಗಳಲ್ಲಿ 90 ಮಿಲಿ ಮೀಟರ್ ಆಗುವಂಥದ್ದು 12 ಮಿಲಿ ಮೀಟರ್ ಬಂತು, ಸೆಪ್ಟೆಂಬರ್ ನಲ್ಲಿ 105ಕ್ಕೆ 39 ಬಂತು, ಈ ರೀತಿ ಅಂಕಿ ಅಂಶಗಳು ಇರುವಾಗ ಬೈಯಲು ಹೊಂಗಲು ತಾಲ್ಲೂಕನ್ನು ಏತಕ್ಕೆ ಬರಗಾಲ ಪೀಡಿತ ಪ್ರದೇಶವೆಂದು ಸಾರ

ಲಿಲ್ಲವೆಂದು ಬಹಳ ವ್ಯಥೆಯಾಗುತ್ತಿದೆ. ಬಯಲು ಹೊಂಗಲು ತಾಲ್ಲೂಕಿನಲ್ಲಿ ಭತ್ತ ಮತ್ತು ಜೋಳ ಒಣಗಿ ಹೋಗಿದೆ ತಾವು ಬಂದು ನೋಡಿದರೆ ಗೊತ್ತಾಗುತ್ತದೆ. ಆಹಾರಧಾನ್ಯ ಅವರಿಂದ ನಮಗೆ ಸಿಗಲಿಕ್ಕೆ ಇಲ್ಲ. ಆದುದರಿಂದ ಕೂಡಲೇ ಡೆಪ್ಯುಟಿ ಕಮಿಷನರ್ ರವರು ಬಯಲು ಹೊಂಗಲು ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಸಾರುವ ಬಗ್ಗೆ ತಾವು ಕೂಡಲೇ ಡೈರೆಕ್ಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಬರಗಾಲ ಪೀಡಿತ ಪ್ರದೇಶವೆಂದು ಸರ್ಕಾರದವರು ಸಾರಿ ಅಲ್ಲಿ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. 1972-73 ರಲ್ಲಿ ಬಯಲು ಹೊಂಗಲು ತಾಲ್ಲೂಕಿನಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಗೊಂಡಿದ್ದರು ಅದನ್ನು ಈಗ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಲಪ್ರಭಾ ನದಿಗೆ ಯಾತ ನೀರಾವರಿ ಕಾರ್ಯಗಳನ್ನು ಮಾಡುತ್ತಿದ್ದರು. ಆದರೆ, ಸ್ವಲ್ಪ ದಿವಸಗಳಿಂದ, ಅದರ ಕೆಲಸವನ್ನು ತಡೆಹಿಡಿದಿದ್ದಾರೆ. ಈಗ ಅಲ್ಲಿ ತೆಗೆದುಕೊಳ್ಳಲಾಗಿರುವ ಯಾತ ನೀರಾವರಿ ಯೋಜನೆಗೆ ಇನ್ನೆರಡು ಯಾತ ನೀರಾವರಿ ಕೆಲಸಗಳನ್ನು ತೆಗೆದುಕೊಳ್ಳಲು ಸಾಧ್ಯವಿದೆ. ಅವುಗಳನ್ನು ಕೈಗೊಂಡರೆ, ಹೊಸೂರು, ಎಸ್. ಹೊಳೆ ಭಾಗದ ಜನರಿಗೆ ಶಾಶ್ವತವಾಗಿ ನೀರು ಸರಬರಾಜು ಮಾಡಲು ಸಾಧ್ಯವಿದೆ. ಆದುದರಿಂದ, ಮಾನ್ಯ ಕಂದಾಯ ಮಂತ್ರಿಗಳು ಅಲ್ಲಿ ಇನ್ನೆರಡು ಯಾತ ನೀರಾವರಿ ಕೆಲಸಗಳನ್ನು ಪ್ರಾರಂಭ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಮಾನ್ಯ ಸಚಿವ ನಾಗರಾಳ ಅವರು, ಅಲ್ಲಿಗೆ ಆರನೆಯ ತಾರೀಖು ಬಂದಿದ್ದಾಗ, ನಾವು ಅವರಿಗೊಂದು ಯಾದಿಯನ್ನು ಕೊಟ್ಟಿದ್ದೇವೆ. ಆ ಯಾದಿಯಲ್ಲಿ, ಆ ಭಾಗಗಳಲ್ಲಿ ಯಾವ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ತಿಳಿಸಿದ್ದೇವೆ. ಆ ಯಾದಿಯನ್ನು ನಮ್ಮ ಜಿಲ್ಲಾ ಶಾಸಕರೆಲ್ಲಾ ಸೇರಿ ಕೊಟ್ಟಿರುವುದಾಗಿದೆ. ಆದುದರಿಂದ ಬಯಲು ಹೊಂಗಲದ ಕೆಲಸ ಕಾರ್ಯಗಳನ್ನೂ ಮತ್ತು ಮಲಪ್ರಭಾ ನದಿಯ ಯಾತ ನೀರಾವರಿ ಕಾರ್ಯಗಳನ್ನೂ ಕೈಗೊಂಡು ಅಲ್ಲಿರುವ ಮಳೆಯಾಗದ ಭಾಗಗಳಲ್ಲಿ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಕೃಷ್ಣರಾವ್.—(ಗೌರಿಬಿದನೂರು) ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿರುವ ಕ್ಷಾಮ ಪರಿಸ್ಥಿತಿ ಕುರಿತು ಮಾನ್ಯ ಸಚಿವರು ಬಹಳ ಮಟ್ಟಿಗೆ ವಿಸ್ತಾರವಾಗಿ ತಿಳಿಸಿದ್ದಾರೆ. ನಾನು, ನಮ್ಮ ಕೋಲಾರ ಜಿಲ್ಲೆಯ ಲ್ಲ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆ ಚಿತ್ರದುರ್ಗ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಗಳು, ತಮಗೆ ತಿಳಿದಿರುವ ಹಾಗೆ ಮೊದಲಿನಿಂದಲೂ ಕ್ಷಾಮಕ್ಕೆ ತುತ್ತಾಗಿರುವ ಜಿಲ್ಲೆಗಳು. ಈ ಜಿಲ್ಲೆಗಳಲ್ಲಿ ಒಂದು ಸಲ ಕ್ಷಾಮ ಬಂದಿತೆಂದರೆ ಅದರಿಂದ ಸುಧಾರಿಸಿಕೊಳ್ಳಲು ಪುನಃ ಐದು ವರ್ಷಗಳು ಬೇಕಾಗುತ್ತದೆ. ಹೀಗಿರತಕ್ಕ ಪರಿಸ್ಥಿತಿಯಲ್ಲಿ, ಸುಮಾರು ಅರವತ್ತು ವರ್ಷಗಳ ಹಿಂದೆ, ಅಂದರೆ ನಳನಾಮ ಸಂವತ್ಸರದಲ್ಲಿ ಬಂದಿದ್ದಂತಹ ಭೀಕರ ಕ್ಷಾಮ ಮತ್ತೆ 197–77ನೇ ಸಾಲಿನಲ್ಲಿ ಮರುಕಳಿಸಿದೆ. ಹೀಗಾಗಿ ನಮ್ಮ ರಾಜ್ಯದ ಜನತೆ ಬಹಳ ಕಷ್ಟವನ್ನು ಎದುರಿಸಬೇಕಾದ ಪರಿಸ್ಥಿತಿ ಬಂದಿದೆ. ಈ ಸಂದರ್ಭದಲ್ಲಿ, ಮಾನ್ಯ ಕಂದಾಯ ಸಚಿವರು ನಮ್ಮ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನಲ್ಲಿ ಪ್ರವಾಸ ಮಾಡಿ, ಆ ತಾಲ್ಲೂಕಿನಲ್ಲಿ ಕ್ಷಾಮ ಪೀಡಿತ ಪ್ರದೇಶಗಳೆಂದು ಸಾರುವ ಕೆಲವು ಪ್ರದೇಶಗಳನ್ನು ಕ್ಷಾಮ ಪೀಡಿತ ಪ್ರದೇಶವೆಂದು ಸಾರಲು ಸಲಹೆ ಕೊಟ್ಟರು. ಗೌರಿಬಿದನೂರಿನಲ್ಲಿ ಯಾವ ನದಿಯೂ ಇಲ್ಲ, ನಾಲೆಯೂ ಇಲ್ಲ ಹೀಗಿರುವ ಪರಿಸ್ಥಿತಿಯಲ್ಲಿ ಖುಷ್ಕಿ ಜಮೀನನ್ನು ಮಾತ್ರ ಕ್ಷಾಮ ಪೀಡಿತ ಪ್ರದೇಶವೆಂದು ಸಾರಿ, ಉಳಿದಿರುವ ಬಾವಿ ಮತ್ತು ಕೆರೆಗಳಿಗೆ ಇರುವ ತರೀ ಜಮೀನನ್ನು ಕ್ಷಾಮ ಪೀಡಿತ ಪ್ರದೇಶವೆಂದು ಸಾರದೇ ಬಿಟ್ಟಿರುವುದು ಬಹಳ ಮಟ್ಟಿಗೆ ಸಮಂಜಸವಾಗಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಲ್ಲಿ ಯಾವ ಕೆರೆಗಳಲ್ಲಿಯೂ ಕೂಡ ನೀರಿಲ್ಲ; ಎಲ್ಲಾ ಬಾವಿಗಳೂ ಬಹುಮಟ್ಟಿಗೆ ಬತ್ತಿಹೋಗಿವೆ. ಹಾಲಿ ಇಟ್ಟಿರುವ ತರೀ ಬೆಳೆ ಕೈಗೆ ಬರುವ ಸ್ಥಿತಿಯಲ್ಲಿಲ್ಲ. ಹಾಗಿರುವಾಗ, ಸರ್ಕಾರದವರು, ಬರಿ ಖುಷ್ಕಿ ಜಮೀನನ್ನು ಮಾತ್ರ ಕ್ಷಾಮ ಪೀಡಿತ ಪ್ರದೇಶವೆಂದು ಸಾರದೆ, ಅದರ ಜೊತೆಗೆ ತರೀ ಜಮೀನನ್ನೂ ಸಾರಬೇಕೆಂದು ನಾನು ಹೇಳುತ್ತೇನೆ.

ಎರಡನೆಯದಾಗಿ, ಕೂಲಿಗಾರರ ಪ್ರಶ್ನೆ. ನಮ್ಮ ಕಡೆ, ಖುಷ್ಕಿ ಜಮೀನಿನಲ್ಲಿ ಎಕರೆಗೆ ಒಂದು ಕ್ವಿಂಟಾಲ್ ದವಸವಾಗುವ ಪರಿಸ್ಥಿತಿಯಿಲ್ಲ. ಬೇಕಾದರೆ ಸರ್ಕಾರದವರು ತನಿಖೆ ಮಾಡಿಸಿ ನೋಡಲಿ. ಇತ್ತೀಚೆಗೆ, ಸೈಕ್ಲೋನ್ ಬಂದ ನಂತರ ಅಲ್ಲಿ ಸ್ವಲ್ಪ ಮಟ್ಟಿಗೆ ಹಸಿರು ಕಾಣಿಸುತ್ತಿದ್ದೆಯೋ ಹೊರತು ಬೆಳೆಯಾಗುವುದಿಲ್ಲ. ರಾಗಿ ಬೆಳೆ ಸುತರಾಮ್ ಒಣಗಿ ಹೋಗಿದೆ. ಕಡಲೆಕಾಯಿ, ಹುರಳಿ, ಹುಚ್ಚೆಳ್ಳು ಸ್ವಲ್ಪಮಟ್ಟಿಗೆ ಸೈಕಲೋನ್ ಬಂದ ಮೇಲೆ ನೋಡುವ ಸ್ಥಿತಿಯಲ್ಲವೆ. ನೀರಾವರಿ ಬಾವಿಗಳಲ್ಲಿ ಸಂಪೂರ್ಣವಾಗಿ ನೀರು ಬತ್ತಿ ಹೋಗಿರುವುದಲ್ಲದೆ, ಕುಡಿಯುವ ನೀರಿನ ಬಾವಿಗಳೂ ಸಹ ಬಹಳ ಮಟ್ಟಿಗೆ ಬತ್ತಿ ಹೋಗಿವೆ. ಇಂಥಾ ಕಷ್ಟ ಪರಿಸ್ಥಿತಿಯಲ್ಲಿ ಸರ್ಕಾರದವರು ಸ್ವಲ್ಪಮಟ್ಟಿಗೆ ಅಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೆ. ಇಲ್ಲಿಯವರೆಗೂ ಅಲ್ಲಿ ಕೆಲಸ ನಡೆಯುತ್ತಿತ್ತು. ಆದರೆ, ಕಳೆದ ಇಪ್ಪತ್ತು ದಿವಸಗಳಿಂದೀಚೆಗೆ, ಅಲ್ಲಿ ನಡೆಯುತ್ತಿದ್ದ ಕೆಲಸಗಳನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೇವಲ, ಬಡ್ಜೆಟ್‌ನಲ್ಲಿರುವ ಕೆಲಸಗಳನ್ನು ಹಾಗೂ ಹೊಸದಾದ ಲೋಕೋಪಯೋಗಿ ಕೆಲಸಗಳನ್ನು ಮಾತ್ರ ತೆಗೆದುಕೊಳ್ಳುವಂತೆ ಸರ್ಕಾರದವರು ತಿಳಿಸಿದ್ದಾರೆ ಎಂದು ಅಲ್ಲಿನ ಅಧಿಕಾರಿಗಳು ನಮಗೆ ತಿಳಿಸುತ್ತಿದ್ದಾರೆ. ಆದುದರಿಂದ, ನಾನು ಇದೇ ಸಂದರ್ಭದಲ್ಲಿ ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರಬೇಕೆಂದು ಬಯಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಅರವತ್ತೊಂಬತ್ತು ಪಂಚಾಯತಿಗಳಿವೆ. ಒಂದೊಂದು ಪಂಚಾಯತಿಯಲ್ಲೂ ಸಹ ಸುಮಾರು ಮೂರು ಸಾವಿರದಿಂದ ಹಿಡಿದು ಎಂಟು ಸಾವಿರದವರೆಗೂ ಜನಸಂಖ್ಯೆಯಿದೆ, ಕನಿಷ್ಠ ಪಕ್ಷ. ಒಂದೊಂದು ಪಂಚಾಯತಿಯಲ್ಲಿ ಒಂದೊಂದು ಸಾವಿರ ಜನ ಕೂಲಿ ಇಲ್ಲದೆ. ಅಲ್ಲಿನ ಕೂಲಿಗಾರರು ಕೂಲಿಗಾಗಿ ಬಹಳ ಹಾತೊರೆಯುತ್ತಿದ್ದಾರೆ. ಹಾಗಿರುವಾಗಿ, ಯಾವುದೋ ಒಂದು ಮೂಲೆಯಲ್ಲಿ ಒಂದು ಕೆಲಸವನ್ನು ತೆಗೆದುಕೊಂಡರೆ, ಕೂಲಿಗಾರನ ಒಂದು ಸಣ್ಣ ಕುಟುಂಬ ಬೆಳಿಗ್ಗೆ ಎದ್ದು, ಕೂಲಿ ಮಾಡಲಿಕ್ಕೆ ಕೆಲಸ ಹುಡಿಕಿಕೊಂಡು ಹದಿನೈದು ಮೈಲಿಗಳವರೆಗೂ ಹೋಗಿ, ಅಲ್ಲಿ ಕೆಲಸ ಮಾಡಿ, ಸಂಜೆಗೆ ಮನೆಗೆ ಬರುವುದಕ್ಕಾಗುವುದಿಲ್ಲ. ಅವರಲ್ಲೂ ಹೆಣ್ಣು ಮಕ್ಕಳನ್ನು ಕರೆದುಕೊಂಡು ಹೋಗುವುದಕ್ಕಾಗುವುದಿಲ್ಲ, ಆದುದರಿಂದ, ಮೂರು ಅಥವಾ ಐದು ಮೈಲಿಯೊಳಗೇ, ಪ್ರತಿಯೊಂದು ಪಂಚಾತಿಯಲ್ಲೂ ಕೂಡ ಕೆಲಸಗಳನ್ನು ಕೊಡಬೇಕಾಗಿದೆ. ಸಾಮಾನ್ಯವಾಗಿ, ನಮ್ಮ ರಾಜ್ಯದಲ್ಲಿ ಪ್ರತಿಯೊಂದು ಹಳ್ಳಿಗೂ ಕೆರೆಗಳಿವೆ, ಆ ಕೆರೆಗಳಲ್ಲಿರುವ ಮಣ್ಣನ್ನು ಎತ್ತಿ, ಏರಿ ಮೇಲೆ ಹಾಕಿದರೆ, ಕೆರೆಯೂ ಭದ್ರವಾಗುತ್ತದೆ ಮತ್ತು ಸ್ಥಳೀಯ ಕೂಲಿಗಾರರಿಗೆ ಕೆಲಸವೂ ದೊರೆತಂತಾಗುತ್ತದೆ. ಈ ದೃಷ್ಟಿಯಿಂದ, ಲೋಕೋಪಯೋಗಿ ಇಲಾಖೆಯವರು, ನಮ್ಮ ರಾಜ್ಯದ ಪ್ರತಿಯೊಂದು ಕೆರೆಯ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡಬಯಸುತ್ತೇನೆ. ಹೀಗೆ ಮಾಡುವುದಾದರೆ, ಈಗಿರುವ ಕೂಲಿಗಾರರ ತೊಂದರೆಯನ್ನು ನಿವಾರಣೆ ಮಾಡಿದಂತಾಗುತ್ತದೆ. ನಮ್ಮ ತಾಲ್ಲೂಕಿನ ಕೆಲವು ಹಳ್ಳಿಗಳಿಗೆ ನಾನು ಭೇಟಿ ಕೊಟ್ಟಾಗ ನಾನು ಕಂಡ ಕೆಲವು ಸತ್ಯಾಂಶಗಳನ್ನು ಹೇಳುತ್ತೇನೆ. ಕೆಲಸವಿಲ್ಲದ ಕೂಲಿಗಾರರು, ಅಲ್ಲಿ ಕೊಂಕರುಗಡ್ಡೆಗಳನ್ನು ತಿಂದು ಜೀವನ ಮಾಡುವ ಪರಿಸ್ಥಿತಿಗೆ ಬಂದಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳು, ಪ್ರತ್ಯಕ್ಷವಾಗಿ ನೋಡಬೇಕಾದರೆ ಆ ಸ್ಥಳಗಳಿಗೆ ಅನಿರೀಕ್ಷಿತವಾಗಿ ಭೇಟಿ ಕೊಟ್ಟರೆ ಕಾಣಬಹುದು. ಸೋಮಶೆಟ್ಟಿ ಎಂಬ ಹಳ್ಳಿಯಲ್ಲಿ ಈಗಲೂ ಕೆಲಸವಿಲ್ಲದ, ಕೂಲಿಗಾರರು ಗಡ್ಡೆಗಳನ್ನು ತಿಂದು ಬದುಕುತ್ತಿದ್ದಾರೆ. ಇದರ ಜೊತೆಗೆ, ಅಲ್ಲಿ ದನಗಳಿಗೆ ಮೇವು ಸಿಕ್ಕದೆ ಪರಿಸ್ಥಿತಿ ತುಂಬಾ ಕಠಿಣವಾಗಿದೆ. ಆದುದರಿಂದ ಆದಷ್ಟು ಜಾಗ್ರತೆ ಹುಲ್ಲನ್ನು ಪಂಚಾಯತಿಗಳ ಮೂಲಕ ಮತ್ತು ಸಂಘಗಳ ಮೂಲಕ ವಿಲೇವಾರಿ ಮಾಡುವ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಗೌರಿಬಿದನೂರು ತಾಲ್ಲೂಕಿನ ತರಿ ಜಮೀನನ್ನೂ ಸಹ, ಕ್ಷಾಮ ಪೀಡಿತ ಪ್ರದೇಶವೆಂದು ಸಾರಿರುವ ಖುಷ್ಕಿ ಜಮೀನಿನ ಜೊತೆಗೆ ಸೇರಿಸಿ, ಅವರಡನ್ನೂ ಕ್ಷಾಮಪೀಡಿತ ಪ್ರದೇಶವೆಂದು ಪರಿಗಣಿಸುವುದಲ್ಲದೆ, ಇಡೀ ಕೋಲಾರ ಜಿಲ್ಲೆಯನ್ನೇ ಕ್ಷಾಮಪೀಡಿತ ಪ್ರದೇಶವೆಂದು ಸಾರಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಆಂಧ್ರ ಪ್ರದೇಶದಲ್ಲಿ ರಾಯಲ ಸೀಮಾ ಬೋರ್ಡ್ ಎಂದು ಮಾಡಿಕೊಂಡು, ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಶಾಶ್ವತವಾದ ಕಾಮಗಾರಿಗಳನ್ನು ಮಾಡಿಸುತ್ತಿದ್ದಾರೆ. ಹಾಗೆಯೇ, ನಮ್ಮಲ್ಲೂ ಕೋಲಾರ, ತುಮಕೂರು ಮತ್ತು ಬಳ್ಳಾರಿ ಜಿಲ್ಲೆ

ಗಳನ್ನೊಳಗೊಂಡಂತೆ ಒಂದು ಬೋರ್ಡ್ ಮಾಡಿ, ಅದರ ಮೂಲಕ ಅಲ್ಲೆಲ್ಲಾ ಶಾಶ್ವತವಾದ ಕಾಮಗಾರಿಗಳನ್ನು ಮಾಡಬೇಕೆಂದು ಹೇಳುತ್ತೇನೆ. ಅಷ್ಟೇ ಅಲ್ಲದೆ, ಭದ್ರಾ ನೀರು ತುಮಕೂರು ಮತ್ತು ಕೋಲಾರ ಮಾರ್ಗವಾಗಿ ಬಾಗೇಪಲ್ಲಿಗೆ ಬರುವ ಅವಕಾಶವಿದೆ ಎಂದು ಕೇಳಿದ್ದೇನೆ. ಆದುದರಿಂದ ಭದ್ರಾ ನೀರನ್ನು ಅಲ್ಲಿಗೆ ತರುವ ಯೋಜನೆ ಕೈಗೊಂಡಿಲ್ಲ. ಖಂಡಿತವಾಗಿ ಅಲ್ಲಿಗೆ ಶಾಶ್ವತವಾದ ಪರಿಹಾರವನ್ನು ಕಂಡುಹಿಡಿದಂತಾಗುತ್ತದೆಂದು ಸೂಚನೆ ಕೊಟ್ಟು, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

11-00 A.M.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, 1972ರಿಂದ ಈವರೆಗೆ ನಾವು ಒಂದಲ್ಲ ಒಂದು ಕಡೆ ನಮ್ಮ ರಾಜ್ಯದಲ್ಲಿ ಕ್ಷಾಮ ಡಾಮರಗಳ ಹಾವಳಿಗೆ ತುತ್ತಾಗಿ ಬಂದಿದ್ದೇವೆ. ಕ್ಷಾಮ ಡಾಮರಗಳ ಬೀಡು ಅರಸರು ಆಳುವ ನಾಡು ಇದು ನಮ್ಮ ಪಾಡು, ಇದನ್ನು ಹೇಳಿದರೆ ನಮ್ಮ ಮೇಲೆ ಇವರು ಎಗರಿ ಬೀಳುತ್ತಾರೆ. ನಿಜವಾಗಿಯೂ ನಮ್ಮ ದುರಾದೃಷ್ಟವೋ ಏನೋ ಇಷ್ಟು ಅಹಂಕಾರದ ಗದ್ದುಗೆಯಲ್ಲಿರತಕ್ಕ ಪುಣ್ಯಾತ್ಮರು ನಮ್ಮ ರಾಜ್ಯದಲ್ಲಿ ಅಧಿಕಾರ ಪೀಠಕ್ಕೆ ಬಂದಂದಿನಿಂದ ನಾಳೆ ಇವರು ಹೋಗುವವರೆಗೂ ನಾಡಿನ ಪಾಡು ನಿವಾರಣೆಯಾಗಲಾರದೆಂದು ನನಗನ್ನಿಸುತ್ತದೆ. ಮಾನ್ಯ ಅಧ್ಯಕ್ಷರೇ, ಜಗತ್ತಿನ ಎಲ್ಲಾ ಕಡೆಯಲ್ಲಿಯೂ ಕೂಡ ಇಂಥ ಪರಿಸ್ಥಿತಿಯಲ್ಲಿ ಎಂಥ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ಎಂಬುದನ್ನು ಗಮನಿಸುವ ಯೋಚನೆಯನ್ನು ಕೂಡ ಇವರು ಮಾಡಿದಂತೆ ಕಾಣುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಭಾರತದಲ್ಲಿ ಕೆಲವು ವರ್ಷಗಳ ಹಿಂದೆ ಬಂಗಾಳದಲ್ಲಿ ಭೀಕರ ಕ್ಷಾಮ ಇದ್ದಾಗ ಯಾವ ಕ್ರಮಗಳನ್ನು ಕೈಗೊಂಡು ಕ್ಷಾಮವನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿದರು ಎನ್ನುವುದರ ಬಗ್ಗೆ, ಇವರಿಗೆ ತಿಳುವಳಿಕೆ ಇಲ್ಲವೆಂದು ನನಗೆ ಕಾಣುತ್ತದೆ. 1972 ರಿಂದ ಆರಂಭವಾದ ಈ ಕ್ಷಾಮ ದೇವತೆಯನ್ನು ಪರಿಹಾರ ಮಾಡುವಾಗ ಪಟ್ಟ ಅನುಭವವನ್ನು ಈಗ ಇವರು ಜ್ಞಾಪಿಸಿಕೊಂಡಿಲ್ಲ ಎಂದರೆ ಇದು ಆಶ್ಚರ್ಯಕರವಾದ ವಿಷಯ. ಹುಬ್ಬಳ್ಳಿ ಶಾಸಕರಾದ ನಮ್ಮ ಸ್ನೇಹಿತರು ತಮ್ಮ ಕಾವ್ಯ ಮಾಲಿಕೆಯನ್ನು ಕ್ಷಾಮ ದೇವತೆಗೆ ತೊಡಿಸಿದರು. ಅರಸರಿಗೆ ಹಾರ ಹಾಕಿದರು, ಹಾಕಬೇಕಾದವರು ಅವರೇ, ಹಾರ ಹಾಕುವುದರ ಬಗ್ಗೆ ನನಗೆ ಚಿಂತನೆಯಿಲ್ಲ. ಆದರೆ ಅರಸ ರಾಕ್ಷಸ ಮಂತ್ರಿಗಳ ಗಣ ಮೆರೆವ ಹುಲಿಗಳ ಪರಿವಾರ ಹಸಿವಿನ ನೆರವೀ ಬಡಗರ ಭಿನ್ನಪವ ಯಾರು ಆಲಿಪರು ? ಮಾನ್ಯ ಅಧ್ಯಕ್ಷರೇ, ಇವರ ಪಕ್ಷದ ಅಧ್ಯಕ್ಷರು ಒಂದು ಮಾತನ್ನು ಬಹಳ ಸೊಗಸಾಗಿ ಆಡಿದ್ದಾರೆ. ಅದನ್ನು ನಾನು ಅನುಮೋದಿಸುತ್ತೇನೆ. ಮತ್ತು ಅವರ ಮಾತನ್ನು ನಾನು ಅನುಮೋದಿಸಲಿಕ್ಕೆ ಸಿದ್ಧನಾಗಿದ್ದೇನೆ. ಅವರು ಆಡಿದಂಥ ಅಮೂಲ್ಯವಾದಂಥ ಮಾತನ್ನು ಅವರ ಪಕ್ಷದ ಮಂತ್ರಿಮಂಡಲ ಚೆನ್ನಾಗಿ ಗಮನಕ್ಕೆ ತೆಗೆದುಕೊಳ್ಳಬೇಕು. ಅವರು ಹೇಳಿದರು ಮನರಂಜನೆ ಕೆಲಸಗಳಿಗೆ ರಜ ಕೊಡಿ ಎಂದು. ಇಂಥ ಸೊಗಸಾದ ಮಾತಿಗೆ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಇವತ್ತು ಮನರಂಜನೆಯ ಕಾರ್ಯಕ್ರಮದಲ್ಲಿ ಈ ಮಂತ್ರಿಮಂಡಲ ತಲ್ಲೀನವಾಗಿದೆ. ಇದನ್ನು ಅವರು ಮನಗಂಡು ಈ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಪುನಹ ಸಮರ್ಥಿಸುತ್ತೇನೆ. ಎಲ್ಲಿ ನೋಡಿದರೂ ಹಾರ ತುರಾಯಿಗಳು, ಇದರಿಂದ ಸಂತೃಪ್ತರಾದ ಇವರಿಗೆ ಇಲ್ಲಿರತಕ್ಕ ಪರಿಸ್ಥಿತಿಯ ಬಗ್ಗೆ ಕಣ್ಣು ಹಾಯಿಸದೇ ಇರತಕ್ಕ ಆಶ್ಚರ್ಯವಾದ ವಿಷಯ. ನಮ್ಮ ಮಲೆನಾಡಿನ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಅದರಲ್ಲಿ ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ, ನನ್ನಲ್ಲಿ ಆಗುಂಬೆ ಭಾರತದ ಚಿರಾಪುಂಜಿಯ ಹಾಗೆ ದಕ್ಷಿಣದಲ್ಲಿ ಚಿರಾಪುಂಜಿ ಎಂದು ಕರೆದಿದ್ದಾರೆ. ಸುಮಾರು 380 ರಿಂದ 410 ಇಂಚಿನವರೆಗೆ ಮಳೆಯಾಗತಕ್ಕ ಪ್ರದೇಶದಲ್ಲಿ ಇಂದು ನಮ್ಮ ದುರಾದೃಷ್ಟದಿಂದ ಸುಮಾರು 280 ಇಂಚು ಮಳೆಯಾಗಿದೆ ನಮಗೆ ಆಗಬೇಕಾದಂಥ ಮಳೆಯಲ್ಲಿ ಸುಮಾರು 80 ರಿಂದ 100 ಇಂಚು ಮಳೆ ಕಡಿಮೆಯಾಗಿದೆ. ನಮ್ಮಲ್ಲಿ ಎತ್ತ ನೋಡಿದರೂ ಹಸಿರು ಕಣ್ಣಿಗೆ ಕಾಣುತ್ತಿರುತ್ತದೆ. ಆದರೆ ಬುಡದಲ್ಲಿ ಭೂಮಿ ಬಿರುಕು ಬಿಟ್ಟಿರುತ್ತದೆ. ನಮ್ಮ ದುರಾದೃಷ್ಟದಿಂದ ಕೆಲವು ವಾರಗಳ ಹಿಂದೆ ನಮಗೆ ಮಳೆ ಬಂದಿರಲಿಲ್ಲ. ಆದರೆ ಈಗ ಮಳೆ ಬಂದು ಕೊಯ್ಯುವ ಕಾಲದಲ್ಲಿ ತೆನೆಗಳೆಲ್ಲಾ ಬಿದ್ದುಹೋಗತಕ್ಕ ಪರಿಸ್ಥಿತಿ ಬಂದಿದೆ. ಕೈಗೆ ಬರತಕ್ಕ ಬೆಳೆಯಲ್ಲಿಯೂ ಕೂಡ ಅರ್ಧಕ್ಕರ್ಧ ನಾಶವಾಗಿದೆ. ಈ ಸಂದರ್ಭವನ್ನು ಸರ್ಕಾರದವರು ಉಪಯೋಗಿಸಿಕೊಂಡು ರೈತರಿಗೆ ಸಾಲದ ವಸೂಲಿ ಮತ್ತು ಲೆವಿಯ ನೋಟೀಸ್‌ಅನ್ನು ಕೊಡುವುದಕ್ಕೆ

ಪ್ರಾರಂಭ ಮಾಡಿದ್ದಾರೆ. ಹೋದ ತಿಂಗಳು ಮಂತ್ರಿಗಳು ಪ್ರವಾಸ ಮಾಡಿದಾಗ ಕಾಣುತ್ತಿದ್ದ ಹಸಿರನ್ನು ನೋಡಿಕೊಂಡು ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲೇ ನೋಟೀಸುಗಳನ್ನು ಕೊಡುವುದಕ್ಕೆ ರೆಡಿ ಮಾಡಿ ಇಟ್ಟಿದ್ದಾರೆ. ಶ್ರೀಮಾನ್ ರಂಗನಾಥ ಅವರು ನಮ್ಮ ಜಿಲ್ಲೆಯನ್ನು ವಹಿಸಿಕೊಂಡಿದ್ದಾರೆ, ಅವರು ನಮ್ಮ ಜಿಲ್ಲೆಗೆ ಬಂದಾಗ ಅವರಿಗೆ ನಮ್ಮ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟಿದ್ದೇವೆ. ಮಳೆ ಇಲ್ಲದೆ ಭಯ ಇರುವುದರ ಜೊತೆಗೆ ಈ ರೀತಿಯಾಗಿ ಇವರು ಸಾಲ ಸೋಲಗಳನ್ನು ವಸೂಲು ಮಾಡತಕ್ಕ ಕಾರ್ಯಕ್ರಮ ಕೈಗೊಳ್ಳುವುದನ್ನು ಇವರು ಕೈಬಿಡಬೇಕು ಎಂದು ನಾನು ತಮ್ಮ ಮುಖೇನ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ. ಇಂಥ ಒಂದು ಪ್ರಕ್ಷುಬ್ಧ ವಾತಾವರಣ ನಮ್ಮ ರಾಜ್ಯದಲ್ಲಿದೆ. ಕಾಂಗ್ರೆಸ್ ಅಧ್ಯಕ್ಷರೇ ಒಪ್ಪಿಕೊಂಡ ಹಾಗೆ ನಮ್ಮ ರಾಜ್ಯದ 9 ಜಿಲ್ಲೆಗಳಲ್ಲಿ ಪರಿಸ್ಥಿತಿ ತೀವ್ರವಾಗಿದೆ. 1972ನೇ ಇಸವಿಯಲ್ಲಿ ಇದೇ ಸದನದಲ್ಲಿ ಉತ್ತರ ಕರ್ನಾಟಕ ಐದು ಜಿಲ್ಲೆಗಳಲ್ಲಿ ಕ್ಷಾಮ ದೇವತೆ ತಾಂಡವವಾಡುತ್ತಿದ್ದಾಗ ತೀವ್ರವಾದಂಥ ಹೋರಾಟವನ್ನು ನಾವುಗಳು ನಡೆಸಿ ಸುಮಾರು 63 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವುದಕ್ಕೆ ಕಾರಣರಾಗಿದ್ದೇವೆ. ಈ ಬಾರಿ ಈ ಭಾಗದಲ್ಲಿ ಶತಶತಮಾನಗಳಿಂದಲೂ ಕಂಡರಿಯಲಾರದಂಥ ಕ್ಷಾಮವನ್ನು ನಾವು ಅನುಭವಿಸುತ್ತಾ ಇರುವ ಸಮಯದಲ್ಲಿ ಸರ್ಕಾರದವರು ಮಾರ್ವಾಡಿ ಲೆಕ್ಕಾಚಾರ ಮಾಡುತ್ತಿರುವುದು ವಿಷಾದದ ಸಂಗತಿ. ಈಗ ಸರ್ಕಾರದವರು ಎಷ್ಟು ಹಣವನ್ನು ವೆಚ್ಚ ಮಾಡಲಿಕ್ಕೆ ಸಾಧ್ಯವೋ ಅಷ್ಟನ್ನು ಕೂಡಲೇ ವೆಚ್ಚ ಮಾಡಬೇಕು. ನಮ್ಮಲ್ಲಿ ಬೇಕಾದಷ್ಟು ಕೆರೆಗಳು ಕಟ್ಟೆಗಳು ಇವೆ. ಇವರ ಕಾಲದಲ್ಲಿ ಇವು ಆಗಲಿಲ್ಲ. ಶಿವಪ್ಪನಾಯಕನ ಕಾಲದಲ್ಲಿ ಆದಂಥಾವುಗಳು. ಈ ಕೆರೆಗಳಲ್ಲಿ, ಕಟ್ಟೆಗಳಲ್ಲಿ ನೀರು ಇಲ್ಲ. ಇವುಗಳಲ್ಲಿರತಕ್ಕ ಹೂಳು ತೆಗೆದರೆ ಸಾಕು ನೀರು ಬರುತ್ತದೆ. ಈ ಮಾತನ್ನು ನಾವು ಹೇಳಿದರೆ ಇವರಿಗೆ ಬೇಜಾರು ಆಗುತ್ತದೆ. ನಮ್ಮಲ್ಲಿರುವ ಕೆರೆಕಟ್ಟೆಗಳಲ್ಲಿ ಎರಡು ಅಥವಾ ನಾಲ್ಕು ಅಡಿ ಹೂಳು ತೆಗೆದರೆ ನಮ್ಮ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಇರುವುದಿಲ್ಲ. ಹಸಿರು ಕಾಣುತ್ತಾ ಇರುವುದನ್ನು ಕಂಡು ನಮ್ಮ ಬಗ್ಗೆ ಅಲಕ್ಷ್ಯ ಮಾಡದೆ ನಮ್ಮ ಜನ ಜಾನುವಾರುಗಳು ಮುಂದೆ ಏನು ಗತಿ ಎಂದು ಭಯದಿಂದ ಇರುವುದನ್ನು ತಾವು ವಿವೇಚನೆಗೆ ತೆಗೆದುಕೊಂಡು ಮುಖ್ಯವಾದಂಥ ಕೆಲಸಗಳಾದಂಥ ಕೆರೆ ಹೂಳು ತೆಗೆಯುವುದು ಮಾಡಿದರೆ ದೊಡ್ಡ ಪ್ರಯೋಜನವಾಗುತ್ತದೆ. ಹಾಗೆಯೇ ಸಣ್ಣ ಸಣ್ಣ ಹಳ್ಳಿಗಳಲ್ಲಿ ಪಿಕ್‌ಅಪ್ ನಾಲೆಗಳು ಮತ್ತು ಇತರೆ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ನಾನು ಇಲ್ಲಿ ಹೇಳಬಯಸುತ್ತೇನೆ. ಹಸಿರು ಕಂಡು ನಮ್ಮ ಬಾಳು ಹಸನಾಗಿದೆ ಎಂದು ಯಾರೂ ಭಾವಿಸಬಾರದು. ನಮ್ಮಲ್ಲಿಯೂ ಕೂಡ ಈ ಒಂದು ಅಭಾವದ ಛಾಯೆ, ಶಕೆ, ಇದೆ, ಇದು ನಮಗೆ ತಾಗಿರುವುದು ನಮ್ಮ ದುರಾದೃಷ್ಟವೇ. ಒಟ್ಟಿನಲ್ಲಿ ಇವರು ಅಧಿಕಾರಕ್ಕೆ ಬಂದಂದಿನಿಂದ ಒಂದಲ್ಲ ಒಂದು ಕಡೆ ಈ ಕ್ಷಾಮದ ಅನುಭವವನ್ನು ನಮ್ಮ ರಾಜ್ಯದ ಜನತೆ ಪಡೆದುಕೊಂಡು ಬಂದಿದೆ. ಇದು ನಮ್ಮ ದುರಾದೃಷ್ಟ. ಈ ಒಂದು ಅಭಿಪ್ರಾಯವನ್ನು ನಾನು ಇಲ್ಲಿ ವ್ಯಕ್ತಪಡಿಸಿ, ಇನ್ನಾದರೂ ತಕ್ಕ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಎಂದು ಪ್ರಾರ್ಥಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎ. ನಂಜಪ್ಪ (ಅರಸೀಕೆರೆ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯವು ಕ್ಷಾಮ ಪರಿಸ್ಥಿತಿಗೆ ಒಳಗಾಗಿ ನಮ್ಮ ಸದಸ್ಯರೆಲ್ಲರೂ ತಮ್ಮ ತಮ್ಮ ಕ್ಷೇತ್ರದಲ್ಲಿರತಕ್ಕ ಪರಿಸ್ಥಿತಿಯನ್ನು ಸರ್ಕಾರಕ್ಕೆ ವ್ಯಕ್ತ ಪಡಿಸಿದ್ದಾರೆ. ಇದರ ನಿವಾರಣೆಗೆ ಸರ್ಕಾರವನ್ನು ಪ್ರಾರ್ಥಿಸುವುದಕ್ಕೆ ಮೊದಲು ದಯಾಮಯನಾದ ದೇವರನ್ನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ಇಂಥ ಪರಿಸ್ಥಿತಿ ಒದಗಿರತಕ್ಕ ಕಾಲದಲ್ಲಿ ದೇವರನ್ನೇ ನಾವು ಈ ಸಂದರ್ಭದಲ್ಲಿ ಪ್ರಾರ್ಥಿಸಬೇಕಾಗಿದೆ. ನಮ್ಮ ರಾಜ್ಯದ 15 ಜಿಲ್ಲೆಗಳಲ್ಲಿ ಅದರಲ್ಲಿಯೂ ಚಿತ್ರದುರ್ಗ ಮತ್ತು ಹಾಸನ ಜಿಲ್ಲೆಗಳು ಬಹಳ ಭೀಕರವಾದಂಥ ಪರಿಸ್ಥಿತಿಯನ್ನು ಹೊಂದಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು 71 ಪರ್ಸೆಂಟ್ ಜನಗಳು ಕಷ್ಟಕ್ಕೆ ಸಿಕ್ಕಿದ್ದಾರೆ. ನಮ್ಮ ಹಾಸನ ಜಿಲ್ಲೆಯಲ್ಲಿ ಸುಮಾರು 69 ಪರ್ಸೆಂಟ್ ಜನ ಈ ಒಂದು ಅಭಾವ ಪರಿಸ್ಥಿತಿಯ ಕಷ್ಟಕ್ಕೆ ಒಳಗಾಗಿದ್ದಾರೆ. ಇಂಥ ಒಂದು ಭೀಕರ ಸಂದರ್ಭದಲ್ಲಿ ಸರ್ಕಾರದವರು ತೀವ್ರವಾದಂಥ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ನಾನು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಸರ್ಕಾರದ ಅಧಿಕಾರದಲ್ಲಿ ಇರತಕ್ಕಂಥಾ ಮಂತ್ರಿಗಳೇನೊ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆ. ಆದರೆ ಸ್ಥಳದಲ್ಲಿರತಕ್ಕಂಥಾ ಅಧಿಕಾರಿಗಳು ಈ ಬಗ್ಗೆ ಒಂದು ಹೆಚ್ಚಿನ ನಿಗಾ ಆಗಲಿ ಅಥವಾ ದಕ್ಷತೆಯನ್ನು ವಹಿಸದೇ ಇರುವುದರಿಂದ ಈ ಒಂದು ಯೋಜನೆಯಿಂದ ಏನು ಒಂದು ಆಸೆ ಇಟ್ಟುಕೊಂಡಿರುತ್ತಾರೋ ಅದು ವಿಫಲವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಮಗೆ ಒಂದು ಉದಾಹರಣೆ ಹೇಳುವುದಾದರೆ ನಮ್ಮ ತಾಲ್ಲೂಕಿಗೆ ಒರಟು ಪದಾರ್ಥವನ್ನು ಅಂದರೆ ರಾಗಿ ಮತ್ತು ಜೋಳವನ್ನು ಹೆಚ್ಚಿಗೆ ಒದಗಿಸಬೇಕು ಎಂದು ಮಾನ್ಯ ಕಂದಾಯ ಸಚಿವರಲ್ಲಿ ಪ್ರಾರ್ಥಿಸಿದೆವು ಅದರಂತೆ ಅಲ್ಲಿಗೆ ಇದು ಹೆಚ್ಚಿಗೆ ಅಲಾಟ್‌ಮೆಂಟ್ ಕೂಡ ಆಯಿತು. ಆದರೆ ಅದರ ವಿತರಣೆ ಕೆಲಸದಲ್ಲಿ ಏನಾಯಿತು ಅಂದರೆ ಅಲ್ಲಿಯ ಸ್ಥಳೀಯ ಅಧಿಕಾರಿಗಳು ಇವರ ಬಗ್ಗೆ ಸರಿಯಾಗಿ ಒಂದು ವ್ಯವಸ್ಥೆ ಮಾಡದೆ ತೊಂದರೆಯಾಯಿತು. ಮಾನ್ಯ ಜಿಲ್ಲಾಧಿಕಾರಿಗಳು ಇದನ್ನು ಸಂತೆಗಳಲ್ಲಿ ಮಾರಾಟ ಮಾಡುವಂತೆ ಮಾಡಿದರು. ಅದರಿಂದ ಏನಾಯಿತು ಎಂದರೆ ಆ ಸಂತೆಯಲ್ಲಿ ಅನೇಕ ವ್ಯಾಪಾರಸ್ಥರು 10-15 ಜನರನ್ನು ಗುಂಪಾಗಿ ಕೂರಿಸಿಬಿಟ್ಟು ಒಬ್ಬೊಬ್ಬನಿಗೆ 10-15 ಕೆ ಜಿ. ಯಂತೆ ಕೊಟ್ಟರು. ಇದರಿಂದ ಅವರು ಹೆಚ್ಚಿನ ಒಂದು ಲಾಭ ಮಾಡಿಕೊಂಡರೇ ವಿನಾ ಬಡವರಿಗೆ ಉಪಯೋಗವಾಗಲಿಲ್ಲ. ಅನಂತರ ನಾವು ಜಿಲ್ಲಾಧಿಕಾರಿಗಳಲ್ಲಿ ಹೋಗಿ ಪ್ರಾರ್ಥನೆ ಮಾಡಿಕೊಂಡೆವು. ರಾಗಿಯನ್ನು ಸಂತೆಗಳಲ್ಲಿ ಮಾರಾಟ ಮಾಡುವುದರಿಂದ ಬಡವರಿಗೆ ಸಿಕ್ಕುವುದಕ್ಕೆ ಕಷ್ಟವಾಗುತ್ತದೆ. ಇದಕ್ಕೆ ಬದಲಾಗಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥಾ ಸೇವಾ ಸಹಕಾರ ಸಂಘಗಳ ಮುಖಾಂತರ ಪ್ರತಿಯೊಂದು ಗ್ರಾಮಕ್ಕೂ ಇಂತಿಷ್ಟು ಕೋಟಾ ಅಂತ ನಿಗದಿ ಮಾಡಿದರೆ ಈ ಆಹಾರದ ಅಭಾವ ಈಗ ಏನು ತೊಂದರೆಯಾಗಿದೆಯೋ ಅದು ಸ್ವಲ್ಪಮಟ್ಟಿಗೆ ನಿವಾರಣೆಯಾಗುತ್ತದೆ ಈ ರೀತಿಯಾಗಿ ತಾವು ಒದಗಿಸುವ ವ್ಯವಸ್ಥೆ ಮಾಡಬೇಕು ಅಂತ ಹೇಳಿದೆ. ಮತ್ತು ಪ್ರತಿಯೊಂದು ಕಡೆಯೂ ಗ್ರಾಮಾಂತರ ಪ್ರದೇಶದಲ್ಲಿ ಪ್ರಾರಂಭ ಮಾಡಿರತಕ್ಕಂಥಾ ಕೆಲಸಗಳು ಏನು ಇವೆ ಅಲ್ಲಿ ಆ ಬಡವರು ಇದಕ್ಕಾಗಿ ತಮ್ಮ ಆ ದಿವಸದ ಕೆಲಸವನ್ನು ಬಿಟ್ಟು ಹೋದರೆ ಅವರಿಗೆ ಆ ದಿವಸದ ಕೂಲಿಯೂ ಹೋಗುತ್ತದೆ ಮತ್ತು ಅದಕ್ಕೆ ಒಂದು ದಿವಸ ವೇಸ್ಟ್ ಕೂಡ ಆಗುತ್ತದೆ. ಆದುದರಿಂದ ಅವರಿಗೆ ಆಯಾಯ ಸ್ಥಳದಲ್ಲೇ ಈ ಆಹಾರವನ್ನು ಒದಗಿಸುವ ಒಂದು ವ್ಯವಸ್ಥೆ ಆಗಬೇಕು ಎಂದು ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ.

ಇನ್ನು ದನಕರುಗಳ ಮೇವಿನ ಬಗ್ಗೆ ಹೇಳುವುದಾದರೆ ಸರ್ಕಾರದವರು ಈ ಬಗ್ಗೆ ಪ್ರಯತ್ನ ಮಾಡದೇ ಹೋದರೆ ಇನ್ನು ಒಂದೆರಡು ತಿಂಗಳುಗಳಲ್ಲೇ ಅನೇಕ ಜಾನುವಾರುಗಳು ಸತ್ತುಹೋಗಿ ಮುಂದಿನ ಒಂದು ವ್ಯವಸಾಯಕ್ಕೆ ಜನರಿಗೆ ದನಗಳನ್ನು ಕೊಂಡುಕೊಳ್ಳುವ ಶಕ್ತಿಯೂ ಕೂಡ ಹೋಗುತ್ತದೆ. ಆದುದರಿಂದ ಈ ದನಕರುಗಳ ಮೇವಿನ ಬಗ್ಗೆ ಒಂದು ವ್ಯವಸ್ಥೆ ಆಗಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇವೆ.

ಇನ್ನು ಇದರ ಬಗ್ಗೆ ಪ್ರಾಮುಖ್ಯವಾಗಿ ಹೇಳುವುದು ಈಗ ಈ ಬರಗಾಲಕ್ಕೆ ಯಥೇಚ್ಛವಾಗಿ ಏನು ಕಾಮಗಾರಿಗಳ ಕೆಲಸ ಮಾಡಿಸುತ್ತಿದ್ದಾರೆ, ರಸ್ತೆ ಮಾಡಿಸುವುದು, ಮಣ್ಣು ತೆಗೆಯುವುದು ಈ ಕೆಲಸಗಳಿಗೆ ಖರ್ಚು ಮಾಡುವ ಹಣ ಬಹಳ ವೇಸ್ಟ್ ಎಂದು ಹೇಳುತ್ತೇನೆ. ಇದರ ಬದಲು ಒಂದು ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳ ಒಂದು ಯೋಜನೆಯನ್ನು ಕೈಗೊಳ್ಳಬೇಕು ಎಂದು ಹೇಳಬಯಸುತ್ತೇನೆ. ಇದಕ್ಕೆ ನನ್ನ ಸಲಹೆ ಯಾವ ಯಾವ ಪ್ರದೇಶದಲ್ಲಿ ಕೆರೆಗಳನ್ನು ಕಟ್ಟುವುದಕ್ಕೆ ಸಾಧ್ಯ ಇದೆ ಅವುಗಳನ್ನು ಕಟ್ಟುವದಕ್ಕೆ ಸರ್ಕಾರದವರು ಒಂದು ಯೋಜನೆ ಹಾಕಿಕೊಂಡು ಪರಿಣಿತರನ್ನು ಅಲ್ಲಿಗೆ ಕಳುಹಿಸಿ ಆ ಕೆಲಸ ಮಾಡಿದರೆ ಅನುಕೂಲವಾಗುತ್ತದೆ. ಹೇಗೆಂದರೆ ದೊಡ್ಡ ದೊಡ್ಡ ಮಳೆಗಳು ಬಂದಾಗ ಹಳ್ಳಗಳಲ್ಲಿ ಎಷ್ಟೋ ನೀರು ವೇಸ್ಟ್ ಆಗಿ ಹೊರಟು ಹೋಗಿಬಿಡುತ್ತದೆ. ಆ ವೇಸ್ಟ್ ಆಗುವಂಥಾ ನೀರನ್ನು ತಡೆಹಿಡಿದು, ಶೇಖರಿಸಿ ಅದನ್ನು ಒಂದು ವ್ಯವಸಾಯಕ್ಕೋ, ಅಥವಾ ದನಕರುಗಳಿಗೆ ಕುಡಿಯುವುದಕ್ಕೋ ಉಪಯೋಗವಾಗುವ ಹಾಗೆ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನ ಅರಸೀಕೆರೆ ವಿಚಾರ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ದೊಡ್ಡ ದೊಡ್ಡ ಕೆರೆಗಳು ಇಲ್ಲ, ನಾಲೆಗಳ ಸೌಕರ್ಯ ಇಲ್ಲ. ಅಂಥಾ ಪ್ರದೇಶಗಳಿಗೆ ಸಣ್ಣ ಸಣ್ಣ ಕೆರೆಗಳನ್ನು ಕಟ್ಟುವುದಕ್ಕೆ ಯೋಜನೆ ಹಾಕಿಕೊಳ್ಳಬೇಕು. ಅಲ್ಲಿ 2-3 ದೊಡ್ಡ ದೊಡ್ಡ ಗುಡ್ಡಗಳು ಇವೆ, ಮಳೆ ಬಂದಾಗ ಆ ನೀರು ಗುಡ್ಡದ ಮೇಲೆ ಬಿದ್ದು ಹೊರಗಡೆ ಹರಿದು ಹೋಗುವುದರಿಂದ ಆ ನೀರೆಲ್ಲಾ ವೇಸ್ಟ್ ಆಗುತ್ತದೆ, ವ್ಯವಸಾಯಕ್ಕೂ ಕೂಡ ಉಪಯೋಗವಾಗುತ್ತಾ ಇಲ್ಲ.

ಅಂಥಾ ಕಡೆ ಸಣ್ಣ ಸಣ್ಣ ಕೆರೆಗಳನ್ನು ಕಟ್ಟುವುದಕ್ಕೆ ಪರಿಣಿತರನ್ನು ಕಳುಹಿಸಿ ಆ ಕೆಲಸ ಮಾಡಿಸುವುದು ಅವಶ್ಯಕ ಎಂದು ಹೇಳುತ್ತೇನೆ ಆ ನೀರನ್ನು ಶೇಖರಣೆ ಮಾಡಿ ಜಾನುವಾರುಗಳಿಗೆ ಕುಡಿಯುವುದಕ್ಕೋ ಅಥವಾ ಒಂದು ವ್ಯವಸಾಯಕ್ಕೆ ಉಪಯೋಗಿಸುವುದಕ್ಕೋ ಮಾಡಿಕೊಂಡರೆ ಒಳ್ಳೆಯದು. ಅಂಥಾ ಕೆಲಸ ಆಗಬೇಕು ಎಂದು ನಾನು ಪ್ರಾರ್ಥಿಸುತ್ತೇನೆ. ಸರ್ಕಾರದವರು ಈ ಕೆಲಸಗಳಿಗಾಗಿ ಎಷ್ಟೋ ಹಣ ಖರ್ಚು ಮಾಡಿದ್ದೇವೆ ಅಂತ ಅಂಕಿ ಅಂಶಗಳಲ್ಲಿ ಹೇಳುತ್ತಾರೆ ಆದರೆ ಸ್ಥಳದಲ್ಲಿ ಹೋಗಿ ನೋಡಿದರೆ ಯಾವ ಕೆಲಸವೂ ಸರಿಯಾಗಿ ಆಗುತ್ತಾ ಇಲ್ಲ. ಜನಗಳಿಗೆ ಕಾಳು ಇಲ್ಲ, ದನಗಳಿಗೆ ಮೇವು ಇಲ್ಲ, ಆದುದರಿಂದ ಸರ್ಕಾರದವರು ಈ ಬಗ್ಗೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು ಅದರಲ್ಲೂ ಕೂಡ ಹೆಚ್ಚಾಗಿ ಕ್ಷಾಮಕ್ಕೆ ತುತ್ತಾಗಿರತಕ್ಕಂಥ ಪ್ರದೇಶದಲ್ಲಿ ಹಾಸನ ಜಿಲ್ಲೆಯಲ್ಲಿ ಮಾಡಬೇಕು ಎಂದು ಹೇಳುತ್ತೇನೆ. ಅದರಲ್ಲೂ ಕೂಡ ಅರಸೀಕೆರೆ ತಾಲ್ಲೂಕಿಗೆ ಒಂದು ಹೆಚ್ಚಿನ ನೆರವನ್ನು ಕೊಡಬೇಕು ಎಂದು ಪ್ರಾರ್ಥಿಸಿ, ನನಗೆ ಮಾತನಾಡಲು ಅಧ್ಯಕ್ಷರು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI P.A. PAWASHE (Uchagaon).—Madam Speaker, at the outset, I would like to submit that I entirely agree with the views expressed by my friend Sri N. B. Sardesai that the Revenue officers of Belgaum District have not properly assessed the scarcity conditions prevailing in the district. This view is also fully supported by the Memorandum submitted by the Hon'ble Minister for Revenue before the House, as the list of scarcity affected taluks in Belgaum district does not include the three taluks of Belgaum, Khanapur and Bailhongal which are also affected by the scarcity conditions. There is scarcity of drinking water in many villages, but not even a single village from any taluk of Belgaum has been shown in the list.

Recently, the Hon'ble Minister of State for Minor Irrigation Sri S. B. Nagaral visited and toured the district and we had a meeting in the Circuit House to discuss the scarcity conditions. At that time all the officers concerned and members of the Legislative Assembly were present and they have placed all the facts before the Hon'ble Minister. I think the Hon'ble Minister was also convinced that not only certain taluks but almost all the taluks in Belgaum district have been affected by scarcity conditions–some places partially affected and some fully affected in the entire district.

Speaking about my own constituency–Belgaum taluk, the failure of rains during the months of September and October has very badly affected the paddy crop In the beginning the rains were good and the agriculturists invested lot of money. But due to failure of rains this year, the yield will be between 2 to 4 annas only–not more than 4 annas–is expected in Belgaum taluk So also, ragi, potatoes and other dry crops have completely failed due to failure of rains. The paddy crops have failed and the harvest will not be sufficient for the maintenence of the agriculturists, Therefore, I request the Government to exempt recovery of betterment levy in this area. The water sources such as tanks, bandaras, etc., from which we were getting water have

also failed this year due to failure of rains. I request the Hon'ble Minister for Revenue to exempt Belgaum taluk from water tax this year.

The collection of land revenue and other debts should be suspended this year and the same may be recovered during next year. The small farmers are not in a position to pay the land revenue, takavi loan and other debts this year because they are not getting the expected crops. I request the Government to take up scarcity works in the Belgaum taluk priority being given to Minor Irrigation works. We have also suggested certain Minor Irrigation works to be taken up, such as construction of tanks, bandaras, barrages, etc., which are technically feasible. I request the Government to take up these works, which will be a permanent measure to face the situation. If these works are completed, we will not face the situation of failure of paddy crops, which we have faced this year due to failure of rains during September and October. On the other hand, there will be bumper crop in the area.

As regards drinking water scarcity, at the meeting held at the Circuit House Pelgaum, I had specifically pointed out the villages in Belgaum which are facing acute scarcity of drinking water since the last three years I had submitted a list of villages which are affected with drinking water scarcity. But till today no steps are taken by the Government to make arrangements to provide drinking water to these villages. Atleast during the present scarcity conditions, I request the Government to supply Rig Machines to Belgaum, Khanapur and Bailhongal Taluks so that drinking water arrangements could be made.

The next priority should be given to afforestation, soil conservation work and road works so that employment could be provided to the agricultural labourers I request the Government to take adequate steps for the distribution of food and fodder in the scarcity areas.

With these few words, I thank the Chair and conclude my speech.

† ಶ್ರೀ ಎಸ್. ಎಂ. ತೀರ್ಥಹಳ್ಳಿ ಚಂದ್ರಶೇಖರ್ (ಹೊಸನಗರ). — ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಮಾತನಾಡುವುದಕ್ಕೆ ಮೊದಲು ಸರ್ಕಾರದ ಕಷ್ಟದ ಬಗ್ಗೆ ಸಹಭಾಗಿಯಾಗಿ ನನ್ನ ಅನುಕಂಪವನ್ನು ವ್ಯಕ್ತಪಡಿಸಿ ನನ್ನ ಜಿಲ್ಲೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಶಿವಮೊಗ್ಗ, ಚೆನ್ನಗಿರಿ, ಹೊನ್ನಾಳಿ ಮತ್ತು ಶಿಕಾರಿಪುರ ಇವಿಷ್ಟು ತಾಲ್ಲೂಕುಗಳು ನಮ್ಮ ಜಿಲ್ಲೆಯಲ್ಲಿ ಬಹಳಷ್ಟು ದಾರುಣ ಪರಿಸ್ಥಿತಿಗೆ ಒಳಗಾಗಿವೆ. ತುಂಗಾ, ಭದ್ರಾ ಚಾನಲ್ ಪ್ರದೇಶ ಬಿಟ್ಟರೆ, ಉಳಿದಂತೆ ಸುಮಾರು 150 ಹಳ್ಳಿಗಳು ಇಂದು ಬಹಳಷ್ಟು ಕಷ್ಟದ ಪರಿಸ್ಥಿತಿಯಲ್ಲಿವೆ. ಶಿಕಾರಿಪುರ ತಾಲ್ಲೂಕಿನಲ್ಲಿ 140 ರಿಂದ 150 ಹಳ್ಳಿಗಳು ಕ್ಷಾಮ ಪರಿಸ್ಥಿತಿಯಲ್ಲಿವೆ. ಹೊನ್ನಾಳಿ ತಾಲ್ಲೂಕಿನಲ್ಲಿ 150 ಹಳ್ಳಿಗಳು ಕ್ಷಾಮ ಪರಿಸ್ಥಿತಿಯಲ್ಲಿವೆ. ಅದೇ ರೀತಿ ಚೆನ್ನಗಿರಿ ತಾಲ್ಲೂಕಿನಲ್ಲಿ 140 ಹಳ್ಳಿಗಳು ಕ್ಷಾಮ ಪರಿಸ್ಥಿತಿಯಲ್ಲಿವೆ. ಇಲ್ಲಿ ನಾವು ಎರಡು ವಿಚಾರಗಳನ್ನು ಗಮನಿಸಬೇಕಾಗುತ್ತದೆ. ಒಂದನೆಯದು, ಕೆಲವು ಸಣ್ಣಪುಟ್ಟ ಹಿಡುವಳಿ ಇಟ್ಟುಕೊಂಡು ಬೇಸಾಯ ಮಾಡುತ್ತಿರುತ್ತಾರೆ. ಇವರ ಹತ್ತಿರ ಹಣವಿರುವುದಿಲ್ಲ. ಆದಕಾರಣ ಸಾಲ ಮಾಡಬೇಕಾಗುತ್ತದೆ. ಜೂನ್ ತಿಂಗಳಲ್ಲಿ ಸ್ವಲ್ಪ ಮಳೆ ಬಂದ

ಕಾರಣ ಬೆಳೆಯಾಗುತ್ತದೆಂಬ ಆಶಾಕಿರಣದಿಂದ ಸಾಲ ಮಾಡಿ ಬೀಜ ಬಿತ್ತನೆ ಮಾಡಿದರು. ಆದರೆ ಮುಂದೆ ಮಳೆಯೇ ಆಗದೆ ಬೆಳೆಯಿಲ್ಲದಾಗ ಹೋಗಿದೆ, ಇಂದು ಅವರ ಪರಿಸ್ಥಿತಿ ಏನಾಗಿದೆ ಎಂದರೆ, ಮಾಡಿದಂಥ ಸಾಲವನ್ನು ವಾಪಸ್ ಮಾಡಲು ಅವರಿಗೆ ಶಕ್ತಿ ಇಲ್ಲವಾಗಿದೆ ಮತ್ತು ಮುಂದಿನ ಜೂನ್ ತಿಂಗಳಲ್ಲಿ ಮತ್ತೆ ಬೀಜ ಬಿತ್ತನೆ ಮಾಡಲು ಸಾಲದ ವ್ಯವಸ್ಥೆ ಆಗಬೇಕಾಗಿದೆ. ಇನ್ನು ಅವರು ಕೂಲಿ ಕೆಲಸ ಮಾಡಬೇಕೆಂದರೆ ಅದನ್ನು ಮಾಡಿ ಅವರಿಗೆ ಗೊತ್ತಿಲ್ಲ. ಮಣ್ಣಿನ ಮತ್ತು ಕಲ್ಲಿನ ಕೆಲಸ ಮಾಡಬೇಕೆಂದರೆ ಅವರಿಗೆ ಅನುಭವವಿಲ್ಲ. ಇದರಿಂದ ಅವರಿಗೆ ಮುಂದಿನ 3-4 ತಿಂಗಳ ಕಾಲ ಜೀವನ ನಿರ್ವಹಣೆ ಮಾಡುವುದು ಕಷ್ಟವಾಗಿದೆ. ಆದಕಾರಣ ಮುಂದಿನ 3-4 ತಿಂಗಳವರೆಗೆ ಅವರ ನೆರವಿಗೆ ಸರ್ಕಾರ ಮುಂದೆ ಬರಬೇಕು. ಮರ್ಯಾದಸ್ಥ ಕುಟುಂಬದವರು ಕೂಲಿ ಕೆಲಸ ಮಾಡಲು ಇಷ್ಟಪಡದೆ ಮನೆಯಲ್ಲಿಯೇ ನೀರು ಕುಡಿದುಕೊಂಡು ಇದ್ದಾರೆ.

ಇನ್ನು ಮಾನ್ಯ ಮಂತ್ರಿಗಳು ಬಡ್ಜೆಟ್‌ನಲ್ಲಿ ಸೇರಿಸಿರುವಂತಹ ಕೆಲವು ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು ಆದರೆ ಅಧಿಕಾರಿಗಳು ಆ ಕೆಲಸಗಳನ್ನು ಕೈಕೊಳ್ಳಲು ಟೆಕ್ನಿಕಲೀ ಫೀಜಿಬಿಲಿಟಿ ಇಲ್ಲ ಎಂದು ಹೇಳುತ್ತಾರೆ. ಇದನ್ನು ತಾವು ಗಮನಿಸಬೇಕಲ್ಲದೆ ತಾವು ಸಂಪೂರ್ಣವಾಗಿ ಅಧಿಕಾರಿಗಳವರದಿಯನ್ನೇ ಅವಲಂಬಿಸಬಾರದೆಂದು ಅರಿಕೆಮಾಡಿಕೊಳ್ಳುತ್ತೇನೆ. ಈಮೊದಲು ಹಳೆಯ ಮೈಸೂರು ಭಾಗದಲ್ಲಿ ಅಭಾವ ಬಂದಾಗ ಶಿವಮೊಗ್ಗ ಜಿಲ್ಲೆಯನ್ನು ಅಭಾವ ಪೀಡಿತ ಪ್ರದೇಶವೆಂದು ಸಾರದೆ ಅದನ್ನು ಕೈಬಿಟ್ಟರು. ಇದನ್ನು ಸೇರಿಸದಿರಲು ಕಾರಣವೇನೆಂದು ಟ್ರಂಕಾಲ್ ಮಾಡಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದಾಗ ಅಧಿಕಾರಿಗಳ ವರದಿಯ ಮೇಲೆ ಅದನ್ನು ಸೇರಿಸಿಲ್ಲವೆಂದು ಹೇಳಿದರು. ನಂತರ ನಾನು ಡಿ. ಸಿ ಅವರನ್ನು ಕೇಳಿದ್ದಕ್ಕೆ, ಮಳೆಯಾದ ಕಾರಣ ಈ ಬಗ್ಗೆ ನಾನು ಸರ್ಕಾರಕ್ಕೆ ವರದಿ ಕಳುಹಿಸಿಲ್ಲವೆಂದು ಹೇಳಿದರು. ಆದರೆ ಶಿವಮೊಗ್ಗ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವಿಲ್ಲದಿರುವ ಭಾಗಗಳು ಬರಗಾಲಕ್ಕೆ ಒಳಗಾಗಿವೆ ಎಂಬುದು ತಮಗೆ ಅನಂತರ ತಿಳಿಯಿತು. ಈಗ ಬಂದಿರುವ ಬರಗಾಲವನ್ನು ಎದುರಿಸಲು 21 ಕೋಟಿ ರೂ. ಗಳನ್ನು ಖರ್ಚು ಮಾಡಿದರೆ, ಅದು ಭೀಮನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ ಆಗುತ್ತದೆ. ಆದಕಾರಣ ನೂರು ಕೋಟಿಗಳಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಏಕೆಂದರೆ ಈ ಮೊದಲು ಹಳೆಯ ಮೈಸೂರಿನ ಒಂದೆರಡು ಜಿಲ್ಲೆಗಳಲ್ಲಿ ಮಾತ್ರ ಬರಗಾಲ ಬಂದಿತ್ತು. ಆದರೆ ಈಗ ಎಲ್ಲ ಜಿಲ್ಲೆಗಳಿಗೂ ಈ ಪರಿಸ್ಥಿತಿ ಬಂದಿದೆ. ತಾವು ಈಗ ಅಗ್ನಿ ಪರೀಕ್ಷೆಗೆ ಒಳಗಾಗಿದ್ದೀರಿ. ಅದರಿಂದ ನೀವು ವಿಮೋಚನೆ ಹೊಂದಬೇಕಾಗಿದೆ. ಈ ವಿಚಾರದಲ್ಲಿ ತಾವು ಪ್ರತಿ ತಾಲ್ಲೂಕ ಸಲ್ಲಿಯೂ ಶಾಸಕರನ್ನು ಒಳಗೊಂಡಂತಹ ಸಮಿತಿಗಳನ್ನು ರಚನೆ ಮಾಡಿ, ಅವರ ಅಭಿಪ್ರಾಯದಂತೆ ಕೆಲಸಕಾರ್ಯಗಳನ್ನು ಕೈಕೊಳ್ಳಬೇಕು. ಇದರಲ್ಲಿ ಶಾಸಕರನ್ನು ಏತಕ್ಕೆ ಸೇರಿಸಬೇಕೆಂದರೆ, ಜನತೆಯ ಮೇಲೆ ಶಾಸಕರಿಗೆ ನೇರವಾದಂಥ ಜವಾಬ್ದಾರಿ ಇರುತ್ತದೆ. ಏನಾದರೂ ಹೆಚ್ಚುಕಡಿಮೆಯಾದರೆ, ಜನತೆ ಶಾಸಕರನ್ನು ಹಿಡಿದು ನಿಲ್ಲಿಸಿ ಕೇಳುತ್ತಾರೆ. ಆದರೆ ಅಧಿಕಾರಿಗಳನ್ನು ಆ ರೀತಿ ಕೇಳುವುದಕ್ಕಾಗುವುದಿಲ್ಲ. ಆದಕಾರಣ ಶಾಸಕರನ್ನು ಒಳಗೊಂಡಂತಹ ಸಮಿತಿಗಳನ್ನು ರಚನೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಮಲೆನಾಡಿನ ವಿಚಾರವನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಕೋಣಂದೂರು ಲಿಂಗಪ್ಪನವರು ಈಗಾಗಲೇ ಹೇಳಿದ್ದಾರೆ. ಬೆಳೆ ಸರಿಯಾಗಿ ಆಗದ ಕಾರಣ ಲೆವಿಯನ್ನು ವಜಾ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಕೆರೆಗಳ ಕೆಲಸವನ್ನು ಕೈಕೊಂಡರೆ ಅನೇಕ ಜನರಿಗೆ ಕೆಲಸ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ಸಿಂಗೆಹಳ್ಳ ಪ್ರಾಜೆಕ್ಟ್ ಕೆಲಸ ಕೈಕೊಳ್ಳಲಾಗಿದೆ. ಎಲ್ಲ ಜನರೂ ಅಲ್ಲಿಗೇ ಹೋಗಿ ಕೆಲಸ ಮಾಡುವುದು ಕಷ್ಟವಾಗುತ್ತದೆ. 25-30 ಮೈಲಿ ದೂರ ಹೋಗಿ ಕೆಲಸ ಮಾಡುವುದು ಎಷ್ಟು ಕಷ್ಟವಾಗುತ್ತದೆಂಬುದನ್ನು ತಾವೇ ಅರ್ಥ ಮಾಡಿಕೊಳ್ಳಬೇಕು. ಆದಕಾರಣ ಸಣ್ಣಪುಟ್ಟ ಕೆಲಸಗಳನ್ನು ಕೈಕೊಳ್ಳದೇ ಹೋದರೆ ಜನರು ತಮ್ಮ ಜೀವನ ನಿರ್ವಹಣೆ ಮಾಡುವುದು ಕಷ್ಟವಾಗುತ್ತದೆ. ಎಷ್ಟು ಜನರು ಕೆಲಸ ಮಾಡುವುದಕ್ಕೆ ಸಿದ್ಧರಾಗಿದ್ದಾರೆಂಬುದನ್ನು ತಾವೇ ಪರಿಶೀಲನೆ ಮಾಡಿ ನೋಡಬೇಕಲ್ಲದೆ ಅಧಿಕಾರಿಗಳ ವರದಿಯನ್ನೇ ತಾವು ಅವಲಂಬಿಸಬಾರದೆಂದು ಖಂಡಿತವಾಗಿ ಹೇಳುತ್ತೇನೆ. ತಾವು ನಮ್ಮ ಜಿಲ್ಲೆಯ ಜನರ ಕಷ್ಟವನ್ನು ಅರಿತುಕೊಳ್ಳಲು ಪ್ರವಾಸ ಕೈಕೊಂಡಿದ್ದಕ್ಕೆ ನನ್ನ ಧನ್ಯವಾದಗಳನ್ನು ತಮಗೆ ಅರ್ಪಿಸುತ್ತೇನೆ ಆದರೆ ಒಂದು ವಿಷಯವನ್ನು ನಾವು ಇಲ್ಲಿ ಅರ್ಥಮಾಡಿಕೊಳ್ಳಬೇಕಾಗಿದೆ ಏಕೆಂದರೆ, ಒಂದೇ ದಿವಸದಲ್ಲಿ ಇಡೀ ಜಿಲ್ಲೆಯ ಕಾರ್ಯಕ್ರಮವನ್ನು ಹಾಕಲಾಗಿತ್ತು. ಅಧಿಕಾರಿಗಳು ಬುದ್ಧಿ ಇದ್ದೂ ಈ ರೀತಿ ಮಾಡಿದರೇ ಹೇಗೆ ಎಂದು ಕೇಳಬೇಕಾಗಿದೆ. ಅಂದು

ತಾವು ಚೆನ್ನಗಿರಿ ತಾಲ್ಲೂಕ್ ಬಂದರ ಪ್ರವಾಸವನ್ನೇ ಪೂರೈಸುವುದಕ್ಕೆ ಸಾಧ್ಯವಾಗಲಿಲ್ಲ. ಇತರೆ ತಾಲ್ಲೂಕ್‌ನ ಜನರು ತಾವು ಬರುತ್ತೀರಾ ಎಂದು ಆ ದಿನ ಕಾದುಕೊಂಡಿದ್ದು ಕೊನೆಗೆ ನಿರಾಶೆಯ ಮನೋಭಾವದಿಂದ ವಾಪಸ್ ಮನೆಗೆ ಹೋದರು ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಾರೆಂಬುದನ್ನು ತಾವು ಇದರಿಂದಲೇ ಅರ್ಥಮಾಡಿಕೊಳ್ಳಬಹುದು ತಾವು ಇನ್ನೊಮ್ಮೆ ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡುವುದರ ಮೂಲಕ ಜಿಲ್ಲೆಯ ಜನರ ಕಷ್ಟಗಳನ್ನು ತಿಳಿದುಕೊಳ್ಳಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಪ್ರಜಾವಾಣಿ ಪತ್ರಿಕೆಯಲ್ಲಿ ಶಿವಮೊಗ್ಗದಲ್ಲಿ ಮಳೆ ಬಂತು ಎಂದು ವರದಿ ಬಂದಿದೆ. ಆ ವರದಿ ಸರಿಯಿಲ್ಲ, ಏಕೆಂದರೆ, ಆ ದಿನ ನಾನು ಅಲ್ಲಿಯೇ ಇದ್ದೆ. ತುಂತುರು ಹನಿ ಮಾತ್ರ ಬಂತು. ಆದರೂ ಅಧಿಕಾರಿಗಳು ಮಳೆಯಾಯಿತೆಂದು ವರದಿ ಕಳುಹಿಸಿದ್ದಾರೆ ಇದರಿಂದ ಜಾನುವಾರುಗಳಿಗೆ ಬೇಕಾದಂಥ ಹುಲ್ಲು ಬೆಳೆಯಬಹುದೇ ಹೊರತು ಬೆಳೆಗೆ ಅನುಕೂಲವಾಗುವುದಿಲ್ಲ. ಆದಕಾರಣ ನಮ್ಮ ಜಿಲ್ಲೆಯಲ್ಲಿ ಸಾಯಿಲ್ ಕನ್ಸರ್‌ವೇಷನ್ ವರ್ಕ್ಸ್, ಅಫಾರೆಸ್ಟೇಷನ್ ವರ್ಕ್ಸ್ ಮತ್ತು ಸಣ್ಣ ಸಣ್ಣ ಟ್ಯಾಂಕ್‌ಗಳ ಕೆಲಸವನ್ನು ತರಾತುರಿಯಿಂದ ಪ್ರಾರಂಭ ಮಾಡಬೇಕು. ಮಾನ್ಯ ವೆಂಕಟಪ್ಪನವರು ಅಜ್ಜಂಪುರ ಡ್ಯಾಮ್ ವಿಚಾರವನ್ನು ಹೇಳುತ್ತಿದ್ದರು. ಮತ್ತು ಈ ಸಲದ ಬೆಳೆ ಯಾವ ರೀತಿ ತಪ್ಪಿಹೋಯಿತೆಂಬುದನ್ನು ಸಹ ಅವರು ಹೇಳಿದರು ಆದಕಾರಣ ಸರ್ಕಾರದವರೇ ಈ ಕೆಲಸಕಾರ್ಯಗಳ ಬಗ್ಗೆ ನೇರವಾದ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಸಂಪೂರ್ಣವಾದಂಥ ಜವಾಬ್ದಾರಿ ಸರ್ಕಾರದ ಮೇಲಿರುವುದರಿಂದ ಅದನ್ನು ಸರ್ಕಾರದವರೇ ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI K. ABDUL SUBHAN (Tumkur).—Madam Speaker, Sir, this is an accepted fact that about two-third of Karnataka has been severely affected by drought and one-third is slightly affected as disclosed by the members of the Opposition. This is not the first time that we have been affected by natural calamities in the form of drought. We had such a calamity last year in the Hyderabad Karnataka area and we have spent Rs 64 crores over unproductive works. Earlier to this, we had one more natural calamity in the form of floods in the South Canara District There we have spent some crores of rupees over unproductive works.

11-30 A.M.

Now we are having a severe type of drought. About 2/3 of Karnataka is having drought and we are going to invest some crores of rupees on unproductive works. According to economists, investment over unproductive work will lead to inflation, Under th leadership of our Prime Minister we have succeeded in arresting infa tion. But, now on account of this investment over unproductive works we add to the inflation. I do not like to go into details. The main cause why we have been affected by droughts is, being a scientist myself, I can say that it is due ecological imbalances created. This ecological imbalance can be treated by natural phenomenon and unnatural phenomenon. The scientists have come forward with the theory that this ecological imbalance is due to the extension of ice beds. On account of this monsoons have drifted one latitude towards south. That is why we are not having adequate monsoons and the pattern or monsoons has been changed. We used to have intermittent heavy and isolated rainfall in the mansoons This year

we had only isolated rains and not intermittent or heavy rains, The isolated rains have no use for agricultural operations. So in the absence of regular rain you cannot have a permanent cure for the recurrence of drought. Second theory propounded by Japanese scientists is that the entire universe has changed It is due to the rotation of earth and account of that we are having this type of climatic condition.

The third theory is we human beings have also added to the ecological imbalance by reducing the forest area, Deforestation and seeding of clouds have all contributed for this poor rainfall On account of seedling of clouds last year Tumkur had 52'' rainfall and there was the prophecy by the scientists that in the subsequent year we will have drought. It has come true. If we had spent at least Rs. 20 lakhs at the appropriate time the anticipated loss of Rs. 200 lakhs in agriculture could have been avoided. We are going ahead with building major dams. We have not taken in to account the huge number of flora that come under submersion. In the absence of raising nurseries all that were there have submerged We ought not to have taken up major irrigation work without first raising nurseries By not paying sufficient attention to raise nurseries these imbalances have been created. We are all fully aware that we are not having assured water supply. In the absence of abundent water supply it is not wise to attempt for green revolution. Green revolution is possible only in the Gangetic plain. When we are having lowest percentage of rainfall how can we aim at green revolution, The other alternative is to tap the underground water. We are having agricultural operation by making use of underground water. But the percentage in our State is far less than in the neighbouring States like Andhara and Tamilnadu. The concrete proposal which I would like to give is that we extend Hemavathi Project to Tumkur by investing a few crores of rupees which will help in greater food production.

With these words I thank the chair for giving me an opportunity to speak.

ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮೊದಲು ನಮ್ಮ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶದ ಪಟ್ಟಿಯಲ್ಲಿ ಸೇರಿಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ವಂದಿಸುತ್ತೇನೆ. ಕೋಲಾರ ಡಿಸ್ಟ್ರಿಕ್ಟ್ ಮತ್ತು ಚಿತ್ರದುರ್ಗ ಜಿಲ್ಲೆಗಳು ಮೊದಲಿನಿಂದಲೂ 2 ವರ್ಷಕ್ಕೆ 3 ವರ್ಷಕ್ಕೊಂದುಸಲ ಬರಗಾಲಕ್ಕೆ ತುತ್ತಾಗುತ್ತವೆ. ಸರ್ಕಾರದವರು ಅಲ್ಲಿ ಈಗಾಗಲೇ ಡಿಪಿಎಪಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾ ಇದ್ದಾರೆ. ಆದುದರಿಂದ ಇದಕ್ಕೆ ಪರ್ಮನೆಂಟಾಗಿ ಯೋಜನೆಯನ್ನು ಹಾಕಿಕೊಂಡು ಶಾಶ್ವತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ನಾನು ಬೇಡಿಕೊಳ್ಳುತ್ತೇನೆ ಅದಕ್ಕೋಸ್ಕರ ಗಂಗಾ ನದಿ ಯೋಜನೆಯನ್ನು ನಮ್ಮ ಕರ್ನಾಟಕಕ್ಕೆ ತಂದು ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ತಂದು ಪರ್ಮನೆಂಟ್ ನೀರಾವರಿ ಯೋಜನೆಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈ ಡಿಪಿಎಪಿ ಪ್ರೋಗ್ರಾಂನಿಂದ ಸಣ್ಣ ರೈತರಿಗೆ ಬಹಳ ಅನು

ಕೂಲವಾಗಿದೆ. ಅಲ್ಲದೆ ಕಾರ್ಮಿಕರಿಗೆ ಮಧ್ಯಮ ವರ್ಗದ ಸಂಸಾರಗಳಿಗೆ ಇದರಿಂದ ಪರ್ಮ ನೆಂಟ್ ಯೋಜನೆ ಒಂದನ್ನು ಹಾಕಬೇಕು ಇದಕ್ಕೆ ಹಣ ಒದಗಿಸಿರುವುದು ಸಾಲದು. ಚಿಂತಾಮಣಿಯಲ್ಲಿ ಬ್ಯಾಂಕಿನಿಂದ, ಸೊಸೈಟಿಯಿಂದ ಹಸುಗಳನ್ನು ಕೊಳ್ಳಲು ಕೊಡಿಸಿ 10—15 ಮೈಲಿ ವಿಸ್ತೀರ್ಣದಿಂದ ಸುಮಾರು 4500 ಲೀಟರ್ ಹಾಲನ್ನು ಬೆಂಗಳೂರು ಡೈರಿಗೆ ಪ್ರತಿದಿನ ಕಳುಹಿಸುತ್ತಾ ಇದ್ದೇವೆ. ಈ ರೀತಿ ಕಾರ್ಯಕ್ರಮಗಳನ್ನು ಹಾಕಿ ಬಡಜನರಿಗೆ ದಿನವಹಿ ಕಡೇಪಕ್ಷ 4 ರಿಂದ 6 ರೂಪಾಯಿಯವರೆಗೆ ಆದಾಯ ಬರತಕ್ಕ ಪರ್ಮನೆಂಟ್ ಯೋಜನೆಯನ್ನು ಹಾಕಬೇಕು ಅದನ್ನು ಹಾಕಿದರೆ ಈ ದಿನ ಸಣ್ಣ ರೈತರಿಗೆ, ಮಧ್ಯಮ ರೈತರಿಗೆ, ಒಂದು ಶಾಶ್ವತವಾದ ಮತ್ತು ಯಾವಾಗಲೂ ಹಣ ದೊರಕುವಂತ ಒಂದು ಯೋಜನೆಯಾಗುತ್ತದೆ, ಅವರು ಅದರಿಂದ ಬದುಕುತ್ತಾರೆ. ನಮ್ಮ ಸರ್ಕಾರದವರು ಕಾರ್ಮಿ ಕರಿಗೆ ಬೇರೆ ಬೇರೆ ಯೋಜನೆಗಳನ್ನು ಹಾಕಿಕೊಂಡಿದ್ದಾರೆ, ಹ್ಯಾಂಡ್‌ಲೂಂ ಖಾದಿಯಿಂದ ಬಟ್ಟೆ ಗಳನ್ನು ನೇಯುತಕ್ಕ ಮತ್ತು ಇನ್ನಿತರ ಉಪಕಸುಬುಗಳನ್ನು ಜನರಿಗೆ ಕೊಟ್ಟು ಅವರು ಅದ ರಿಂದ ಜೀವನ ಮಾಡುವುದಕ್ಕೆ ಅನುಕೂಲ ಮಾಡಬೇಕು ಪ್ರತಿ ಸಂಸಾರಕ್ಕೂ ಮಾಹೆಯಾನ 400 ರಿಂದ 500ರೂ. ಆದಾಯ ಬರುವ ರೀತ್ಯ ಯೋಜನೆಯನ್ನು ಹಾಕಬೇಕು. ನಮ್ಮ ತಾಲ್ಲೂಕಿ ನಲ್ಲಿ ಬಹಳ ಸ್ವಲ್ಪ ಮಳೆ ಬಂದು ಅಷ್ಟೋ ಇಷ್ಟೋ ನೀರು ಬಂದಿದೆ. ಆದರೂ ಸಾಲುವು ದಿಲ್ಲ. 5 ಪರ್ಸೆಂಟ್ ಅಥವಾ 10 ಪರ್ಸೆಂಟ್ ಮಾತ್ರ ಬೆಳೆಗಳಾಗುವ ನಿರೀಕ್ಷೆ ಇದೆ. ಅದ ಕ್ಕೋಸ್ಕರ ತಾವು ಹೆಚ್ಚಿನ ರೀತಿಯಲ್ಲಿ ಫಾಡರ್ ಕೊಡಬೇಕು. ಶ್ರೀಮಾನ್ ದೇವೇಗೌಡರು ಹೇಳಿದ ಹಾಗೆ ರೈತರಿಗೆ ಸಾಲದ ರೂಪದಲ್ಲಿ ಫುಡ್‌ಗ್ರೈನ್ಸ್ ಕೊಡಬೇಕು, ಸಾಲದ ಮುಖಾಂತರ ರೈತರಿಗೆ ಫುಡ್‌ಗ್ರೈನ್ಸ್ ಕೊಡುವುದರಿಂದ ರೈತರು ಬದುಕುತ್ತಾರೆ. ಸದರಿ ಸಾಲವನ್ನು ಕೊನೇಪಕ್ಷ ಮುಂದಿನ ವರ್ಷವಾದರೂ ಅವರು ತೀರಿಸುವುದಕ್ಕೆ ಅನುಕೂಲವಾಗು ತ್ತದೆ, ಇದಲ್ಲದೆ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಾಗಿ ಜಾನುವಾರುಗಳಿವೆ. ಅವುಗಳಿಗೆ ಬೇರೆ ಕಡೆಯಿಂದ ಹುಲ್ಲನ್ನು ತರಿಸಿಕೊಟ್ಟರೆ ಹೆಚ್ಚಿನ ರೀತಿಯಲ್ಲಿ ಸಹಾಯವಾಗುತ್ತದೆಂದು ಹೇಳಿ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ ಎಂ. ಹೊರಕೇರಿ (ಗುಳೆದಗುಡ್ಡ).—ಮಾನ್ಯ ಸಭಾಪತಿಗಳೇ, ಮಾನ್ಯ ರಾಜ್ಯ ಸರ್ಕಾರದವರು ಅಭಾವ ಪರಿಸ್ಥಿತಿಯನ್ನು ಕುರಿತು ಕೇಂದ್ರ ಸರ್ಕಾರಕ್ಕೆ ಸಾದರ ಪಡಿಸಿದ ಎರಡೂ ಮೆಮೊರ್ಯಾಂಡಂದಲ್ಲಿ ವಿಜಾಪುರ ಜಿಲ್ಲೆಯ ದಕ್ಷಿಣ ಭಾಗದ ತಾಲ್ಲೂಕುಗಳ ಅಭಾವ ಪರಿಸ್ಥಿತಿ ಯಾವುದೇ ವರ್ಗದಲ್ಲಿ ಫುಲ್ ಪಾರ್ಷಿಯಲ್, ಡ್ರೈ ಬೆಲ್ಟ್ ವರ್ಗದಲ್ಲಿ ಕಾಣದೆ ಇರುವುದು ಆಶ್ಚರ್ಯಕರವಾದುದಲ್ಲದೆ ವಿಷಾದಕರವೆಂದು ಹೇಳಬಹುದು, ಈ ಭಾಗಕ್ಕೆ ಹೊಂದಿಕೆಯಾಗಿದ್ದ ರಾಯಚೂರು ಧಾರವಾಡ, ಬೆಳಗಾವ ಜಿಲ್ಲೆಯ ತಾಲ್ಲೂಕುಗಳು, ಲಿಂಗ ಸೂಗೂರು, ಕುಷ್ಟಗಿ, ರೋಣ ರಾಮದುರ್ಗಗಳಲ್ಲಿ ಅಭಾವವಿದ್ದು, ಅಭಾವ ಪ್ರದೇಶಗಳನ್ನು ಆವರಿಸಲ್ಪಟ್ಟ ಮಧ್ಯದಲ್ಲಿ ಉರುವ ಬೀಳಗಿ, ಮುದೋಳ ಬಾಗಲಕೋಟೆ ಬಾದಾಮಿ ಹುನ ಗುಂದ ತಾಲೂಕುಗಳಲ್ಲಿ ಅಭಾವವಿಲ್ಲದಿರುವುದು ಸೋಜಿಗವಾದ ಸಂಗತಿ. ಪ್ರಕೃತಿಯ ಸ್ವರೂಪ ಒಂದೇ ಇದ್ದು ಈ ಪ್ರದೇಶದಲ್ಲಿ ಹೀಗೆ ಭಿನ್ನಾಭಿಪ್ರಾಯವಿರುವುದಕ್ಕೆ ಕಾರಣವೇನೊ ತಿಳಿಯದು ಆಗಾಗ್ಗೆ ಬರಗಾಲಗಳಿಂದ ಪೀಡಿತರಾಗಿ ಅನುಭವ ಪಡೆದು ಗಟ್ಟಿಗರಾದ (ಸೀಸನಲ್) ನಮಗೆ ಈ ಸಲ ಅಭಾವದ ಬೆಸಿಗೆ ಬಡೆದಿದ್ದರೂ ಬಡೆದಿಲ್ಲವೆಂದೂ ವರದಿಯ ದಕ್ಷಿಣ ಭಾಗದ ತಾಲ್ಲೂಕಿನವರಿಗೆ ಕಳವಳವನ್ನುಂಟುಮಾಡಿದೆಯೆನ್ನಬೇಕೋ ಅಥವಾ ನಾವು ಉದಾರಿಗಳೆನ್ನಬೇಕೋ ತಿಳಿಯದಾಗಿದೆ. ಅಭಾವ ಪೀಡಿತ ಪ್ರದೇಶಗಳೆಂದು ಸಾರುವ ಜಿಲ್ಲೆಯ ಕಂದಾಯ ಅಧಿಕಾರಿಗಳು ಕೊಟ್ಟ ವರದಿ ಶಾಸಕರ ವರದಿ ಸಾರ್ವಜನಿಕರ ಅರ್ಜಿ ಇವುಗಳ ಮೇಲಿ ನಿಂದ ತೀರ್ಮಾನಿಸಬೇಕಾಗುತ್ತದೆಯೋನೋ ನಿಜ. ಇದಕ್ಕೆಲ್ಲಾ ಆಧಾರ ಭೂತವಾದ ಮಳೆಯ ಪರಿಮಾಣವು ಅಗತ್ಯ ಈ ತಾಲ್ಲೂಕಿನಲ್ಲಿ ಮಳೆಯ ಪರಿಣಾಮವೆಷ್ಟು. ಬೆಳೆ ಬರಬೇಕಾದ ಮಳೆಯ ಅಗತ್ಯ ವೆಷ್ಟು ? ಸಕಾಲಿಕವಾಗಿದೆಯೋ ಇಲ್ಲವೋ ಎಂಬುದರ ವಿಚಾರಣೆಯನ್ನು ಪ್ರತ್ಯಕ್ಷ ಅರಿಯ ಬೇಕು. ಸಂಥಿಂಗ್ ಈಸ್ ಬೆಟರ್ ದ್ಯಾನ್ ನತಿಂಗ್ ಎಂಬಂತೆ ಅಲ್ಪ ಮಳೆಯ ಬರಲಿದ್ದನ ಮಗೆ ಬಡಪೈರು ಕೆಲ ಕೆಲವು ಭಾಗ ಪ್ರದೇಶದಲ್ಲ ಬಂದಿದೆ. ಹೀಗಾಗಲು ಬದಲಾಯಿಸುತ್ತಿರುವ

ನಿಸರ್ಗವೂ ಕಾರಣವೇ ಅದಕ್ಕಾಗಿ ತಾ 10-11-1976ರಂದು ಸದನದಲ್ಲಿ ಪ್ರಶ್ನೆ ಕೇಳಿ ಪ್ರತಿ 10—20 ಮೈಲಿಗೆ ಒಂದರಂತೆ ವೇಧ ಶಾಲೆಯ ಘಟಕಗಳನ್ನು ಸ್ಥಾಪಿಸಿ ಆಯಾ ಪ್ರದೇಶದ ಮಳೆಗಾಲ ಋತುಮಾನಗಳ ಪರಿಸ್ಥಿತಿ ಅರಿಯಬೇಕೆಂಬುದಾಗಿ ನನ್ನ ಆಶೆ ಏಕೆಂದರೆ 8—8—1976 ರಂದು ಸಂಜೆ ಬಾದಾಮಿಯಲ್ಲಿ ದೊಡ್ಡ ಮಳೆ, ಅಂದಾಜು 6 ಇಂಚು ಆಯಿತು. ಈ ಮಳೆಯ ಇಂಟೆನ್ಸಿಟಿಯ ಮೇಲಿಂದ ತಾಲ್ಲೂಕಿನ ತುಂಬೆಲ್ಲಾ ಸಮೃದ್ಧ ಮಳೆಯಾಯಿತೆಂದು ಅನಿಸಿ ಸಂತೋಷ ಭರಿತರಾದೆವು. ಮುಂಜಾವೆ ಬೇರೊಂದು ಕಡೆಗೆ ಪ್ರವಾಸಕ್ಕೆ ಹೋದಾಗ ಈ ಮಳೆ ತನ್ನ ರಭಸವನ್ನು 8—10 ಮೈಲು ದಾಟಿರಲಿಲ್ಲ. ಅಲ್ಲಿ ಮಳೆಯಾದ ಚಿಹ್ನೆಗಳೇ ಕಾಣಲಿಲ್ಲ ಹೀಗೆ ತಾಲ್ಲೂಕಿನ ಸ್ಥಳದಲ್ಲಿಯ ಮಳೆಯ ಮಾಪಕ ಯಂತ್ರದಿಂದಲೂ ಇಡೀ ತಾಲೂಕಿನ ಭವಿಷ್ಯವೂ ಒಮ್ಮೊಮ್ಮೆ ನಿರ್ಧರಿಸಲ್ಪಡುವ ಸಂಭವವೂ ಇದೆ. ಈ ಪರಿಸ್ಥಿತಿ ನಮಗೆ ಈ ವರ್ಷ ಆಗಿದೆಯೋ ಎಂಬ ಸಂಶಯ. ಈ ಮಳೆಯ ಪ್ರಭಾವದಿಂದ ಬಾದಾಮಿ ಸುತ್ತಲಿನ 10—12 ಚದುರ ಮೈಲ ಪ್ರದೇಶದ ಶೇಂಗಾ, ಜೋಳ, ಸಜ್ಜೆ ಬೆಳೆ ಸಾಧಾರಣ ಕೈಗೆ ಬಂದವು ಆದರೆ ದೀರ್ಘಾವಧಿ ಬೆಳೆಯಾದ ಹಬ್ಬಿ ಶೇಂಗಾ ಇನ್ನೆರಡು ಮಳೆಗಳ ಅಭಾವದಿಂದ ಸರಿಯಾಗಿ ಲೆಕ್ಕಚಾರವಾಗಿ ಬರಲಿಲ್ಲ. ರೈತರ ಭರವಸೆ ಮಳೆಗಳಾದ ಹಸ್ತ ಉತ್ತರಿ ಮಳೆಗಳು ಆಗಲಿಲ್ಲ ಆದರೆ ಹಸ್ತ ಇಲ್ಲದಿದ್ದರೆ ಒಕ್ಕಲಿ ಹಲುಕಿಸ್ತು, ಉತ್ತರಿ ಹೋದರೆ ಲೋಕ ಇನ್ನೆತ್ತ ಒದುಕುವುದು ಎಂಬಂತೆ ನಮ್ಮ ಪಾಡಾಗಿದೆ ಮುಂಗಾರಿ ಬೆಳೆಯ ಪಾಡಂತೂ ಮುಗಿದಿದೆ ಹಿಂಗಾರಿ ಬಿತ್ತನೆಯಾಗದೆ ವಿಶೇಷತ ಕಪ್ಪು ಭೂಮಿಗಳಿದ್ದು ಹುನಗುಂದ ಬೀಳಗಿ ತಾಲ್ಲೂಕುಗಳಲ್ಲಿ ಆಗಲೀ 50 ಪರ್ಸೆಂಟ್ ನಷ್ಟ ಕಪ್ಪು ಭೂಮಿದ್ದು ಬದಾಮಿ, ಬಾಗಲಕೋಟೆ ಮುಧೋಳ ತಾಲ್ಲೂಕಿನಲ್ಲ ಹತ್ತಿ ಬಿಳಿ ಜೋಳ ಗೋಧಿ ಬಿತ್ತನೆಯಾಗಿದ್ದಲ್ಲ, ಬರಸು ಭೂಮಿ ಉನ್ನತ ಭೂಮಿ ಕರಲ ಮಣ್ಣಿನಲ್ಲಿ ದೇವಾಂಶ ಇಲ್ಲದ್ದಕ್ಕೆ ನಿಂತಿವೆ. ಬಿಳಿ ಜೋಳ ಗೋಧಿ ನಾಟಿಕೆ ಜನನ ಪ್ರಮಾಣ ಸರಿಯಾಗಿ ಆಗಿಲ್ಲ. ತಗ್ಗು ಪ್ರದೇಶ ಸವಾಪಾಳಿ ಕ್ಷೇತ್ರ ಮೆತ್ತನೆ ಭೂಮಿ ಬಿತ್ತನೆ ಸರಿಯಾಗಿದ್ದಾಗ್ಯೂ ಅಲ್ಪ ಮಳೆಯಿಂದ ಕೆಲವೆಡೆ ಕಳಗೆ ಹಸಿ ತಾಯಿಹಸಿಗೆ ಕೂಡಿಲ್ಲ ಆದ್ದರಿಂದ ಒಂದು ಒಣ ಮಣ್ಣಿನ ತರಹ ಆಗಿವೆ, ಮೇಲು ಹಸಿ ಈವರೆಗಿತ್ತು. ನಿಸರ್ಗದ ತ್ರಿವಾದತಾಯಿ ಹಸಿ ಇದೆ. ಇವೆರಡರ ಮಧ್ಯೆ ಹಸಿಯಿಲ್ಲದ ಒಣ ತರವಿದ್ದು ಹಿಂಗಾರು ಬೆಳೆಗಳು ಬರುವ ಸಂಬವವಿಲ್ಲ ಕಾರಣ ಸದ್ಯದಲ್ಲಿ ಇಲ್ಲ ಆಗತಕ್ಕ ಕೆಡಕಿನ ಮಳೆಗಳಿಂದಲಾದರೂ ಬೆಳೆ ಬಂದರೆ ಸಾಕು. ಕೆಡಕಿನ ಮಳೆಗಳಾಗದಿದ್ದರೆ ನಮ್ಮದು ಅಭಾವ ಪರಿಸ್ಥಿತಿಯೆಂದರೆ ಯಾವ ತಪ್ಪಾಗಲಿಕ್ಕಿಲ್ಲ.

ಸೆಪ್ಟಂಬರ್ ಮಿಡಲ್ ಮತ್ತು ನವೆಂಬರ್ ಮಿಡಲ್ ವರದಿ ಈಗಾಗಲೇ ಒಪ್ಪಿಸಿದಂತೆ ಜನವರಿ ಮಿಡಲ್ ವರದಿ ಒಪ್ಪಿಸುವುದಿದ್ದಲ್ಲ ಸಮೀಕ್ಷೆ ಮಾಡಿ ವಿಜಾಪುರ ಜಿಲ್ಲೆಯ ದಕ್ಷಿಣ ಭಾಗದ ತಾಲ್ಲೂಕಿನ ಅಭಾವ ಪರಿಸ್ಥಿತಿ ಅವಲೋಕಿಸಿ ಶೀಘ್ರ ಮತ್ತು ಸೂಕ್ತ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗಟ್ಟಿಚಂದ್ರಶೇಖರ್ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಸಭೆಯಲ್ಲಿ ಬರಗಾಲದ ಪರಿಸ್ಥಿತಿಯ ಬಗ್ಗೆ ಬೇಕಾದಷ್ಟು ಚರ್ಚೆ ನಡೆಯುತ್ತಿದೆ. ಇಲ್ಲಿ ನಾವು ಕೂತುಕೊಂಡು ಚರ್ಚೆಮಾಡಿದರೆ ಅಲ್ಲಿ ಜನಗಳು, ದನಗಳು ಸಾಯುತ್ತಿವೆ. ಬರೀ ಚರ್ಚೆ ಮಾಡಿದರೆ ಕೆಲಸಗಳು ಆದಂತೆ ಅಲ್ಲ ನಾವು ಬೆಂಗಳೂರಿನಲ್ಲಿ ನಾಗರೀಕರಿಗೆ ರೇಷನ್ ಕಾರ್ಡ್ ಮಾಡಿ ದವಸವನ್ನು ಕೊಡುತ್ತೇವೆ, ದವಸದ ಕೊಂದರೆ ಇರುವುದಿಲ್ಲ, ಇವರು ಗೆಲಾಕ್ಸಿಯಲ್ಲಿರುವ ಸಿನಿಮಾ ನೋಡಲಿಕ್ಕೆ ಎರಡೂವರೆ ರೂಪಾಯಿ ಟಿಕೆಟಿಗೆ 50 ರೂಪಾಯಿಗಳನ್ನು ಬ್ಲಾಕ್‌ನಲ್ಲಿ ಕೊಟ್ಟು ಟಿಕೆಟ್ಟು ತೆಗೆದುಕೊಂಡು ನೋಡುತ್ತಾರೆ. ಇವರಿಗೆ ಬರಗಾಲದ ಪರಿಸ್ಥಿತಿ ಅರಿವಾಗುವುದಿಲ್ಲ. ಬರಗಾಲ ನಮ್ಮ ರಾಜ್ಯದಲ್ಲಿ ಬಹಳ ಕಾಲದಿಂದಲೂ ಬರುತ್ತಿದೆ. ಇದು ಒಂದು ರೀತಿಯಾಗಿ ದೇವರು ನಮಗೆ ಕೊಡತಕ್ಕ ಶಾಪ ಎಂದು ಹೇಳಬಹುದಾಗಿದೆ. ಪೂರ್ವ ಕಾಲದಲ್ಲಿ ರೈತರು ತಮ್ಮ ತಮ್ಮ ಜಮೀನಿನಲ್ಲಿ ಎರಡು ಮಾರು ಉದ್ದ ಬದಬಿಡುತ್ತಿದ್ದರು ಇದರಿಂದ ಜಾನುವಾರಗಳಿಗೆ ಸಾಕಾದಷ್ಟು ಮೇವು ಸಿಗುತ್ತಿತ್ತು. ಈ ವಿಷಯ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೂ ಮತ್ತು ರೆವಿನ್ಯೂ ಮಂತ್ರಿಗಳಿಗೂ ಗೊತ್ತಿದೆ. ಆದರೆ ಇವತ್ತು ಒಂದೊಂದು ಜಮೀನನ್ನು ನಾವು ನೋಡಿದರೆ ಒಬ್ಬರು ಹೋಗುವಷ್ಟು

ಬದವನ್ನು ಬಿಡುವುದಿಲ್ಲ. ಇಂಥ ಬುದ್ಧಿ ನಮ್ಮ ಜನಗಳಲ್ಲಿರುವಾಗ ಕಾಲಕ್ಕೆ ಸರಿಯಾಗಿ ಮಳೆ ತಾನೇ ಹೇಗೆ ಬರುತ್ತದೆ ? ಹಿಂದಿನ ಕಾಲದಲ್ಲಿ ರಾಗಿಯನ್ನು ಅದು ಬಡವರು ತಿನ್ನುವಂಥಾದು ಅದನ್ನು ದಾಸ್ತಾನು ಮಾಡಬಾರದು ಎಂದು ಕಡಿಮೆ ಬೆಲೆಗೆ ಮಾರುತ್ತಿದ್ದರು. ಇವತ್ತು ನಮ್ಮ ಜನಗಳು ರಾಗಿಯನ್ನಷ್ಟೇ ಮಾರುವುದಿಲ್ಲ, ರಾಗಿಗೆ 10 ಕೆ.ಜಿ ಮಣ್ಣನ್ನು ಬೆರೆಸಿ ಮಾರುತ್ತಾರೆ. ಸರ್ಕಾರದವರು ಸೊಸೈಟಿಗೆ ಕೊಟ್ಟಂಥ ಮೈಲೋದಲ್ಲಿ ಕಸ, ಕಡ್ಡಿ, ಧೂಳು ಏನೇನೋ ಇತ್ತು, ಅದನ್ನು ಸಧ್ಯಕ್ಕೆ ಸರ್ಕಾರದವರು ಮಾರಬೇಡಿ ಎಂದು ಹೇಳಿದ್ದಾರೆ ಮೈಲೋ ಅನ್ನು ಕ್ಲೀನ್ ಮಾಡಿಸಿ ಮಾರಬೇಕು ಇಲ್ಲದಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತದೆ ಜವಾಬ್ದಾರಿಯುಳ್ಳ ಅಧಿಕಾರಿಗಳು ಅದನ್ನು ಸರಿಯಾಗಿ ನೋಡಿಕೊಂಡು, ಮೈಲೋದಲ್ಲಿರುವ ಧೂಳನ್ನು ಸರಿಯಾಗಿ ಕ್ಲೀನ್ ಮಾಡಿಸಿ ಆದಷ್ಟು ಜಾಗ್ರತೆಯಾಗಿ ಶುದ್ಧವಾದ ಮೈಲೋ ಅನ್ನು ಜನಗಳಿಗೆ ಕೊಡಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ದೇಶದಲ್ಲಿ ಜನಗಳಿಗೆ ನ್ಯಾಯ ನೀತಿ ಇಲ್ಲದಿರುವುದರಿಂದ ನಾವು ಮಳೆಗಾಗಿ ಕತ್ತೆಗಳನ್ನು ಮೆರವಣಿಗೆ ಮಾಡಬೇಕಾದ ಪರಿಸ್ಥಿತಿ ಬಂತು ಇದೆಲ್ಲಾ ನಮಗೆ ಬಂದಿರುವ ದುರ್ದೈವ ಎಂದು ತಿಳಿದುಕೊಳ್ಳಬೇಕಾಗಿದೆ. ಯಾವಾಗ ಜನರಲ್ಲಿ ನ್ಯಾಯ ನೀತಿ ಧರ್ಮ ಹೋಯಿತು, ಆಗ ಇಂಥ ಪರಿಸ್ಥಿತಿ ಬರುವುದು ಸಾಮಾನ್ಯವಾಗಿಯೇ ಇದೆ. ಸರ್ಕಾರದವರು ಈ ಬಗ್ಗೆ ಬೇಕಾದಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಕ್ಷಾಮ ಬಂದಾಗ ಜನರನ್ನು ರಕ್ಷಣೆ ಮಾಡತಕ್ಕದ್ದು ಸರ್ಕಾರದ ಕರ್ತವ್ಯ. ಕಂದಾಯ ಮಂತ್ರಿಗಳು ನಮ್ಮ ಜಿಲ್ಲೆಗೆ ಅನೇಕ ಸಾರಿ ಬಂದು ನಮ್ಮ ಸ್ಥಿತಿಯನ್ನು ನೋಡಿಕೊಂಡು ಹೋಗಿದ್ದಾರೆ. ಅಲ್ಲದೆ ಅನೇಕ ಸ್ಟಡಿ ಟೀಮುಗಳು ಬಂದು ಹೋಗಿವೆ. ಈ ಸ್ಟಡಿ ಟೀಮುಗಳು ಬರುವುದು ಹೋಗುವುದು ಮತ್ತು ಸರ್ಕಾರಕ್ಕೆ ರಿಪೋರ್ಟ್ ಕೊಡುವುದು ಆಗಿದೆ. ಇವರಿಂದ ಅಷ್ಟು ಕೆಲಸವೇನೂ ಆದಂತೆ ಆಗಲಿಲ್ಲ. ಮೊನ್ನೆ ನಮ್ಮ ಜಿಲ್ಲೆಗೆ ಎಂ.ಪಿ. ಟೀಮು ಬರುತ್ತದೆಂದು ನಾವೆಲ್ಲ ಕಾದು ಕೊನೆಗೆ ರಾತ್ರಿ ಒಂದು ಗಂಟೆಗೆ ಅವರು ಬಂದರು. ಇವರೆಲ್ಲಾ ಬಂದು ಮಾಡುವುದು ಏನು ಎಂದು ನನಗರ್ಥವಾಗಲಿಲ್ಲ. ಸರ್ಕಾರದವರು ಜಾಗ್ರತೆಯಾಗಿ ಎಲ್ಲೆಲ್ಲಿ ಕೆಲಸಗಳನ್ನು ಜನರಿಗೆ ಕೊಡುವುದಕ್ಕೆ ಸಾಧ್ಯವಿದೆಯೋ ಅಲ್ಲಿ ಕೆರೆಗಳ ಕೆಲಸವನ್ನಾಗಲೀ ಬೇರೆ ಕೆಲಸವನ್ನಾಗಲೀ ತೆಗೆದುಕೊಂಡು ಜನರಿಗೆ ಕೂಲಿ ಸಿಕ್ಕುವಂತೆ ಮಾಡಬೇಕು. ಕುಡಿಯುವ ನೀರಿಗೋಸ್ಕರ ಬಾವಿಗಳನ್ನು ತೆಗೆಯಲು ಮೊನ್ನೆ ಮಂತ್ರಿಗಳು ಬಂದಿದ್ದಾಗ ನಾವು ಕೇಳಿಕೊಂಡಾಗ ಅವರು ಡೆಪ್ಯೂಟಿ ಕಮಿಷನರ್ ಅವರಿಗೆ ಹೇಳಿದ್ದೇವೆ ಕೆಲಸವನ್ನು ಮಾಡಿಕೊಡುತ್ತಾರೆಂದು ಹೇಳಿದ್ದರು. ನಾವು ಅನಂತರ ಅವರನ್ನು ಭೇಟಿ ಮಾಡಿ, ಕೇಳಿದಾಗ ನಮ್ಮಲ್ಲಿ ಹಣ ಇಲ್ಲ, ಹಣ ಬಂದಮೇಲೆ ಕೆಲಸಗಳನ್ನು ಪ್ರಾರಂಭ ಮಾಡುತ್ತೇವೆಂದು ತಿಳಿಸಿದರು ಈ ರೀತಿ ಆದರೆ ಹೇಗೆ. ನಮ್ಮ ಜನರಲ್ಲಿ ಈಗ ಹಾಹಾಕಾರ ಪರಿಸ್ಥಿತಿ ಇದೆ ಈ ಸಮಯದಲ್ಲಿ ತಾವು ಜನರಿಗೆ ರಕ್ಷಣೆ ಕೊಡದಿದ್ದರೆ ನಾವು ಊರಿನಲ್ಲಿ ಇರುವುದಿಲ್ಲ. ನಾವು ನಮ್ಮ ಮನೆ ದ್ವಾರಗಳನ್ನು ಮುಚ್ಚಿಕೊಂಡು ಇರಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ಸರ್ಕಾರದವರು ಮನಗಂಡು ಏನೇನು ಕೆಲಸಗಳನ್ನು ಮಾಡಿಸಬೇಕೋ ಅವುಗಳನ್ನು ತಕ್ಷಣದಲ್ಲಿ ತೆಗೆದುಕೊಂಡು ಜನರಿಗೆ ಕೂಲಿ ಸಿಕ್ಕುವ ಹಾಗೆ ಮಾಡಬೇಕು. ಬೆಂಗಳೂರಿನಲ್ಲಿ ಇರುವವರಿಗೆ ಅಭಾವದ ಪರಿಸ್ಥಿತಿ ಗೊತ್ತಾಗುವುದಿಲ್ಲ. ಅಲ್ಲದೆ ಇಲ್ಲಿ ಆಗಾಗ್ಗೆ ಈ ಕಾಂಗ್ರೆಸ್ ಮಳೆ ಬೀಳುತ್ತಿರುತ್ತದೆ ಈ ಮಳೆಯಿಂದ ಯಾವ ಪ್ರಯೋಜನವಾಗುವುದಿಲ್ಲ. ಮಾನ್ಯ ಮಂತ್ರಿಗಳು ಇದನ್ನೆಲ್ಲಾ ಖುದ್ದಾಗಿ ನೋಡಿ ಮೊದಲು ಹಣವನ್ನು ರೆಡಿ ಮಾಡಿಕೊಳ್ಳಬೇಕು. ಇಲ್ಲವಿದ್ದರೆ ನಮಗೆ ರಕ್ಷಣೆ ಕೊಡಬೇಕು. ಜನಗಳಿಗೆ ಕೂಲಿ ದೊರೆಯುವ ಕೆಲಸವನ್ನು ಮೊದಲು ಮಾಡಬೇಕು. ಬಾಂಗ್ಲಾದೇಶದಲ್ಲಿ ಕ್ಷಾಮ ಬಂದಾಗ ನಮ್ಮ ರಾಜ್ಯದಿಂದಲೂ ದುಡ್ಡನ್ನು ಎತ್ತಿದರು. ಈಗ ಕರ್ನಾಟಕದಲ್ಲಿ ಕ್ಷಾಮ ಬಂದಾಗ ಬೇರೆಯವರು ಏನು ಮಾತನಾಡುತ್ತಿಲ್ಲ.

ಆದುದರಿಂದ ತಾವು ದಯಮಾಡಿ ಈಗಲಾದರೂ ಕೇಂದ್ರಕ್ಕಾದರೂ ಬರೆದು ಅವರಿಂದ ಸ್ವಲ್ಪ ಸಹಾಯ ತೆಗೆದುಕೊಂಡಾದರೂ ಕೂಡಲೇ ಜನರಿಗೆ ಸಹಾಯ ಒದಗಿಸಿ. ಆ ಹಣ ಬರುವುದು ತಡವಾದರೆ ರಿಲೀಫ್ ಲೋನ್ 10 ಕೋಟಿ ರೂಪಾಯಿಯನ್ನು ಪಡೆದು ಒಂದೊಂದು ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿ ಕಳುಹಿಸಿದರೆ ದನಗಳು ಜನಗಳು ಬದುಕಲು ಸಾಧ್ಯ. ಆ ಕಾರ್ಯವನ್ನು ಕೂಡಲೇ ಮಾಡಿಸಬೇಕೆಂದು ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಂಡು ಇಷ್ಟನ್ನು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಸಿದ್ಧಯ್ಯ. (ಸಂತೇ ಮಾರನ ಹಳ್ಳಿ)—ಸನ್ಮಾನ್ಯ ಅಧ್ಯಕ್ಷರೇ, ಈ ಕ್ಷಾಮ ಪರಿಸ್ಥಿತಿಯ ಚರ್ಚೆಯಲ್ಲಿ ಭಾಗವಹಿಸಿ ನನ್ನ ಕ್ಷೇತ್ರದ ಬಗ್ಗೆ ನಾಲ್ಕು ವಿಷಯಗಳನ್ನು ಹೇಳಲು ಇಚ್ಛೆ ಪಡುತ್ತೇನೆ. ಸರ್ಕಾರ ಈ ಬರಗಾಲ ಪರಿಸ್ಥಿತಿಯಲ್ಲಿ ಜನಗಳಿಗೂ ಮತ್ತು ಜಾನುವಾರಗಳಿಗೂ ಕಾರ್ಯಕ್ರಮ ಹಾಕಿಕೊಂಡಿರುವುದು ಸರಿಯಷ್ಟೆ. ಈ ಸಂದರ್ಭವನ್ನು ನಮಗೆ ದೊರಕಿಸಿಕೊಟ್ಟು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಅವಕಾಶ ಮಾಡಿ ಕೊಟ್ಟಿರುವುದಕ್ಕೆ ಸರ್ಕಾರಕ್ಕೆ ನಾನು ವಂದಿಸುತ್ತೇನೆ. ಸರ್ಕಾರದವರು ಕೊಡತಕ್ಕಂಥ ಪರಿಹಾರ ಬಡವರಿಗೆ ಕೈಸೇರುವ ರೀತಿಯಲ್ಲಿ ಆಗಬೇಕೆಂದು ಹೇಳುತ್ತೇನೆ ತಾವು ಏನು ಕೂಲಿಗಾರರಿಗೆ ಸಹಾಯವಾಗಲೆಂದು ಹಣವನ್ನು ಒದಗಿಸುತ್ತೀದ್ದೀರಿ ಅದು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಮುಖಾಂತರ ಆ ಕೂಲಿ ಜನಗಳಿಗೆ ಕೈ ಸೇರಬೇಕು, ಮಾನ್ಯ ಮುಖ್ಯ ಮಂತ್ರಿಗಳು ಡಿಪಾರ್ಟ್‌ಮೆಂಟ್ ವರ್ಕ್ ತೆಗೆದುಕೊಂಡರೆ ಕೂಲಿಗಾರರಿಗೆ ಏನು ಷೆಡ್ಯೂಲ್ಡ್ ರೇಟು ಸಿಕ್ಕುತ್ತದೆ ಅದು ಬರಗಾಲ ಪರಿಸ್ಥಿತಿಗೆ ಸಿಕ್ಕಿರುವ ಭಾಗದಲ್ಲಿಯೂ ಕೂಡ ಆ ಜನಗಳಿಗೆ ಈ ಕೂಲಿ ಸಿಕ್ಕುವಂತಹ ವ್ಯವಸ್ಥೆಯನ್ನು ಬಹಳ ಎಫೆಕ್ಟೀವ್ ಆಗಿ ಮಾಡಬೇಕೆಂದು ಹೇಳುತ್ತೇನೆ ಅನೇಕ ಕಡೆ ಲೇಬರ್ ಕೋ ಅಪರೇಟಿವ್ ಸೊಸೈಟಿಗಳು ಕೆಲಸ ಮಾಡುತ್ತಿವೆ. ನಾನಾ ಸೊಸೈಟಿಗಳನ್ನು ಅಮಾಲ್ಗಮೇಟ್ ಮಾಡುತ್ತಿದ್ದೀರಿ. ಅಂತಹ ಅಮಾಲ್ಗಮೇಟ್ ಮಾಡಿರುವ ಲೇಬರ್ ಕೋ ಅಪರೇಟಿವ್ ಸೊಸೈಟಿಗಳ ಮುಖಾಂತರ ಈ ಬಡ ಕೂಲಿಗಾರರಿಗೆ ಸಹಾಯ ತಲುಪುವ ರೀತಿಯಲ್ಲಿ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವ್ಯವಸಾಯಗಾರರಿಗೆ ನಾನಾ ಸಂಸ್ಥೆ ಸಂಘಗಳಿಂದ ಸಹಾಯ ದೊರೆಯುವಂತೆ ಅಗ್ರಿಕಲ್ಚರಲ್ ಫೈನಾನ್ಸ್ ಎಂದು ಸಾಕಷ್ಟು ಸಹಾಯ ದೊರೆಯುತ್ತದೆ. ಆದರೆ ವ್ಯವಸಾಯ ಕೂಲಿಗಾರರಿಗೆ ಇಂತಹದೇ ಯಾವುದಾದರೂ ಸಂಸ್ಥೆಗಳ ಮುಖಾಂತರ ಲೇಬರ್ ಕೋ ಅಪರೇಟಿವ್ ಸೊಸೈಟಿಗಳನ್ನು ಏತಕ್ಕೆ ಮಾಡಬಾರದು ? ಇದನ್ನು ದಯಮಾಡಿ ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ಇನ್ನು ಎಲ್ಲಕ್ಕಿಂತಲೂ ಹೆಚ್ಚಾಗಿ ಬಡಜನರಿಗೆ ಮತ್ತು ಕೂಲಿಗಾರರಿಗೆ ಫುಡ್‌ಗ್ರೇನ್ಸ್ ಹಂಚುತ್ತಿದ್ದೀರಿ. ಆದರೆ ಆ ಹಳ್ಳಿಗಳಲ್ಲಿ ವಾಸವಾಡುವ ಕೂಲಿಗಾರರಿಗೆ ಕೈ ಸೇರುತ್ತಿದೆಯೇ ಎನ್ನುವುದು ಬಹಳ ಮುಖ್ಯವಾದ ವಿಷಯ. ಅದನ್ನು ದಯಮಾಡಿ ನೋಡಬೇಕು. ಅಲ್ಲದೆ ಹೋದರೆ ತಾವು ಎಷ್ಟು ಸಹಾಯ ಮಾಡಿದರೂ ಅವರಿಗೆ ಮುಟ್ಟುವುದಿಲ್ಲ ನ್ಯಾಯ ಬೆಲೆ ಅಂಗಡಿಗಳಲ್ಲಿ ಸಕ್ಕರೆ ಮಾತ್ರ ಖರ್ಚಾಗುತ್ತದೆ ಬಾಕಿ ಯಾವ ದವಸಧಾನ್ಯಗಳು ಖರ್ಚಾಗುತ್ತಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಆ ನ್ಯೂನ್ಯತೆಯನ್ನು ಸರಿಪಡಿಸಿ. ಹಳ್ಳಿಗಳಲ್ಲಿಯೂ ಕಾರ್ಡು ಸಿಸ್ಟಮ್‌ನ್ನಾದರೂ ಮಾಡಿದರೆ ಅವರಿಗೆ ಸಹಾಯವಾಗಬಹುದು. ಅದನ್ನು ಸರಿಪಡಿಸುವುದಕ್ಕೆ ಏನಾದರೂ ಕಾನೂನಿನ ತೊಂದರೆ ಇದ್ದರೆ ಅದಕ್ಕೂ ಒಂದು ಅಮೆಂಡ್‌ಮೆಂಟ್ ತಂದು ಕಾರ್ಡು ಮೂಲಕ ಜನರಿಗೆ ಆಹಾರ ದವಸಗಳು ತಲುಪುವಂತೆ ಮಾಡಿ. ಅವರಿಗೆ ಹೆಚ್ಚಿನ ಪರಿಹಾರ ದೊರೆಯುತ್ತದೆ. ಪ್ರತಿಯೊಂದು ಊರಿಗೂ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಪದೇ ಪದೇ ಈ ಕ್ಷಾಮ ಬರುವುದರಿಂದ ಮುಂದಿನ ಕ್ರಮ ತೆಗೆದುಕೊಳ್ಳುವಾಗ ಇದಕ್ಕೆ ಒಂದ ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯುವುದಕ್ಕೋಸ್ಕರ 2 ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಒಂದು ಹಳ್ಳಿಗಳಲ್ಲಿ ಕಮ್ಯೂನಿಟಿ ಬಾವಿಗಳನ್ನು ಕೊಡಿ. ಇನ್ನು ಕೆಲವು ಕಡೆ ಜಮೀನಿಗೆ ಕಮ್ಯೂನಿಟಿ ಬಾವಿಗಳನ್ನು ತೆಗೆಸಿ ಅದರ ಮುಖಾಂತರ ಜನಗಳಿಗೆ ಸಹಾಯ ಮಾಡಬಹುದು ಇನ್ನು ಹೆಚ್ಚಿನ ವಿವರಗಳನ್ನು ಹೇಳುವುದಕ್ಕೆ ಕಾಲಾವಕಾಶ ಇಲ್ಲದೆ ಇರುವುದರಿಂದ ಇಷ್ಟನ್ನಾದರೂ ಹೇಳುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ಹೇಳಿರುವ ವಿಷಯವನ್ನು ದಯಮಾಡಿ ಪರಿಶೀಲನೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

†ಶ್ರೀ ಎ.ಎ. ದೇಸಾಯಿ (ಅಥಣಿ).—ಸನ್ಮಾನ್ಯ ಅಧ್ಯಕ್ಷರೇ ಈ ಕ್ಷಾಮ ಪರಿಸ್ಥಿತಿ ಚರ್ಚೆಯಲ್ಲಿ ಭಾಗವಹಿಸಿ ನನ್ನ ಕ್ಷೇತ್ರದ ಬಗ್ಗೆ ನಾಲ್ಕು ವಿಷಯಗಳನ್ನು ಹೇಳಲು ಇಚ್ಛೆಪಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಹಿಪ್ಪರಗಿ ಪ್ರಾಜೆಕ್ಟು 1972-73ರಲ್ಲಿ ಪ್ರಾರಂಭವಾಗಿದೆ. ಪ್ರತಿವರ್ಷವೂ 10-12 ಲಕ್ಷ ರೂಪಾಯಿ ಹಣ ಖರ್ಚು ಮಾಡುತ್ತಾರೆ. ಆದರೂ ಅದರ ಪ್ರಗತಿಯಾಗಿಲ್ಲ ಜೊತೆಗೆ ಅದನ್ನು ಸೇಫ್ಟಿ ಸ್ಟೇಜ್‌ಗೆ ತರಬೇಕೆಂದು ಹೇಳಿ ತಮ್ಮ ಮುಖಾಂತರ ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ ಆ ಪ್ರಾಜೆಕ್ಟನ್ನು ಅದಷ್ಟು ಬೇಗ ಕಾರ್ಯಗತ ಮಾಡಿದರೆ ನಮ್ಮ ಅಥಣಿ ತಾಲ್ಲೂಕಿಗೆ ಬರಗಾಲ

ಬಂದರೂ ಇದರಿಂದ ನಮ್ಮ ಜನರಿಗೆ ಬಹಳ ಸಹಾಯವಾಗುತ್ತದೆ ಇದನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ನಮ್ಮಲ್ಲಿ ಸುಮಾರು 2—3 ಸಾವಿರ ಚೀಲ ಜವಾರ್‌ನ್ನು ಲೆವ್ವಿ ರೂಪದಲ್ಲಿ ವಸೂಲು ಮಾಡಿದ್ದಾರೆ. ಆ ಜವಾರನ್ನು ಬೆಂಗಳೂರಿಗೆ ತಂದು ಮತ್ತೆ ನಮ್ಮ ಭಾಗಕ್ಕೆ ವಾಪಸ್ ತೆಗೆದುಕೊಂಡು ಹೋಗುವುದಕ್ಕೆ ಬದಲು ಅದನ್ನೇ ನಮ್ಮ ತಾಲ್ಲೂಕಿನಲ್ಲಿ ಬರಗಾಲ ಪೀಡಿತ ಜನರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮ್ ಹಾಕಿಕೊಂಡರು ಅದರಲ್ಲಿ ಟೆಕ್ನಿಕಲ್ ಫೀಸಿಬಿಲಿಟಿ ಇಲ್ಲವೆಂದು ಅದನ್ನು ಸರಿಯಾಗಿ ಕಾರ್ಯಗತ ಮಾಡುತ್ತಿಲ್ಲ ಆದ್ದರಿಂದ ನಮ್ಮ ಭಾಗಕ್ಕೆ ಹೆಚ್ಚು ಹಣವನ್ನು ಒದಗಿಸಿ ಕಾಸ್ಟ್ ಬೆನಿಫಿಟ್ ರೇಷ್ಯೋವನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ ಸರ್ಕಾರ ಇದನ್ನೇ ಮಾಡಿಲ್ಲ. ನಮ್ಮ ಸ್ಕೇರ್‌ಸಿಟಿ ಏರಿಯಾಕ್ಕೆ ಈ ಟೆಕ್ನಿಕಲ್ ಫೀಸಿಬಿಲಿಟಿ ಲಿಮಿಟ್‌ನ್ನು ರಿಲ್ಯಾಕ್ಸ್ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ ಇದೇ ಪ್ರಕಾರ ನಮ್ಮ ತಾಲ್ಲೂಕಿನಲ್ಲಿ ಕೆಲವು ಹಳ್ಳಿಗಳಲ್ಲಿ ಕೆರೆಗಳನ್ನು ತಕ್ಷಣ ತೆಗೆದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ ಅದರಲ್ಲಿ ಕೆಲವು ಹಳ್ಳಿಗಳಿಗೆ ಕೆರೆ ಆಗಬೇಕೆಂದು ಯೋಜನೆ ಇಟ್ಟುಕೊಂಡು ಸರ್ವೆ ಕೆಲಸ ಕೂಡ ಆಗಿದೆ. ಆದ್ದರಿಂದ ಕೂಡಲೇ ಈ ಕೆರೆಗಳ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಲಿಫ್ಟ್ ಇರಿಗೇಷನ್ ಸ್ಕೀಮನ್ನು ಬೇಗನೆ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಈ ಸದನದ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

ಅದೇ ಪ್ರಕಾರ ನಮ್ಮಲ್ಲಿ ನಾಲೆ ಬಂಡಿಂಗ್ ತೀವ್ರಗತಿಯಿಂದ ಆಗಬೇಕಾಗಿದೆ ಮಹಾರಾಷ್ಟ್ರ ಸರ್ಕಾರದವರು ಕೂಡ ಎಲ್ಲಾ ಕಡೆಗೂ ನಾಲೆ ಬಂಡಿಂಗ್ ಕಾರ್ಯಕ್ರಮವನ್ನು ಕೈ ಕೊಂಡಿರುವುದರಿಂದ ವಾಟರ್ ಲೆವಲ್ ಡೌನ್ ಆಗಿ ನೀರು ಅಲ್ಲಿ ನಿಂತುಕೊಂಡು ಬಿಟ್ಟಿದೆ. ಆದುದರಿಂದ ವಿಶೇಷವಾಗಿ ನಮ್ಮ ಅಥಣಿ ತಾಲ್ಲೂಕಿನಲ್ಲಿ ನಾಲೆ ಬಂಡಿಂಗ್ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ನಮ್ಮ ಮಂಕಿಷಾ ವಾಡಿಗೆ ನಾಲೆಗೆ ಏನು ಬ್ಯಾರೇಜ್ ಹಾಕಿದ್ದೀರಿ ಅದನ್ನು ಇನ್ನು 4-6 ಫೂಟ್ ಎತ್ತರಿಸಿದರೆ, ಅದರ ಹಿಂಭಾಗದಲ್ಲಿ 40—50 ಮೈಲು ನೀರು ನಿಲ್ಲುತ್ತದೆ. ಅದರಿಂದ ಇನ್ನೂ ಹೆಚ್ಚಿನ ಜನರಿಗೆ ನೀರಾವರಿಗೆ ಅನುಕೂಲವಾಗುತ್ತದೆ. ಮತ್ತು ಹಿಪ್ಪರಗಿ ಬ್ಯಾರೇಜ್ ಕಾಮಗಾರಿಗಳನ್ನು ಕೈ ಕೊಂಡು ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಕೂಡಲೇ ತಾವು ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

12-00 Noon

† ಶ್ರೀ ಎನ್. ಹುಚ್ಚಮಾಸ್ತಿಗೌಡ. (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಈ ಅಭಾವ ಪರಿಸ್ಥಿತಿಯ ಮೇಲೆ ಚರ್ಚೆ ನಡೆದಾಗ ಅನೇಕ ಜನ ಮಾನ್ಯ ಸದಸ್ಯರುಗಳು ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ ಅವರ ಸಹಕಾರ ಎಷ್ಟರಮಟ್ಟಿಗೆ ಇರಬೇಕು ಎನ್ನುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ಸಭೆಗೆ ತಿಳಿಸಿದ್ದಾರೆ ನಾನು ಕೂಡ ಅವರು ಹೇಳಿದ್ದನ್ನು ಕೇಳಿಕೊಂಡಿದ್ದೇನೆ. ಮೊದಲನೆಯದಾಗಿ ತಾವುಗಳು ಸಲಹೆಗಳನ್ನು ಕೊಟ್ಟಿದ್ದೇ ಒಂದು ದೊಡ್ಡ ಸಹಕಾರವೆಂದು ಭಾವಿಸಿದ್ದೇನೆ. ಅನೇಕ ಸಲಹೆಗಳನ್ನು ಕೊಟ್ಟಿದ್ದೀರಿ ಅದರಲ್ಲಿ ನಮ್ಮ ಅಧಿಕಾರಿಗಳು ಯಾವ ರೀತಿ ವರದಿ ಮಾಡಿದ್ದಾರೆ, ಆ ವರದಿಯೊಳಗೆ ಏನೇನು ದೋಷಗಳಿವೆ, ನಿಜವಾದ ಪರಿಸ್ಥಿತಿ ಯಾವುದು ಎನ್ನುವುದನ್ನು ಕೂಡ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅಧಿಕಾರಿಗಳು ಕೊಟ್ಟಿರತಕ್ಕಂಥ ವರದಿಗಳಲ್ಲಿರುವ ದೋಷಗಳನ್ನು ತಿಳಿಸಿದ್ದಾರೆ. ಅಧಿಕಾರಿಗಳು ಕೊಟ್ಟ ವರದಿಗೂ ತಾವು ತಿಳಿಸಿದಂಥ ವರದಿಯನ್ನೂ ಎರಡೂ ನಾವು ಕೂಡಿಸಿ ನೋಡಿದಾಗ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಂಡಿದೆ. ಅದರ ಬಗ್ಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ನಾನು ಸಭೆಗೆ ಮೊಟ್ಟಮೊದಲನೆಯದಾಗಿ ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇಷ್ಟೇ ಅಲ್ಲದೆ ಅಭಾವ ಪರಿಸ್ಥಿತಿ ಯಾವ ರೀತಿ ಇದೆ ಇನ್ನು ಮುಂದಕ್ಕೆ ಯಾವ ರೀತಿ ಆಗುತ್ತಾ ಹೋಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಇನ್ನು ಮುಂದೆ ಮಳೆಗಾಲ ಬರುವ ಹಾಗಿಲ್ಲ ಈಗಾಗಲೇ ವಿಶಾಖ ಮಳೆ ಆಗಲೇ ಅರ್ಧವಾಗಿದೆ. ಇದರಿಂದ ಕೆಲವೊಂದು ಪ್ರದೇಶಗಳಿಗೆ ಮಾತ್ರ ಪ್ರಯೋಜನ ಆದರೂ ಆಗಬಹುದು. ತೊಂದರೆಗೆ

ಈಡಾಗಿರತಕ್ಕಂಥ ಪ್ರದೇಶದ ಕೆರೆಗಳಲ್ಲಿ ಬಹುಭಾಗ ಅಂದರೆ 12 ಸಾವಿರ ಕೆರೆಗಳಲ್ಲಿ ಕೇವಲ 300 400 ಕೆರೆಗಳಲ್ಲಿ ಸ್ವಲ್ಪ ನೀರು ಇರಬಹುದು. ಉಳಿದ ಕೆರೆಗಳಲ್ಲಿ ಈಗ ಮಳೆಯಾಗಿರುವುದರಿಂದ ಸ್ವಲ್ಪ ನೀರು ಬಂದಿದ್ದರೆ ಅದರಿಂದ ದನಕರುಗಳಿಗೆ ಅನುಕೂಲವಾಗಬಹುದು, ಇದು ಮಾನ್ಯ ಸದಸ್ಯರಿಗೂ ಗೊತ್ತು. ದೇವರ ಅನುಗ್ರಹದಿಂದ ಅಷ್ಟಾದರೂ ಆದರೆ ದನಕರುಗಳಿಗೆ ಕುಡಿಯುವ ನೀರಿನ ಅಭಾವ ತಪ್ಪಿದಂತಾಗುತ್ತದೆ.

ಇನ್ನು ಸರ್ಕಾರದವರು ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ನಾವು ಯಾವಯಾವ ರೀತಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ ಎನ್ನುವುದನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾವು ಮಾಡಿರತಕ್ಕಂಥ ಕೆಲಸ ಮಾನ್ಯ ಸದಸ್ಯರುಗಳಿಗೆ ಗೊತ್ತಿಲ್ಲವೇ ಇರಬಹುದು, ನಿಜವಾದ ಪರಿಸ್ಥಿತಿ ಏನಿದೆ ಹೇಗಿದೆ ಎನ್ನುವುದನ್ನು ಅವರು ತಿಳಿಯದೇ ಹೇಳಿರಬಹುದು ಆದುದರಿಂದ ಅದರ ಬಗ್ಗೆ ಕೂಡ ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಆಹಾರ ಧಾನ್ಯ ಒದಗಿಸತಕ್ಕಂಥ ವಿಷಯದಲ್ಲಿ ಈಗಾಗಲೇ ನಾವು ಎಲ್ಲಾ ಜಿಲ್ಲೆಗಳಿಗೂ ಒದಗಿಸಿದ್ದೇವೆಂದು ನಿನ್ನೆ ದಿವಸ ಮುಖ್ಯ ಮಂತ್ರಿಗಳು ತಿಳಿಸಿದ್ದಾರೆ. ಅವರು ಆಹಾರ ಧಾನ್ಯವನ್ನು ತೆಗೆದುಕೊಂಡು ಹೋಗುವುದಕ್ಕೆ ಅವರೇ ಹಿಂದುಮುಂದು ನೋಡಿದ್ದಾರೆ. ನಾವು ಒದಗಿಸಿರತಕ್ಕಂಥ ಧಾನ್ಯ ಮಾತ್ರ ಖರ್ಚಾಗದೇ ಹಾಗೆಯೇ ಉಳಿದಿದೆ ಅದರ ಅಂಕಿಸಂಖ್ಯೆಗಳು ನನ್ನ ಹತ್ತಿರವಿದೆ. ನಾನು ಅದರ ಬಗ್ಗೆ ವಿಸ್ತಾರವಾಗಿ ಹೇಳಬೇಕಾದ ಅಗತ್ಯವಿಲ್ಲ ವೆಂದು ಭಾವಿಸುತ್ತೇವೆ. ಉದಾಹರಣೆಗೆ ಈಗ ಬಳ್ಳಾರಿ ಜಿಲ್ಲೆಯನ್ನು ತೆಗೆದುಕೊಳ್ಳೋಣ ಬಳ್ಳಾರಿ ಜಿಲ್ಲೆ ಅಭಾವ ಪರಿಸ್ಥಿತಿಗೆ ಒಳಗಾಗಿರತಕ್ಕಂಥ ಪ್ರದೇಶ ಸೆಪ್ಟೆಂಬರ್ ತಿಂಗಳಲ್ಲಿ ಒದಗಿಸಿರತಕ್ಕಂಥ 725 ಟನ್ ಅಕ್ಕಿ, 154 ಟನ್ ಜೋಳ 100 ಟನ್ ರಾಗಿ ಸಾವಿರ ಟನ್ ಗೋಧಿ, ಮತ್ತು ಮೈಲೋ ಮೈಲೋವನ್ನು ನಾವೇ ಕೊಡುವುದನ್ನು ನಿಲ್ಲಿಸಿ ಬಿಟ್ಟಿದ್ದೇವೆ ಇದರಲ್ಲಿ 725 ಟನ್ ಅಕ್ಕಿಗೆ 16 ಟನ್ ಮಾತ್ರ ಖರ್ಚಾಗಿದೆ. 154 ಟನ್ ಜವಾರ್‌ಗೆ 2 ಟನ್ ಮಾತ್ರ ಖರ್ಚಾಗಿದೆ. 100 ಟನ್ ರಾಗಿಗೆ 10 ಟನ್ ಮಾತ್ರ ಖರ್ಚಾಗಿದೆ. ಸಾವಿರ ಟನ್ ಗೋಧಿಗೆ 60 ಟನ್ ಮಾತ್ರ ಖರ್ಚಾಗಿದೆ. ಮೈಲೋ ಸಾವಿರ ಟನ್‌ಗೆ 166 ಖರ್ಚಾಗಿತ್ತು ಉಳಿದದ್ದನ್ನು ನಾವು ಹಾಗೆ ನಿಲ್ಲಿಸಿದ್ದೇವೆ. ಈ ರೀತಿ ಇನ್ನು ಯಾವ ತಾಲ್ಲೂಕಿನಲ್ಲಿಯೇ ತೆಗೆದುಕೊಳ್ಳಿ ಆಹಾರ ಧಾನ್ಯವನ್ನು ಒದಗಿಸುವುದಕ್ಕೆ ಯಾವ ತೊಂದರೆಯಾಗಿಲ್ಲ. ಆದರೆ ನಾವು ಒದಗಿಸಿದಂಥ ಧಾನ್ಯ ಏತಕ್ಕೆ ವಿತರಣೆಯಾಗಲಿಲ್ಲ. ಏತಕ್ಕೆ ತೆಗೆದುಕೊಂಡು ಹೋಗಿಲ್ಲ ಎನ್ನುವುದನ್ನು ಸರ್ಕಾರದವರು ಈಗ ಪರಿಶೀಲನೆ ಮಾಡುತ್ತಿದೆ. ಹಣದ ಅಭಾವವಿದ್ದರೆ ತಾಲ್ಲೂಕ್ ಸೊಸೈಟಿಗಳಿಗೆ ಮತ್ತು ಹಳ್ಳಿಗಳಲ್ಲಿರುವ ಸೇವಾ ಸಹಕಾರ ಸಂಘಗಳಿಗೆ ಹಣವನ್ನು ಕೊಟ್ಟು ಒದಗಿಸತಕ್ಕಂಥ ವ್ಯವಸ್ಥೆ ಮಾಡುತ್ತೇವೆ ಮತ್ತು ಆಹಾರ ಧಾನ್ಯವಾದ ವಿಷಯದಲ್ಲಿ ಕೊರತೆ ಇದೆ ಎಂದು ನಾವು ತಿಳಿದುಕೊಳ್ಳಬೇಕಾದ್ದು ಇಲ್ಲ. ಆದುದರಿಂದ ಈಗಿರತಕ್ಕಂಥದರಲ್ಲಿ ಏನು ದೋಷವಿದೆಂದು ಅರಿತು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆಂಬ ಭರವಸೆಯನ್ನು ಈ ಸಭೆಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅರ್ಥಸಚಿವರು ನಿನ್ನೆ ದಿವಸ ಹೊರಡಿಸಿರತಕ್ಕಂಥ ಆರ್ಡರ್‌ನ್ನು ತಮ್ಮ ಮುಂದೆ ಓದಿ ಹೇಳಿದರು. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಆಹಾರ ಧಾನ್ಯಗಳ ವಿಷಯದಲ್ಲಿ ಕೊರತೆ ಇಲ್ಲ ಎನ್ನುವ ಬಗ್ಗೆ ಸ್ಪಷ್ಟವಾಗಿ ಈ ಸಭೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು, ಸಣ್ಣ ಸಣ್ಣ ಕೆರೆಗಳನ್ನು ಮಲೆನಾಡು ಪ್ರದೇಶಗಳಲ್ಲಿ ತೆಗೆದುಕೊಳ್ಳಬೇಕೆಂದು ಅನೇಕ ಜನ ಹೇಳಿದರು. ಸಣ್ಣ ಸಣ್ಣ ಕೆರೆಗಳನ್ನು ತೆಗೆದುಕೊಳ್ಳುವುದು ಅವಶ್ಯಕವೆಂದು ಮನಗಂಡು ಈಗಾಗಲೇ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ ಮಲೆನಾಡು ಪ್ರದೇಶಗಳಲ್ಲಿ ಸಣ್ಣ ಕೆರೆಗಳನ್ನು ಕಟ್ಟಿಸತಕ್ಕ ಮತ್ತು ಹೂಳು ತೆಗೆಸತಕ್ಕ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದೇವೆ. ಗ್ರಾಮಕ್ಕೆ ಸಮೀಪದಲ್ಲಿಯೇ ಕೆರೆಗಳನ್ನು ಕಟ್ಟಿಸಿದರೆ ಅವರು 3—4 ಮೈಲಿ ನೀರಿಗಾಗಿ ದೂರ ಹೋಗುವುದು ತಪ್ಪುತ್ತದೆ ಮತ್ತು ಅಲ್ಲಿ ಸಾಕಷ್ಟು ನೀರು ನಿಲ್ಲುವಂಥ ವ್ಯವಸ್ಥೆ ಮಾಡುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೇವೆ. ಇದರ ಬಗ್ಗೆ ಆಜ್ಞೆಯನ್ನು ಹೊರಡಿಸಿದ್ದೇವೆ.

ಇನ್ನು ಕೆಲವು ತಾಲ್ಲೂಕ್‌ಗಳನ್ನು ಸೇರಿಸಬೇಕಾದ ಅಗತ್ಯತೆ ಇದೆಎಂದು ಮಾನ್ಯ ಸದಸ್ಯರುಗಳು ಹೇಳಿದರು. ಬೆಳಗಾಂ ಜಿಲ್ಲೆಯಲ್ಲಿ ಒಂದೆರಡು ತಾಲ್ಲೂಕುಗಳನ್ನು ಮತ್ತು ಬಿಜಾಪುರ ತಾಲ್ಲೂಕಿನ ಮತ್ತು ಉತ್ತರ ಕನ್ನಡ ಜಿಲ್ಲೆಯ ಕೆಲವೊಂದು ತಾಲ್ಲೂಕ್‌ಗಳನ್ನು ಸೇರಿಸಬೇಕೆಂದು ಹೇಳಿದರು, ಮಾನ್ಯ ದೇಸಾಯಿರವರು ಬೈಲ ಹೊಂಗಲ ಖಾನಾಪುರ ವಿಷಯದ ಬಗ್ಗೆ ತಿಳಿಸಿದ್ದಾರೆ ಡೆಪ್ಯುಟಿ ಕಮಿಷನರ್ ವರು ಕಡಮೆ ಬಿದ್ದಿರುವುದರಿಂದ ಬೆಳೆ ಮಳೆ ಉತ್ತಮವಾಗಿ ಆಗಿಲ್ಲವೆಂದು ಹೇಳಿದ್ದಾರೆ. ಇದರ ಜೊತೆಗೆ ಇದೇ ತಿಂಗಳು 5ನೇ ತಾರೀಖು ಬಂದಿರುವ ವರದಿ ಪ್ರಕಾರ ಇನ್ನು ಒಂದೆರಡು ವಾರಗಳಲ್ಲಿ ಸ್ವಲ್ಪ ಮಳೆಯಾದರೆ ಬೆಳೆ ಉತ್ತಮವಾಗುತ್ತದೆಂದು ವರದಿಯಿದೆ ಆದುದರಿಂದ ನಮ್ಮ ಮನಸ್ಸಿಗೆ ಬಂದ ಹಾಗೆ ಅಭಾವಕ್ಕೆ ಈಡಾಗಿರುವ ತಾಲ್ಲೂಕುಗಳನ್ನು ಸೇರಿಸುವುದಾಗಲೀ. ಅಥವಾ ಕೈಬಿಡುವುದಾಗಲೀ—ಮಾಡಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇವೆ. ಅಷ್ಟೇ ಅಲ್ಲದೆ, ಪರಿಸ್ಥಿತಿಯನ್ನು ನೋಡಿಕೊಂಡು, ಯಾವ ಯಾವ ತಾಲ್ಲೂಕುಗಳನ್ನು ಈ ಪಟ್ಟಿಗೆ ಸೇರಿಸಬೇಕೆಂದು ಅಗತ್ಯ ಕಂಡುಬರುತ್ತದೆಯೋ. ಅವುಗಳನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ. ಮೊನ್ನೆ ನಾನು ತಿಳಿಸಿದ ಹಾಗೆ, ಮೊದಲು ಎಂಬತ್ತೆರಡು ತಾಲ್ಲೂಕುಗಳು ಇದ್ದುದನ್ನು ಈಗ 108 ತಾಲ್ಲೂಕುಗಳಿಗೆ ಏರಿಸಿದ್ದೇವೆ. ಮುಂದೆ ಅಗತ್ಯ ಕಂಡುಬಂದರೆ, ಅವನ್ನೂ ಗಣನೆಗೆ ತೆಗೆದುಕೊಳ್ಳುತ್ತೇವೆ ಎಂದು ನಾನು ಈ ಸಭೆಯ ಗಮನಕ್ಕೆ ತರುತ್ತೇನೆ

ಮಾನ್ಯ ಶ್ರೀ ದೇವೇಗೌಡ ಅವರು ಮಾತನಾಡುತ್ತಾ, ಹಾಸನ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳಿವೆ ಅವುಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿದ್ದಾರೋ, ಅಥವಾ ಇಲ್ಲವೋ. ಅಭಾವ ಪೀಡಿತ ಪ್ರದೇಶಗಳೆಂದು ಹೇಳುವಾಗ ಬರೀ ತಾಲ್ಲೂಕುಗಳ ಸಂಖ್ಯೆಯನ್ನೇ ಹೇಳಿಬಿಟ್ಟರು ಎಂದು ಹೇಳಿದರು. ಹಾಸನ ಜಿಲ್ಲೆಯಲ್ಲಿ ಒಟ್ಟು 2,7?6 ಗ್ರಾಮಗಳಿವೆ. ಇದರಲ್ಲಿ, ತೊಂದರೆಗೆ ಈಡಾಗಿರುವ ಗ್ರಾಮಗಳು 18?5. ಇನ್ನು ಉಳಿದಿದ್ದು 721 ಗ್ರಾಮಗಳು ತೊಂದರೆ ಇಲ್ಲದೇ ಇರತಕ್ಕವು ಎಂದು ಸ್ಪಷ್ಟವಾಗಿದೆ. ಅದರಲ್ಲಿ ಆಲೂರು, ಬೇಲೂರು, ಮತ್ತು ಸಕಲೇಶಪುರಕ್ಕೆ ಸೇರಿದಂತೆ ಒಟ್ಟು 870 ಗ್ರಾಮಗಳಿವೆ. ಇವುಗಳಲ್ಲಿ 721 ಗ್ರಾಮಗಳು ತೊಂದರೆಗೀಡಾಗಿಲ್ಲ ಎನ್ನುವ ಅಂಶ ಸ್ಪಷ್ಟವಾಗಿದೆ. ಆಲೂರು ಮತ್ತು ಬೇಲೂರು ಭಾಗಗಳಿಗೆ ಸೇರಿದ (4) ಗ್ರಾಮಗಳನ್ನು ಸೇರಿಸಲಾಗಿದೆ ಎನ್ನುವುದೂ ಇದರಿಂದ ಸ್ಪಷ್ಟವಾಗುತ್ತದೆ ಆದುದರಿಂದ ತಪ್ಪು ತಪ್ಪು ಅಂಕಿ—ಅಂಶಗಳನ್ನು ಕೊಡುವ ಹವ್ಯಾಸವನ್ನು ನಾವು ಮಾಡುವುದಿಲ್ಲ ಎನ್ನುವ ಮಾತನ್ನು ಮಾನ್ಯ ದೇವೇಗೌಡ ಅವರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಶ್ರೀ ದೇವೇಗೌಡ ಅವರು ಮಾತನಾಡುತ್ತಾ, ಹೊಳೆನರಸೀಪುರದಲ್ಲಿ ಕೆಲಸಗಳನ್ನೇ ತೆಗೆದುಕೊಂಡಿಲ್ಲ ಎಂದು ಹೇಳಿದರು ಈಗ ಅಲ್ಲಿ ಏಳು ನೀರಾವರಿ ಕಾಮಗಾರಿಗಳು ನಡೆಯುತ್ತಿವೆ. ಸುಮಾರು 2743 ಜನ ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಗೇ, ಹೇಮಾವತಿ ನಾಲೆ ಕೆಲಸ ಕೂಡ ಅಲ್ಲಿ ನಡೆಯುತ್ತಿದೆ. ಆದರೆ ಇದರಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎನ್ನುವ ತಾಲ್ಲೂಕು ವಿವರ ನನ್ನ ಬಳಿ ಇಲ್ಲ.

ಶ್ರೀ ಸಿ. ಬೈರೇಗೌಡ.—ಯಾವ ತಾರೀಖಿನಿಂದ ಹೊಳೆನರಸೀಪುರದಲ್ಲಿ ಕೆಲಸಗಳನ್ನು ಪ್ರಾರಂಬಿಸಿದ್ದೀರಿ? ನಿನ್ನೆಯಿಂದಲೋ ಅಥವಾ ಕಳೆದ ವಾರದಿಂದಲೂ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ನಿನ್ನೆಯಿಂದಲ್ಲ, ಕಳೆದ ವಾರದಿಂದಲ್ಲ; ಕಳೆದ ನಾಲ್ಕು ತಿಂಗಳಿನಿಂದ ಅಂದರೆ ಜುಲೈ ತಿಂಗಳಿನಲ್ಲಿ ಕೆಲಸಗಳನ್ನು ಪ್ರಾರಂಭ ಮಾಡಿದ್ದು, ಹಾಲಿ ಅಲ್ಲಿರತಕ್ಕ ಕೂಲಿಗಾರರ ಸಂಖ್ಯೆಯನ್ನು ನಾನು ತಿಳಿಸುತ್ತಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹೊಳೆ ನರಸೀಪುರಕ್ಕೆ ಸಂಬಂಧಪಟ್ಟ ಹಾಗೆ ಪರಿಹಾರ ಕಾಮಗಾರಿಗಳಿಗಾಗಿ ಎಷ್ಟು ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಎರಡು ಲಕ್ಷದ ಅರವತ್ತೈದು ಸಾವಿರ ರೂಪಾಯಿಗಳು ಮಾತ್ರವೆಂದು ಅವರು ಹೇಳಿದ್ದಾರೆ. ಆದರೆ, 28೪ರ ಹೆಡ್‌ನಲ್ಲಿ ಕೊಟ್ಟಿರುವ ಹಣವೇ ಬೇರೆ. ಅದೂ ಅಲ್ಲದೆ. ಬೇರೆ ಬೇರೆ ಇಲಾಖೆಗಳ ಕೆಲಸ ಅಲ್ಲಿ ನಡೆಯುತ್ತಿದೆ. ಆದರೆ. ಯಾವ ಯಾವ ಇಲಾಖೆಗಳು ಎಷ್ಟು ಎಷ್ಟು ಖರ್ಚು ಮಾಡಿವೆ ಎನ್ನುವ ವಿವರ ನನ್ನ ಹತ್ತಿರವಿಲ್ಲ. ಸುಮಾರು 2543 ಜನ ಕೆಲಸ ಮಾಡಬೇಕಾದರೆ, ಒಂದೇ ದಿವಸಕ್ಕೆ ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ಗಮನಿಸಿದರೆ, ಲಕ್ಷಗಟ್ಟಲೆ ಹಣ ಅಲ್ಲಿಗೆ ಕೊಟ್ಟಿದ್ದೇವೆ ಎಂದು ಗೊತ್ತಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಬಡ್ಜೆಟ್‌ನಲ್ಲಿರುವ ಕೆಲಸಗಳು ಅಲ್ಲಲ್ಲಿ ನಡೆಯುತ್ತಿವೆ. ಆದರೆ, ಬಡ್ಜೆಟ್ಟಿನ ಹೊರಗೆ, ಅಂದರೆ ಅಭಾವ ಪರಿಹಾರ ಕಾಮಗಾರಿಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದಾರೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ—ಬಡ್ಜೆಟ್ಟಿನಲ್ಲಿ ಒಂದು ಕೆಲಸವನ್ನು ಸೇರಿಸಿದ ಕೂಡಲೇ, ಆ ವರ್ಷವೇ ಆ ಕೆಲಸ ಪೂರ್ತಿ ನಡೆಯುತ್ತದೆ, ಎಂದು ಹೇಳುವ ಹಾಗಿಲ್ಲ. ಒಂದು ಯೋಜನೆಗೆ ಹತ್ತು ಲಕ್ಷ ರೂಪಾಯಿ ಬೇಕೆಂದಿದ್ದರೆ, ಈ ವರ್ಷ ಅದಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ಹಂಚುತ್ತಾರೆ. ಅದು ಆ ವರ್ಷಕ್ಕೆ ಖರ್ಚಾಗುತ್ತದೆ ಆದುದರಿಂದ. ಈಗ ಆ ಭಾಗದಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳನ್ನು ನಾವು ಗಮನಿಸಿದರೆ, ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣಕ್ಕಿಂತಲೂ ಮೀರಿ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾಗಿದೆ.

ನಮ್ಮ ವಿಚಾರವನ್ನು ಇನ್ನೊಬ್ಬರಿಗೆ ತಿಳಿಸುವುದಾಗಲೀ ಅಥವಾ ಜನಾಭಿಪ್ರಾಯವನ್ನು ನಾವಾಗಲೀ ತಿಳಿಯುವುದಕ್ಕೆ ಅವಕಾಶವಿಲ್ಲ, ನಾವು ಶಾಸಕರಾಗಿದ್ದೂ ಕೂಡ ನಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕಾಗುವುದಿಲ್ಲ ದೇಶದಲ್ಲಿ ಪ್ರೆಸ್ ಸೆನ್ಸಾರ್‌ಷಿಪ್ ಇದೆ ಎಂದು ಅವರು ಮಾತನಾಡುತ್ತಾ ಹೇಳಿದರು. ಈಗ ದೇಶದಲ್ಲಿ ಪ್ರೆಸ್ ಸೆನ್ಸಾರ್‌ಷಿಪ್ ಇಲ್ಲ, ಇರುವುದು ಸೆಲ್ಫ್ ಸೆನ್ಸಾರ್‌ಷಿಪ್ ಯಾವುದು ಸೂಕ್ತ, ಯಾವುದನ್ನು ಹಾಕಬೇಕು ಎಂದು ಪತ್ರಿಕೆಯವರೇ ಯೋಚನೆ ಮಾಡಿ ವಿಚಾರಗಳನ್ನು ಪ್ರಕಟಿಸುವುದಕ್ಕೆ ಅವಕಾಶವಿದೆ ಅವರಿಗೇನಾದರೂ, ಒಂದು ವಿಚಾರದಲ್ಲಿ ಅನುಮಾನಗಳಿದ್ದು ಆ ಬಗ್ಗೆ ಸರ್ಕಾರವನ್ನು ಕೇಳಿದಾಗ ಸರ್ಕಾರ ಸತ್ಯಾಂಶಕ್ಕೆ ವಿರುದ್ಧವಾಗಿ ನೀವು ಏನನ್ನೂ ಪ್ರಕಟ ಮಾಡಬೇಡಿ ಎಂದು ತಿಳಿಸುತ್ತದೆ. ಆದುದರಿಂದ, ಇರತಕ್ಕ ಪರಿಸ್ಥಿತಿಯನ್ನು ಜನಕ್ಕೆ ಮತ್ತು ದೇಶಕ್ಕೆ ಪತ್ರಿಕೆಗಳ ಮುಖಾಂತರ ಪ್ರಕಟ ಮಾಡುವುದಕ್ಕೆ ಯಾವ ಅಡ್ಡಿಯೂ ಇಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿಯಬೇಕು. ನಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕೆ ಅವಕಾಶವಿಲ್ಲ. ನಮ್ಮ ಬಾಯನ್ನು ಮುಚ್ಚಿದ್ದಾರೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದಾದರೆ, ಅದು ತೀರ ಉತ್ಪ್ರೇಕ್ಷೆ ಮಾತಾಗುತ್ತದೆ,

ತಹಶೀಲ್ದಾರರ ಕಛೇರಿಗೆ ನಾನು ಚರ್ಚೆ ಮಾಡುವುದಕ್ಕಾಗಿ ಹೋಗಿದ್ದಾಗ ಕೆಲವು ಕಾಂಗ್ರೆಸ್ಸಿಗರು ಬಂದು ನನ್ನ ಮೇಲೆ ಗಲಾಟೆ ಮಾಡಿದರು ಎಂದು ಮಾನ್ಯ ಶ್ರೀ ದೇವೇಗೌಡರು ಹೇಳಿದರು. ಯಾರು ಮಾಡಿದರು, ಏತಕ್ಕಾಗಿ ಮಾಡಿದರು ಎಂಬುದನ್ನು ತಿಳಿದುಕೊಳ್ಳಲು ನಾವು ಪ್ರಯತ್ನ ಮಾಡುತ್ತಿದ್ದೇವೆ ಇನ್ನೂ ತಿಳಿದುಕೊಂಡಿಲ್ಲ ಕ್ಷಾಮ ಪರಿಹಾರ ಕಾಮಗಾರಿಗಳಲ್ಲಿ ಮಾಡುತ್ತಿರುವ ಕೆಲಸಗಾರರಿಗೆ ಎಷ್ಟು ಖರ್ಚಾಗುತ್ತಿದೆ. ಅಷ್ಟು ಮಟ್ಟಕ್ಕೆ ಸರಿಯಾದ ಕೆಲಸವಾಗುತ್ತಿಲ್ಲ ಎಂದೂ ಸಹ ಹೇಳಿದ್ದಾರೆ ಕಳೆದ ಇಪ್ಪತ್ತು ದಿವಸಗಳ ಹಿಂದೆ. ನಾನು ಒಂದು ಸುತ್ತೋಲೆಯನ್ನು ಕಳುಹಿಸಿ, ಆ ರೀತಿ ಕೆಲಸಗಳನ್ನು ಮಾಡಬಾರದು, ಎಲ್ಲ ಕೆಲಸಗಳನ್ನೂ ಪೀಸ್ ವರ್ಕ್ ಮೇಲೆ ಮಾಡಿಸಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದೇವೆ. ಪೀಸ್ ವರ್ಕ್‌ಗಳು ಅಧಿಕಾರಿಗಳ ನೇತೃತ್ವದಲ್ಲಿ ನಡೆಯುವ ಕೆಲಸಗಳು 100 ಘನ ಅಡಿ ಮಣ್ಣನ್ನು ತೆಗೆದು ಹಾಕಿದರೆ, ಇಷ್ಟು ಹಣ ಕೊಡುತ್ತೇವೆ ಎಂದು ಹೇಳಿರುತ್ತಾರೆ, ಅಷ್ಟು ಕೆಲಸವಾದ ಮೇಲೆ ಆ ಹಣವನ್ನು ಕೂಲಿಗಾರನಿಗೆ ಕೊಡುತ್ತಾರೆ. ಇದರಿಂದ, ಕೆಲಸ ಎಷ್ಟು ಆಯಿತು ಎಂಬುದನ್ನು ಅಳತೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಆಯಾಯಾ ವರ್ಷಕ್ಕೆ ನಿಗದಿ ಮಾಡಿದ ಷೆಡ್ಯೂಲ್ ಆಫ್ ರೇಟ್ಸ್‌ಗಿಂತಲೂ ಜಾಸ್ತಿ ಹಾಕುವುದಿಲ್ಲವೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಾಕುವುದಕ್ಕೆ ಹೇಗೆ ಸಾಧ್ಯ? ನಿಗದಿಯಾದ ರೇಟ್ ಏನಿರುತ್ತದೆ, ಅದನ್ನು ಅನ್ವಯಿಸಿ ಕೊಡುತ್ತಿದ್ದಾರೆ ಮೊದಲು ಒಂದು ನೂರು ಜನ ಕೆಲಸ ಮಾಡುತ್ತಿದ್ದರು, ಅವರಿಗೆ ಕೊಡಬೇಕಾದ ಕೂಲಿಯನ್ನು ಕೊಟ್ಟುಬಿಡುತ್ತಿದ್ದರು. ಆಗ ಕೆಲಸ ಎಷ್ಟಾಯಿತೆಂಬುದು ಲೆಕ್ಕ ಸಿಕ್ಕುತ್ತಿರಲಿಲ್ಲ. ಇದು ನಾಮಿನಲ್ ರೋಲ್ ಕೆಲಸ. ಈಗ ಈ ಪದ್ಧತಿಯನ್ನು ನಿಲ್ಲಿಸಿದ್ದೇವೆ.

ಇನ್ನು ಕುಡಿಯುವ ನೀರಿನ ವಿಷಯವಾಗಿ ಬಹಳ ಜನರು ಹೇಳಿದ್ದಾರೆ. ಸರ್ಕಾರ ಕೈಗೊಂಡಿರತಕ್ಕ ಕೆಲಸಕಾರ್ಯಗಳನ್ನು ಮಾನ್ಯಸಭೆಗೆ ತಿಳಿಸಲಿಷ್ಟಪಡುತ್ತೇನೆ. ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಒಂದು ಮಾತನ್ನು ಹೇಳಿದರು. ಈ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಅದರ ಮೇಲೆ ಒಂದು ಕವನ ಕಟ್ಟಿ ಹೇಳಿದರು. ಕುಡಿಯುವ ನೀರಿನ ಬಗ್ಗೆ ಸುಮಾರು ನಾಲ್ಕೈದು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಎಷ್ಟೆಷ್ಟು ಕೆಲಸಗಳು ಆಗಿವೆಯೆಂಬ ಬಗ್ಗೆ ಕೆಲವಾರು ಅಂಕಿ ಅಂಶಗಳನ್ನು ಈ ಸಭೆಗೆ ಕೊಡಬಯಸುತ್ತೇನೆ. ನಾವು ಸೇದುವ ಬಾವಿಗಳನ್ನು ಮತ್ತು ಓಪನ್ ವೆಲ್ಸ್‌ಗಳನ್ನು ಎಷ್ಟೆಷ್ಟು ತೆಗೆದಿದ್ದೇವೆಯೆಂಬುದನ್ನೂ ಸಹ ಕೊಡುವುದು ಸೂಕ್ತವೆಂದು ನನಗನ್ನಿಸುತ್ತದೆ. 1972–73ನೇ ಇಸವಿಯಲ್ಲಿ 215[illegible] ಬಾವಿಗಳನ್ನೂ 1973-74ನೇ ಇಸವಿಯಲ್ಲಿ 2265 ಬಾವಿಗಳನ್ನು ಮಾಡಿದ್ದೇವೆ. 1974–75ರಲ್ಲಿ 25[illegible] ಬಾವಿಗಳು ಆಗಿವೆ. 1975-76ರಲ್ಲಿ 18[illegible]9 ಬಾವಿಗಳನ್ನು ಮಾಡಿದ್ದೇವೆ. ಅಲ್ಲದೆ ಬೋರ್‌ವೆಲ್‌ಗಳನ್ನು ಎಲ್ಲಿ ಮಳೆಯ ನೀರಿಗೆ ತೊಂದರೆಯಾಗಿತ್ತೋ ಅಂತಹ ಕಡೆಗಳಲ್ಲಿ ತೆಗೆದಿದ್ದೇವೆ. ಅನೇಕ ಸೇದುವ ಬಾವಿಗಳಲ್ಲಿ ಅಭಾವ ಪರಿಸ್ಥಿತಿ ಬಂದಾಗಲೂ ನೀರು ಬತ್ತಿ ಹೋಗಿರುವುದರಿಂದ ಅನೇಕ ಬಾವಿಗಳಲ್ಲಿ ನೀರು ಇಲ್ಲದೆ ತುಂಬಾ ತೊಂದರೆಯಾಗಿರುವುದನ್ನು ಕಂಡು ಅನೇಕ ಕಡೆಗಳಲ್ಲಿ ಬೋರ್ ವೆಲ್‌ಗಳನ್ನು ತೆಗೆಯಲಾಗಿದೆ. 1972–73ರಲ್ಲಿ 1221, 1973–74ರಲ್ಲಿ 1[illegible]93 1974-75ರಲ್ಲಿ 2038 1975-76ರಲ್ಲಿ 1995 ಮತ್ತು 1976–77ರಲ್ಲಿ ಅಂದರೆ 1 ನೇ ನವೆಂಬರ್ 1976ರ ವರೆಗೆ 1947 ಬಾವಿಗಳನ್ನು ತೆಗೆದಿದ್ದೇವೆ. ಅಂದರೆ ಒಟ್ಟು 85[illegible]4 ಬೋರ್ ವೆಲ್‌ಗಳನ್ನು ಮಾಡಿದ್ದೇವೆ. ಇಷ್ಟು ಬಾವಿಗಳನ್ನು ಮಾಡಿದ್ದರೂ ಕೂಡ ಇನ್ನೂ ಮಾಡುವುದು ಅಗತ್ಯವಿದೆಯೆಂದು ನಾನು ಹೇಳುತ್ತೇನೆ. ಅದಕ್ಕಾಗಿಯೇ ನಿನ್ನೆಯೇ ಈ ಸಭೆಗೆ ಒಂದು ವಿಷಯವನ್ನು ತಿಳಿಸಿದ್ದೇನೆ. ಎಷ್ಟೋ ರಿಗ್ ಯಂತ್ರಗಳು ಈಗಾಗಲೇ ಕೆಲಸಮಾಡುತ್ತಿವೆ. ಇನ್ನೂ 10 ರಿಗ್ ಯಂತ್ರಗಳನ್ನು ತಮಿಳು ನಾಡಿನಿಂದ ತರಿಸಿ ಕೆಲವು ಭಾಗಗಳಿಗೆ ಅದರಲ್ಲಿ ಬೆಳಗಾಂ ಕಡೆಗಳಲ್ಲಿ ಕಳುಹಿಸುವ ತೀರ್ಮಾನ ಮಾಡಿದ್ದೇವೆ. ಈಗಾಗಲೇ 114 ರಿಗ್ ಯಂತ್ರಗಳು ಕೆಲಸಮಾಡುತ್ತಿವೆ. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟು ಯಂತ್ರಗಳನ್ನು ಇನ್ನೂ ಹೆಚ್ಚುಮಾಡುವ ಅಗತ್ಯವಿದೆಯೋ ಆ ಕೆಲಸ ತ್ವರಿತವಾಗಿ ನಡೆಯುತ್ತಿದೆ. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಕೆಲಸವಾಗಬೇಕೋ ಅದನ್ನು ಮಾಡಿಸುತ್ತಾ ಇದ್ದೇವೆ. ನಾನು ಈಗ ಉದಾಹರಣೆಯಾಗಿ ಹೇಳುವುದಾದರೆ, ಧಾರವಾಡ ಜಿಲ್ಲೆಯಲ್ಲಿ 5 ರಿಗ್‌ಗಳು ಕೆಲಸಮಾಡುತ್ತಿವೆ ಇನ್ನೂ ಅಲ್ಲಿ 300 ಬಾವಿಗಳು ಆಗಬೇಕಾಗಿವೆ ನಾವು ಟಾರ್ಜೆಟ್ ಇಟ್ಟುಕೊಂಡಿರುವ ಹಾಗೆ 6ನೇ ನವೆಂಬರ್ 1976 ರೊಳಗೆ [illegible]6 ಬಾವಿಗಳಾಗಿವೆ. 104 ಧಾರವಾಡ ಜಿಲ್ಲೆಯಲ್ಲಿ ಆಗಿವೆ ನನ್ನಲ್ಲಿ ಜಿಲ್ಲಾವಾರು ಅಂಕಿಅಂಶಗಳಿವೆ ವರದಾ ನದಿಗೆ ಭೀಮಾ ನದಿಗೆ ಅಣೆಗಳನ್ನು ಮಾಡಿ ಮುಳುಗಡೆಯಾದಂಥ ಪ್ರದೇಶಗಳಲ್ಲಿರುವವರಿಗೆ ಹೆಚ್ಚಿನ ಸಹಾಯವನ್ನು ಒದಗಿಸಿದೆ. ಅಲ್ಲಿ ಹೆಚ್ಚಿಗೆ ನೀರು ನಿಂತು ನೂರಾರು ಹಳ್ಳಿಗಳಿಗೆ ಸಹಾಯವಾಗುವ ಪರಿಸ್ಥಿತಿ ಇದೆ. ಅದರಿಂದ ಈಗ ಹೆಚ್ಚು ಪ್ರಾಧಾನ್ಯತೆಯನ್ನು ಕುಡಿಯುವ ನೀರಿಗೆ ಕೊಡುತ್ತಿದ್ದೇವೆ. ಏಕೆಂದರೆ ಇಡೀ ರಾಜ್ಯದಲ್ಲಿ ಅದರ ಕೊರತೆ ಬಹಳ ಹೆಚ್ಚಾಗಿದೆ. ಆದರಿಂದಾಗಿ ಕೆಲವಾರು ಯೋಜನೆಗಳನ್ನು ಈಗಾಗಲೇ ಹಾಕಿಕೊಂಡಿದೆ. ಇದು ಯಾವ್ಯಾವ ಭಾಗದಲ್ಲಿ ಅಗತ್ಯವಾಗಿ ಆಗಬೇಕೋ ಅದನ್ನು ಸಂಪೂರ್ಣವಾಗಿ ಯಶಸ್ವಿಯಾಗಿ ಮಾಡುವ ಉದ್ದೇಶವನ್ನು ಇಟ್ಟುಕೊಂಡು ಕೆಲಸಮಾಡುತ್ತಿದ್ದೇವೆಂದು ನಾನು ಈ ಸಭೆಗೆ ತಿಳಿಸುತ್ತೇನೆ. ಎಲ್ಲಾ ಮಾನ್ಯ ಸದಸ್ಯರು ಯಾವ್ಯಾವ ತಾಲ್ಲೂಕುಗಳಲ್ಲಿ ಏನೇನು ತೊಂದರೆಗಳು ಇವೆಯೆಂದು ತಿಳಿಸಿದ್ದರೂ ಅವರಿಗೆ ಕುಡಿಯುವ ನೀರಿನ ವಿಷಯದಲ್ಲಿ ಹೇಳುವ ಉತ್ತರವೇನೆಂದರೆ ಈಗಾಗಲೇ ಅನೇಕ ಅಂತಹ ಯೋಜನೆಗಳನ್ನು ಕೈಗೊಂಡಿದ್ದೇವೆ. ಸಾಮಾನ್ಯವಾಗಿ ಬೆಂಗಳೂರಿನ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿಯೇ ಸರಿಯಾದ ಆಹಾರಪದಾರ್ಥಗಳು ಒದಗದೆ, ಕುಡಿಯುವ ನೀರಿನ ಸೌಕರ್ಯವೂ ಸಹ ಸಾಕಷ್ಟು ಇಲ್ಲದೆ ಅನೇಕ ಜನ ಅಲ್ಲಿ ಕಾಲರಾಕ್ಕೆ ತುತ್ತಾಗುತ್ತಾ ಇರುವುದನ್ನು ಕೆಲವು ಸದಸ್ಯರು ಹೇಳಿದರು

ಶ್ರೀ ಬಿ ಪುಟ್ಟಸ್ವಾಮಯ್ಯ.—ದೊಡ್ಡಬಳ್ಳಾಪುರದಲ್ಲಿ ಅಲ್ಲಿ ಮಾರಾಟವಾಡುವ ಹಣ್ಣು ಹಂಪಲುಗಳನ್ನು ತಿಂದು ಕಾಯಿಲೆ ಬಂದಿದೆ. ಆದರೆ ಕುಡಿಯುವ ನೀರಿಗಾಗಿ ಜನ ಭಯಭ್ರಾಂತರಾಗಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರಾಜ್ಯದಲ್ಲಿ ಸರಿಯಾದ ಆಹಾರಪದಾರ್ಥಗಳು ಇಲ್ಲದೆ ಕುಡಿಯುವ ನೀರಿನ ಅಭಾವದಿಂದ ಅಲ್ಲಿ ಕಾಲರಾ ಬಂದು ಅನೇಕ ಜನರು ಸತ್ತಿದ್ದಾರೆ. ಈಗ ಆ ಕಾಯಿಲೆ ಇಡೀ ಜಿಲ್ಲೆಗೆ ಎಲ್ಲಿ ಹರಡುತ್ತದೋ ಎಂದು ತುಂಬಾ ಭಯಭ್ರಾಂತರಾಗಿದ್ದಾರೆ. ಆ ಒಂದು ಭಯ ಜನರಿಗೆ ಅಲ್ಲಿ ಇರುವುದರಿಂದ ಆರೋಗ್ಯ ಇಲಾಖೆಯವರು ಅದರ ಬಗ್ಗೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ. ಆಹಾರ ಇಲಾಖೆಯವರು ಏನೇನು ಮುಂಜಾಗರೂಕತೆ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ತೆಗೆದುಕೊಂಡಿದ್ದಾರೆ ಯಾವುದೇ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬಗ್ಗೆ ಇನ್ನೂ ಕೆಲಸವಾಗುವುದು ಇದೆಯೆಂದು ಹೇಳಿದರೆ, ಕೂಡಲೇ ಅಲ್ಲಿ ಸೂಕ್ತ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆ. ಧಾರವಾಡ ಜಿಲ್ಲೆಯಲ್ಲಿ ಬೋರ್‌ವೆಲ್‌ಗಳನ್ನು ತೆಗೆದಿದ್ದರೂ ಕಲವು ಕಡೆಗಳಲ್ಲಿ ಅಲ್ಲಿ ಉಪ್ಪು ನೀರು ಬಂದುದರಿಂದ ಅಲ್ಲಿ ಟ್ಯಾಂಕ್ ವ್ಯವಸ್ಥೆಯಿಂದ ಒಳ್ಳೆಯ ನೀರನ್ನು ಕುಡಿಯಲು ಒದಗಿಸುತ್ತಿದ್ದೇವೆ. ಯಾವುದೇ ಊರಿನಲ್ಲಿ ಎಂತಹ ತೊಂದರೆಯಿದ್ದರೂ ಕುಡಿಯುವ ನೀರಿನ ಬಗೆ ಹೆಚ್ಚಿನ ಶ್ರದ್ಧೆಯಿಂದ ಸಂಬಂಧಪಟ್ಟ ಅಧಿಕಾರಿಗಳು ಕೆಲಸಮಾಡಬೇಕೆಂದು ಈಗಾಗಲೇ ನಿರ್ದೇಶನಗಳನ್ನು ಕೊಟ್ಟಿದ್ದೇವೆ. ಆದಕ್ಕೆ ನಮಗೆ ಸಾಕಷ್ಟು ಸಿಬ್ಬಂದಿಯ ಅವಶ್ಯಕತೆ ಬೇಕು. ಆದರೆ ಈ ಸಂದರ್ಭದಲ್ಲಿ ಅದಕ್ಕಾಗಿ ನಮ್ಮಲ್ಲಿ ಸಾಕಷ್ಟು ಸಿಬ್ಬಂದಿ. ಸಲಕರಣೆಗಳಿವೆಯೆಂದು ನಾನು ಸ್ಪಷ್ಟವಾಗಿ ತಿಳಿಸುತ್ತೇನೆ. ಇನ್ನು ಕೆಲವು ಕಡೆಗಳಲ್ಲಿ ಆಹಾರಧಾನ್ಯಗಳ ಕೊರತೆ ಇಲ್ಲವೆಂದು ತಿಳಿಸಿದ್ದಾರೆ, ರೋಗಗಳು ಇಂತಹ ಸಂದರ್ಭಗಳಲ್ಲಿ ಹರಡಬಹುದೆಂದು ಬೇರೆ ಹೇಳಿದ್ದಾರೆ. ಆದ್ದರಿಂದ ಆರೋಗ್ಯ ಅಧಿಕಾರಿಗಳು ಬಹಳ ಎಚ್ಚರಿಕೆಯಿಂದ ಇಂತಹ ಸನ್ನಿವೇಶದಲ್ಲಿ ಕೆಲಸಮಾಡಬೇಕು. ಏನಾದರೂ ಅಂತಹ ರೋಗಗಳು ವ್ಯಾಪಿಸಿಕೊಂಡರೆ ಕೂಡಲೇ ಅದನ್ನು ತಡೆಗಟ್ಟುವ ಕಾರ್ಯವನ್ನು ಅದರಲ್ಲಿಯೂ ಅದನ್ನು ನಿವಾರಣೆ ಮಾಡುವ ಕಾರ್ಯಕ್ಕಾಗಿ ತಕ್ಕ ಚಿಕಿತ್ಸಾ ಕ್ರಮಗಳನ್ನು ಕೈಗೊಳ್ಳುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿದ್ದಾರೆಂದು ನಾನು ಈ ಸಭೆಗೆ ತಿಳಿಸುತ್ತೇನೆ.

ಇನ್ನು ಮಾನ್ಯ ಶ್ರೀ ದೇವೇಗೌಡರು ಮಾತನಾಡುತ್ತಾ ಲಾರಿಗಳನ್ನು ಕೊಡುವ ವಿಷಯದಲ್ಲಿ ಹುಲ್ಲು ತರುವುದಕ್ಕೆ ಆರ್ಡರ್ ಕೊಟ್ಟಿಲ್ಲವೆಂದು ಹೇಳಿದರು ಅಕ್ಟೋಬರ್ 11ರಿಂದಲೇ ಆರ್ಡರ್ ಕಳುಹಿಸಿ ಈ ರೀತಿ ಮಾಡಬೇಕೆಂದು ನಾವು ಅವರಿಗೆ ಸೂಚನೆ ಕೊಟ್ಟಿದ್ದೇವೆ, ಮತ್ತೆ ಸಾಲ ವಸೂಲಾತಿಯ ಬಗ್ಗೆ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದರು.

ಶ್ರೀ ಬಿ. ಪುಟ್ಟಸ್ವಾಮಯ್ಯ.-ಮೊದಲು ಒಂದು ಕಂತೆಗೆ ಎರಡು ರೂಪಾಯಿಗಳನ್ನು ಕೊಟ್ಟು ಕೊಂಡುಕೊಳ್ಳುತ್ತಿದ್ದದ್ದು ಇವತ್ತು ಅದರ ಟ್ರಾನ್ಸ್‌ಪೋರ್ಟೇಷನ್ ರೇಟ್ ಸಹ ಬಹಳ ಜಾಸ್ತಿಯಾಗಿದೆ ಆದ್ದರಿಂದ ಈಗಲಾದರೂ ಹುಲ್ಲು ರೈತರಿಗೆ ಸುಲಭ ಬೆಲೆಗೆ ದೊರಕುವ ಹಾಗೆ ದನಗಳಿಗೂ ಕೂಡ ಮೇವು ಹೆಚ್ಚಿಗೆ ಕಡಿಮೆ ಬೆಲೆಯಲ್ಲಿ ಸಿಗುವ ಹಾಗೆ ಸರ್ಕಾರದವರು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಿಗೆ ಹೇಳಬೇಕಾದರೆ ದನಗಳಿಗೆ ಮೇವು ಮತ್ತು ಕುಡಿಯುವ ನೀರನ್ನು ಒದಗಿಸುವುದು ಬಹಳ ಕಷ್ಟಕರವಾದ ವಿಷಯವೆಂದು ನಾನು ನಿನ್ನೆಯೇ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ಆದರೂ ಸಹ ಸರ್ಕಾರದವರು ಆ ಒಂದು ವಿಚಾರದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಈಗಾಗಲೇ ಹಾಕಿಕೊಂಡು ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ,

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.-ರೈತರು ಈಗಾಗಲೇ ಸಾಲಗಳನ್ನು ಬೇಕಾದಷ್ಟು ಕೊಡಬೇಕಾಗಿದೆ ಆದ್ದರಿಂದ ಸರ್ಕಾರದವರೇ ಅವರಿಗೆ ದನಗಳ ಮೇವಿಗಾಗಿ ಹಣ ಸಹಾಯವನ್ನು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಮಾನ್ಯ ಸಭೆಯಲ್ಲಿ ನನ್ನ ಒಂದು ವಿನಂತಿ. ಅನೇಕ ಕಡೆಗಳಲ್ಲಿ ನನಗೆ ತಿಳಿದಿರುವ ಹಾಗೆ ಹುಲ್ಲು ದೊರೆಯುತ್ತದೆ. ಉದಾಹರಣೆಗೆ ಹೇಳುವುದಾದರೆ, ಮಂಡ್ಯಾ ಜಿಲ್ಲೆಯಲ್ಲಿ ಭದ್ರಾ ನಾಲಾ ಹಿಂದುಗಡೆಯಲ್ಲಿರತಕ್ಕ ಪ್ರದೇಶಗಳಲ್ಲಿ ಹಾಗೂ ತುಂಗಭದ್ರಾ ಇರತಕ್ಕ ಪ್ರದೇಶಗಳಲ್ಲಿ ಹೇರಳವಾಗಿ ನೆಲ್ಲು ಹುಲ್ಲು ಸಿಗುತ್ತದೆ. ಅಲ್ಲಿಂದಲೇ ಅನೇಕ ಜನರು ಅನೇಕ ಪ್ರದೇಶಗಳಿಗೆ ಅದನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಅದನ್ನು ಸಾಗಿಸು

ವಾಗ ಆಗತಕ್ಕ ಖರ್ಚನ್ನು ಸರ್ಕಾರದವರೇ ವಹಿಸಿಕೊಳ್ಳಲಾಗುತ್ತದೆಂದು ಆರ್ಡರ್ ಕೊಟ್ಟಿದ್ದಾರೆ ಅದಕ್ಕಾಗಿ ಲೋಕೋಪಯೋಗಿ ಇಲಾಖೆಯಲ್ಲಿರತಕ್ಕ ಲಾರಿಗಳನ್ನೂ ಮತ್ತು ತಾಲ್ಲೂಕು ಸೊಸೈಟಿಗಳಲ್ಲಿ ಇರತಕ್ಕ ಲಾರಿಗಳನ್ನು ಮಾತ್ರ ಉಪಯೋಗಿಸಿಕೊಳ್ಳಬೇಕೆಂದೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಹೇಳಿದ್ದೇವೆ.

12-30 P.M.

ಖಾಸಗೀ ಲಾರಿಗಳನ್ನೂ ಕೂಡ ಪಡೆಯಬಹುದು ಎಂದು ಆರ್ಡರ್ ಮಾಡಬಹುದಾಗಿತ್ತು. ಆದರೆ ಕಳೆದ ಸಾರಿ 1973-74 ರಲ್ಲಿ ಆದಂಥಾ ಅನುಭವ ಎಲ್ಲಕ್ಕಿಂತ ಹೆಚ್ಚಾಗಿ ಇವನ್ನು ಸಾಗಿಸುವ ಖರ್ಚು ಜಾಸ್ತಿಯಾಗಿ ಯಾರ್‍ಯಾರೋ ಸಾಗಿಸಿಬಿಟ್ಟು ಸುಳ್ಳು ಲೆಕ್ಕ ಅಂಶ ಒದಗಿಸಿ ದುಡ್ಡು ತೆಗೆದುಕೊಂಡಿರತಕ್ಕಂಥಾ ಕೆಟ್ಟ ಅನುಭವ ಆದುದ್ದರಿಂದ ಈವಾಗ ಅದನ್ನು ನಿದಾನ ಮಾಡಿದ್ದೇವೆ. ಅಂತಹ ಅವಶ್ಯಕತೆ ಕಂಡುಬಂದಲ್ಲಿ ನಮ್ಮ ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿ ಅದನ್ನು ಯಾವ ರೀತಿ ವಿತರಣೆ ಮಾಡಬೇಕು ಅನುವುದನ್ನು ನಾವು ಯೋಚನೆ ಮಾಡುತ್ತಿದ್ದೇವೆ. ಇದರ ಜೊತೆಗೆ ಹುಲ್ಲನ್ನು ದಾನವಾಗಿ ಕೊಡತಕ್ಕಂಥಾವರೂ ಸಹ ಇದ್ದಾರೆ. ಕಳೆದ ಸಾರಿ ಮಂಡ್ಯದಿಂದ ಬೀದರ್, ಬಿಜಾಪುರ ಸಾಗಿಸಿ ಆ ದನಗಳನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಿದೆವು. ಈ ವರ್ಷವೂ ಕೂಡ ಅದನ್ನು ಯಾವರೀತಿ ಮಾಡಬೇಕು ಅನ್ನುವುದನ್ನು ಆಲೋಚನೆ ಮಾಡುತ್ತಿದ್ದೇವೆ. ಈ ಕಾರ್ಯಕ್ರಮವನ್ನು ತಾಲ್ಲೂಕುಮಟ್ಟದಲ್ಲಿ ಆಗಲಿ ಅಥವಾ ದೊಡ್ಡ ದೊಡ್ಡ ಗ್ರಾಮದ ಮಟ್ಟದಲ್ಲಿ ಆಗಲಿ ಅದನು ತೆಗೆದುಕೊಂಡು ಹೋಗಿ ಇಟ್ಟು ಅದನ್ನು ಕೊಡುವುದಕ್ಕೆ ಸಾಧ್ಯವೇ ಅನ್ನು ಆಲೋಚನೆ ಮಾಡುತ್ತಿದ್ದೇವೆ. ನಾನು ಈಗಾಗಲೇ ಮುಖ್ಯಮಂತ್ರಿಗಳ ಜೊತೆಯಲ್ಲಿ ಮತ್ತು ಮಂತ್ರಿ ಮಂಡಲದಲ್ಲಿ ಇದನ್ನು ಚರ್ಚೆ ಮಾಡಿ ಅದನ್ನು ಆಲೋಚನೆ ಮಾಡೋಣ ಎಂದು ಇಷ್ಟಪಟ್ಟಿದ್ದೇವೆ. ಏತಕ್ಕೆಂದರೆ ಇದು ಬೀಳ ಸುಟ್ಟು ಭೋಪಾದಿಯಲ್ಲಿ ವಿನಿಯೋಗವಾಗಬೇಕು ಎಂದು ಹೇಳುತ್ತೇನೆ. ಕಳೆದ ಸಾರಿ ಆದ ಅನುಭವದಿಂದ ಈಗ ನಾವು ಅದನ್ನು ಹುಷಾರಾಗಿ ಮಾಡಬೇಕು ಅಷ್ಟೆ. ಆದರೆ ಅರಣ್ಯದಲ್ಲಿರತಕ್ಕಂಥಾ ಹುಲ್ಲನ್ನು ಏತಕ್ಕೆ ಉಪಯೋಗಿಸಿಲ್ಲ ಎಂದು ಶ್ರೀಮಾನ್ ಕೆ. ಹೆಚ್. ಪಾಟೀಲರು ತಿಳಿಸಿದರು. ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ಲ್ಲಿ ಅರಣ್ಯದಲ್ಲ ಎಷ್ಟು ಹುಲ್ಲು ಸಿಕ್ಕುತ್ತದೆ ಅದನ್ನು ಕುಯ್ದು ಇಡುವುದಕ್ಕೆ ಈಗಾಗಲೇ ಆಜ್ಞೆ ಹೊರಡಿಸಿದ್ದೇವೆ. ಅದನ್ನು ಒದಗಿಸತಕ್ಕಂಥಾದಕ್ಕೂ ಕೂಡ ಏರ್ಪಾಡು ಮಾಡಿದ್ದೇವೆ ಮತ್ತು ಮೊದಲು ಹುಲ್ಲನ್ನು ಕೊಂಡುಕೊಳ್ಳುವುದಕ್ಕೆ ರವಿನ್ಯೂ ಇಲಾಖೆಯಿಂದ ತಕಾವಿ ಲೋನ್ ಕೊಡುತ್ತಾ ಇದ್ದರು. ಈಗ ಅದನ್ನು ನಿಲ್ಲಿಸಿ ಕೋಆಪರೇಟಿವ್ ಸೊಸೈಟಿಗೆ ಕೊಟ್ಟಿದ್ದಾರೆ ಮತ್ತೆ ಅದನ್ನು ರವಿನ್ಯೂ ಇಲಾಖೆಯಿಂದ ಕೊಡುವುದಕ್ಕೆ ಯೋಚನೆ ಮಾಡಿ ಎಂದು ಶ್ರೀಮಾನ್ ದೇವೇಗೌಡರು ಹೇಳಿದ್ದಾರೆ. ನಾವು ಇದನ್ನೂ ಕೂಡ ಆಲೋಚನೆ ಮಾಡಿ ಮುಂದೆ ಇದನ್ನು ಯಾವರೀತಿ ಮಾಡಬೇಕು, ಯಾವಾಗನಿಂದ ಇದನ್ನು ಒದಗಿಸಿ ಕೊಡುವ ವ್ಯವಸ್ಥೆ ಮಾಡಬೇಕು ಅನುವುದನ್ನು ಆಲೋಚನೆ ಮಾಡುತ್ತಿದ್ದೇವೆ.

SRI D DEVARAJ URS (Chief Minister)—Sir, I want to place before the House the efforts made by the Government since 1972 for providing drinking water facilities to the vllages. I would like to give the facts and figures 1972ರ ವರೆಗೆ ಓಪನ್‌ವೆಲ್ಸ್ ಇದ್ದುವು ನಮ್ಮ ಇಡೀ ರಾಜ್ಯದಲ್ಲ ತೆಗೆದುಕೊಂಡರೆ 24108, ಈವೊತ್ತು ಇರತಕ್ಕಂಥಾದ್ದು ಓಪನ್‌ವೆಲ್ಸ್ 3/920 ಇವೆ ಅಂದರೆ ನಾಲ್ಕೂವರೆ ವರ್ಷದಲ್ಲ ಸುಮಾರು 8·14 ಓಪನ್‌ವೆಲ್ಸ್ ಅನ್ನು ಹೊಸವಾಗಿ ತೆಗೆದಿದ್ದೇವೆ ಅಂತ ಆಯಿತು. ಅದೇರೀತಿ ಬೋರ್‌ವೆಲ್ಸ್ ತೆಗೆದುಕೊಂಡರೆ 1972ನೇ ಇಸವಿಯ ವರೆಗೆ ತೆಗೆದುಕೊಂಡರೆ ಇಡೀ ರಾಜ್ಯದಲ್ಲಿ ಇದ್ದಂಥಾ ಬೋರ್‌ವೆಲ್ಸ್ 6 ಸಾವಿರ ಚಿಲ್ಲರೆ. ಈಗ ಬೋರ್‌ವೆಲ್ಸ್ ಜಾಸ್ತಿ ತೆಗೆದಿದ್ದೇವೆ. ಆದರೆ ಅದರಲ್ಲಿ ಸಕ್ಸಸ್‌ಫುಲ್ ಆಗಿರುವುದನ್ನು ತೆಗೆದುಕೊಂಡರೆ ಸುಮಾರು 7 ಸಾವಿರ ಬೋರ್‌ವೆಲ್ಸ್ ಸಕ್ಸಸ್‌ಫುಲ್ ಆಗಿದೆ. ಅದೇರೀತಿ ಎನ್ ಆರ್ ಡಬ್ಲ್ಯೂ. ಸ್ಕೀಂನಲ್ಲ ತೆಗೆದುಕೊಂಡರೆ 1972ನೇ ಇಸವಿಯಲ್ಲಿ 224 ಲಕ್ಷ ಖರ್ಚು ಮಾಡಿದೆ. ಈ ಹಿಂದೆ ವರ್ಷೇ ವರ್ಷೇ 123 ಲಕ್ಷ 140 ಲಕ್ಷ ಖರ್ಚಾಗುತ್ತಿತ್ತು. ಇಷ್ಟೇ ಅಲ್ಲದೆ ನಮ್ಮಲ್ಲಿ ಇನ್ನೆಷ್ಟು ಗ್ರಾಮಗಳಿಗೆ

ಕುಡಿಯುವ ನೀರನ್ನು ಒದಗಿಸಬೇಕು ಅನ್ನುವ ಲೆಕ್ಕ ಇಟ್ಟುಕೊಂಡಿದ್ದೇವೆ. ಅಲ್ಲದೆ ಇನ್ನು 2-3 ವರ್ಷದಲ್ಲಿ ಯಾವ ಗ್ರಾಮಗಳಿಗೂ ಕೂಡ ಕುಡಿಯುವ ನೀರಿನ ಅಭಾವ ಇಲ್ಲದೇ ಇರುವ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯ ಇದೆ ನಾವು ಆ ಕೆಲಸವನ್ನು ಮಾಡುತ್ತೇವೆ. ಅದೇರೀತಿ 1972-73ರಲ್ಲಿ 182 ಲಕ್ಷ 25 ಸಾವಿರ ಖರ್ಚಾಗಿದೆ, 1973-74ರಲ್ಲಿ 208 ಲ 84 ಸಾವಿರ ಖರ್ಚಾಗಿದೆ. 5ನೇ ಪಾಂಚವಾರ್ಷಿಕ ಯೋಜನೆಯಲ್ಲಿ 2 2.59 ಲಕ್ಷ ಖರ್ಚಾಗಿದೆ. 1975-7 ರಲ್ಲಿ 209.17 ಲಕ್ಷ ಖರ್ಚಾಗಿದೆ. ಇದು ರೂರಲ್ ಸ್ಕೀಂ ನದ್ದು ಮಾತ್ರ. ಅರ್ಬನ್ ವಾಟರ್ ಸಪ್ಲೈ ಬಗ್ಗೆ ಹೇಳುತ್ತಾ ಇಲ್ಲ. 1976-77ರಲ್ಲಿ ನಾವು ಇದಕ್ಕೆ ಒದಗಿಸಿರತಕ್ಕಂಥಾ ಹಣ 243.50 ಲಕ್ಷ ಬಹುಶಃ ನನಗೆ ಅನಿಸುತ್ತದೆ ಇದು ಇನ್ನೂ ಸ್ವಲ್ಪ ಜಾಸ್ತಿ ಖರ್ಚಾಗುತ್ತದೆ ಎಂದು. ಮೊದಲಿನ ಒಂದು ಎಸ್ಟಿಮೇಟ್ ಪ್ರಕಾರ ಅಷ್ಟು ಇತ್ತು. ಈಗ ಅದು ಬಹುಶಃ 3 ಕೋಟಿಯವರೆಗೆ ಹೋಗಬಹುದು. ನಾನು ಈ ಒಂದು ಅಂಕಿಅಂಶ ಹೇಳುತ್ತಾ ಇರುವುದರ ಅರ್ಥ, ಇತ್ತೀಚೆಗೆ ನಮ್ಮ ರಾಜ್ಯದಲ್ಲ ಈ ಕುಡಿಯುವ ನೀರಿನ ಅಭಾವ ಆಗಿಂದಾಗ್ಗೆ ಏನು ತಲೆದೋರುತ್ತಾ ಇದೆ ಬಿಜಾಪುರದಲ್ಲಾಗಲಿ, ಬೆಂಗಳೂರಿನಲ್ಲಾಗಲಿ, ತುಮಕೂರಿನಲ್ಲಾಗಲಿ ನಾನು ಆಗಲೇ ಹೇಳಿದಂತೆ ಎಲ್ಲಾ ಹಳ್ಳಿಗಳಲ್ಲೂ ಕೂಡ ಈ ಕುಡಿಯುವ ನೀರಿನ ಅಭಾವವನ್ನು ಒಂದು ಶಾಶ್ವತವಾಗಿ ಪರಿಹಾರ ಮಾಡಬೇಕು ಎನ್ನುವುದೇ ಸರ್ಕಾರದ ಉದ್ದೇಶ ಇತ್ತೀಚೆಗೆ ಈ ಓಪನ್‌ವೆಲ್ಸ್ ತೆಗೆಯುವಾಗ ನಮ್ಮ ಅನುಭವಕ್ಕೆ ಬಂದಿರುವುದು ಬೇಸಿಗೆ ಬಂದರೆ ಅದರಲ್ಲಿ ನೀರೇ ಇರುವುದಿಲ್ಲ, ಅದನ್ನು ಆಳಪಡಿಸಿಯೂ ಕೂಡ ನೋಡಿದ್ದೇವೆ. ಹೋದ ಸಲದ ಕ್ಷಾಮದ ಕಾಲದಲ್ಲಿ ಹತ್ತಾರುಸಾವಿರ ಬಾವಿಗಳನ್ನು ಆಳ ಮಾಡಿಸಿ, 5 ಅಡಿ 10 ಅಡಿ, 15 ಅಡಿ ಆಳ ಮಾಡಿಸಿ ನೋಡಿದ್ದೇವೆ. ಅದರಲ್ಲಿ ಕೆಲವು ದಿವಸ ನೀರು ಇರುತ್ತದೆ, ಮತ್ತೆ ಬೇಸಿಗೆ ಬಂದರೆ ನೀರು ಹೊರಟು ಹೋಗುತ್ತದೆ. ಈ ದೃಷ್ಟಿಯಿಂದ ಜನರೂ ಕೂಡ ನಮಗೆ ಬೋರ್‌ವೆಲ್ಸ್ ಕೊಡಿ ಎನ್ನುವ ಭಾವನೆ ಬರುತ್ತಾ ಇದೆ ಏತಕ್ಕೆಂದರೆ ಅದರಲ್ಲಿ ಪರ್ಮನೆಂಟ್ ಆಗಿ ನೀರು ಸಿಕ್ಕುತ್ತದೆ ಅನ್ನುವುದು ಅವರಿಗೆ ಅರ್ಥವಾಗಿದೆ ಸರ್ಕಾರದ ಪ್ರಯತ್ನವೂ ಕೂಡ ಬೋರ್‌ವೆಲ್ಸ್ ಅನ್ನು ಹೆಚ್ಚು ಹೆಚ್ಚಾಗಿ ತೆಗೆಯಬೇಕು ಅನ್ನುವ ಪ್ರೋಗ್ರಾಂ ಆಗಿದೆ. ಈಗ ಅದಕ್ಕೆ ಸಾಕಷ್ಟು ರಿಗ್ಸ್ ಬೇಕಾಗಿದೆ. ಅದಕ್ಕಾಗಿ ಹೆಚ್ಚು ರಿಗ್ಸ್‌ಗಳನ್ನು ಕೊಂಡುಕೊಳ್ಳಬೇಕು ಅನ್ನುವ ಪ್ರೋಗ್ರಾಂ ಕೂಡ ಸರ್ಕಾರಕ್ಕೆ ಇದೆ. ತಾತ್ಕಾಲಿಕವಾಗಿ ಕ್ಷಾಮ ನಿವಾರಣೆಗೋಸ್ಕರ ತಮಿಳು ನಾಡಿನಲ್ಲಿ 9 ರಿಗ್ಸ್‌ಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಅದನ್ನೂ ತರಿಸಿಕೊಳ್ಳುತ್ತೇವೆ, ಜೊತೆಗೆ ಈ ರಿಗ್ಸ್‌ಗಳನ್ನು ಕೊಂಡುಕೊಳ್ಳುವುದಕ್ಕೂ ಕೂಡ ಒಂದು ಪ್ರೋಗ್ರಾಂಅನ್ನು ಹಾಕಿಕೊಂಡಿದ್ದೇವೆ. ಏತಕ್ಕೆಂದರೆ ಮುಂದೆ ಬರತಕ್ಕಂಥಾ ಬೇಸಿಗೆಯಲ್ಲಿ ಏನು ತೊಂದರೆ ಬರಬಹುದೋ ಏನೋ ಅನ್ನುವ ನಿರೀಕ್ಷಣೆ ಸರ್ಕಾರಕ್ಕೆ ಇದೆ. ಈಗ ಅಲ್ಪಸ್ವಲ್ಪ ಅಲ್ಲಲ್ಲಿ ನೀರು ಬಂದಿದ್ದರೂ ಕೂಡ ಬೇಸಿಗೆ ಬಂದಾಗ ಅದು ಒಣಗಿ ಹೋಗುತ್ತದೆ. ಆವಾಗ ಏನು ಮಾಡಬೇಕು ? ಈ ದೃಷ್ಟಿಯಿಂದ ಬೋರ್‌ವೆಲ್ಸ್ ಪ್ರೋಗ್ರಾಂ ಅನ್ನು ಸಾಧ್ಯವಾದಷ್ಟು ಸ್ಟೆಪ್ ಅಪ್ ಮಾಡಬೇಕು ಅನ್ನುವ ಉದ್ದೇಶ ಇದೆ ಅಲ್ಲದ ಅದಕ್ಕೆ ಸಲಕರಣೆಗಳನ್ನೂ ಕೂಡ ಮಾಡಿಕೊಳ್ಳುತ್ತಿದ್ದೇವೆ. ಅದೇರೀತಿ ಅನೇಕ ಹೊಳೆಗಳಲ್ಲಿ ಬೇಸಿಗೆ ಕಾಲದಲ್ಲಿ ನೀರು ಇರುವುದರಿಂದ ಅದನ್ನು ಯಾವರೀತಿ ಉಪಯೋಗ ಮಾಡಿಕೊಳ್ಳಬೇಕು ಅನ್ನುವ ಪ್ರೋಗ್ರಾಂ ಸಹ ಇದೆ. ಒಂದು ಕಾಲದಲ್ಲಿ ಕೃಷ್ಣಾ ನದಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಮಹಾರಾಷ್ಟ್ರದ ಕೊಯ್ನಾ ಕಡೆಯಿಂದ ನೀರು ಕೊಡುತ್ತಾರೆ ಅಂತ ಅದಕ್ಕೆ 10-15 ಲಕ್ಷ ರೂಪಾಯಿಯ ಬೆಲೆ ಬಾಳುವಷ್ಟು ಎಲೆಕ್ಟ್ರಿಸಿಟಿಯನ್ನು ಕೊಟ್ಟರೂ ಕೂಡ ನಮಗೆ ನೀರು ಬರಲಿಲ್ಲ. ಆದುದರಿಂದ ಕೃಷ್ಣಾ ನದಿಯಲ್ಲಿ ಎಲ್ಲೆಲ್ಲಿ ಬಂಡಾರಗಳನ್ನು ಹಾಕಬೇಕೋ ಅಂಥಾ ಕಡೆ ಕೆಲವು ಕಡೆ ಹಾಕಿ ಪೂರೈಸಿದ್ದಾರೆ. ಇನ್ನು ಕೆಲವು ಕಡೆ ಕೆಲಸ ನಡೆಯುತ್ತಾ ಇದೆ. ಆದರೆ ಕೆಲವು ಹಿಪ್ಪರಗಿ ಅಂಥಾ ದೊಡ್ಡ ದೊಡ್ಡ ಬ್ಯಾರೇಜಸ್ ಹಾಕಬೇಕಾಗಿದೆ. ಆ ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ಸ್ವಲ್ಪ ನಿಧಾನವಾಗಬಹುದು. ಏತಕ್ಕೆಂದರೆ ಅದಕ್ಕೆ ಕೋಟಿಗಟ್ಟಲೆ ಹಣ ಖರ್ಚು ಮಾಡಬೇಕಾಗುತ್ತದೆ.

ವರದಾ ನದಿಯಾಗಲೀ, ಭೀಮಾ ನದಿಯಾಗಲೀ, ಎಲ್ಲೆಲ್ಲಿ ನೀರನ್ನು ನಿಲ್ಲಿಸುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲಾ ಈ ಕೆಲಸವನ್ನು ತೆಗೆದುಕೊಳ್ಳುತ್ತಿದ್ದೇನೆ. ಕುಡಿಯುವ ನೀರಿನ ವಿಚಾರ ಹೇಳಬೇಕೆಂದರೆ, ಅಭಾವ ಬಂದ ಕಾಲದಲ್ಲಿ ಜನರಿಗೆ ಆಹಾರ ಮತ್ತು ನೀರನ್ನು ಅವಶ್ಯಕವಾಗಿ ಒದಗಿಸಬೇಕಾಗುತ್ತದೆ. ಅದರಲ್ಲಿಯೂ ಕುಡಿಯುವ ನೀರನ್ನು ಎಲ್ಲ ಕಡೆಯೂ ಒದಗಿಸುವುದು

ಸರ್ಕಾರದ ಜವಾಬ್ದಾರಿಯಾಗಿದೆ. ಅದಕ್ಕಾಗಿಯೇ ಸರ್ಕಾರದ ದೃಷ್ಟಿ ಇದರ ಕಡೆಗೆ ಪೂರ್ಣವಾಗಿ ಇದೆ ಈ ಕುಡಿಯುವ ನೀರಿನ ಬಗ್ಗೆ ಮಾನ್ಯ ಸದಸ್ಯರು ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಎಲ್ಲ ಕಡೆಯೂ ಈ ವರ್ಷದಲ್ಲಿಯೇ ನೀರಿನ ಪೂರೈಕೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ನೀವೂ ಸಹ ಒಪ್ಪುತ್ತೀರಿ. ಈಗ ಎರಡು ಸಾವಿರ ಹಳ್ಳಿಗಳಲ್ಲಿ ಬೋರ್‌ವೆಲ್ಸ್ ತೆಗೆಸಬೇಕೆಂಬ ಕಾರ್ಯಕ್ರಮವಿದೆ. ಪ್ರತಿ ಜಿಲ್ಲೆಯಲ್ಲಿ ಎಷ್ಟೆಷ್ಟು ಹಳ್ಳಿಗಳಲ್ಲಿ ತೆಗೆಸಬೇಕೆಂಬ ಬಗ್ಗೆ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದರೆ ಒಂದೇ ವರ್ಷದಲ್ಲಿ ಈ ಕೆಲಸವಾಗುವುದಿಲ್ಲ. ಒಂದೆರಡು ವರ್ಷಗಳಾಗಬಹುದು ಒಂದು ವೇಳೆ ಯಾವ ಹಳ್ಳಿಯಲ್ಲಿಯೇ ಆಗಲೀ, ಬೋರ್ ವೆಲ್ ತೆಗೆಯುವುದಕ್ಕಾಗದಿದ್ದರೆ ಅಂತಹ ಕಡೆಯಲ್ಲಿ ಓಪನ್-ವೆಲ್ ತೆಗೆಸಲಾಗುತ್ತದೆ. ಅಂತಹ ಕಡೆಯೂ ಕ್ಷಾಮ ಬಂದಾಗ ಸಾಕಷ್ಟು ನೀರು ಸಿಗದಿದ್ದರೆ ಗಾಡಿ ಅಥವಾ ಲಾರಿಗಳ ಮೂಲಕ ನೀರನ್ನು ಒದಗಿಸುತ್ತೇವೆ. ಆ ಒಂದು ಕೆಲಸವನ್ನು ನಾವು ಮಾಡುತ್ತೇವೆ. ಈಗ ಎಲ್ಲೆಲ್ಲಿ ಬೋರ್ ವೆಲ್ಸ್ ಇಲ್ಲ, ಓಪನ್ ವೆಲ್ಸ್ ಇಲ್ಲ, ಅಂತಹ ಕಡೆಗಳಗೆ ಬೇರೆ ಕಡೆಗಳಿಂದ ಗಾಡಿ, ಲಾರಿ ಅಥವಾ ಟ್ಯಾಂಕ್‌ಗಳ ಮೂಲಕ ನೀರನ್ನು ತರಿಸಿ ಒದಗಿಸಿಕೊಡೋಣ. ಈಗ ತಾತ್ಕಾಲಿಕವಾಗಿ ಮತ್ತು ಮುಂದೆ ಶಾಶ್ವತವಾಗಿ ನೀರನ್ನು ಒದಗಿಸುವಂತಹ ವಿಚಾರದಲ್ಲಿ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಸರ್ಕಾರ ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡಿದೆ ಮತ್ತು ಅದಕ್ಕೆ ನಾವು ಸಜ್ಜು ಮಾಡಿಕೊಂಡಿದ್ದೇವೆಂದು ಈ ಸಮಯದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಕಿವಿಮಾತನ್ನು ಹೇಳಬೇಕಾಗಿದೆ. ಅಧಿಕಾರ ಯಾವ ವ್ಯಕ್ತಿಗೂ ಶಾಶ್ವತವಲ್ಲ ಸುದೈವದಿಂದ ತಾವು ಈಗ ಮುಖ್ಯಮಂತ್ರಿಗಳಾಗಿದ್ದೀರಿ. ಮತ್ತು ಈಗ ನಮ್ಮ ರಾಜ್ಯದಲ್ಲಿ 15 ಜಿಲ್ಲೆಗಳಲ್ಲಿ ಬರ ಬಂದಿದೆ ಎಂಬುದನ್ನು ಸಹ ಒಪ್ಪಿದ್ದೀರಿ. ಅದನ್ನು ತಾವು ದಿಟ್ಟತನದಿಂದ ನಿಗ್ರಹಿಸದೇ ಹೋದರೆ ಜನ್ಮ ಜನ್ಮಕ್ಕೂ ಆ ಪಾಪದ ಕೂಪ ನಿಮ್ಮ ತಲೆಯ ಮೇಲೆ ಉಳಿಯುತ್ತದೆ. ಆದಕಾರಣ ಇದನ್ನು ತಾವು ಧೈರ್ಯದಿಂದ ಎದುರಿಸಿ, ಅದಕ್ಕೆ ನಮ್ಮ ಸಹಕಾರ ಇರುತ್ತದೆ. ಜೊತೆಗೆ ತಾವು ಜನತೆಯ ಸಹಕಾರವನ್ನು ಪಡೆದುಕೊಂಡು ಈ ಕೆಲಸವನ್ನು ಮಾಡದಿದ್ದರೆ, ತಾವು ಜನತೆಗೆ ಅಪಕಾರ ಮಾಡಿದಂತೆ ಆಗುತ್ತದೆಂದು ಹೇಳುತ್ತೇನೆ.

ಶ್ರೀ ಎಸ್. ವೈ. ಪಾಟೀಲ್.—ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ, ಎಲ್ಲೆಲ್ಲಿ ಓಪನ್ ವೆಲ್ಸ್ ಇದೆಯೋ, ಅಲ್ಲೆಲ್ಲಾ ಟ್ಯಾಂಕ್‌ಗಳನ್ನು ಕಟ್ಟಿಸಬೇಕು. ಈಗ ಲೋಕೋಪಯೋಗಿ ಇಲಾಖೆಯವರು ಪರ್ಕೊಲೇಷನ್ ಟ್ಯಾಂಕ್ಸ್‌ನ್ನು ಕಟ್ಟಿಸುತ್ತಿದ್ದಾರೆ. ಅಂತಹ ಕಡೆಗಳಲ್ಲಿ ಕ್ರೆಟ್ಸ್‌ನ್ನು ಕಡ್ಡಾಯವಾಗಿ ಹಾಕಿದರೆ ಕುಡಿಯುವ ನೀರಿನ ಸಮಸ್ಯೆಯು ತಪ್ಪುತ್ತದೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಅದೂ ಸಹ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ದನಗಳ ಮೇವಿನ ವಿಚಾರ ಹೇಳುತ್ತಿದ್ದೆ. ದನಗಳಿಗೆ ಕೆರೆ ಅಂಗಳವಲ್ಲಿ ನೀರಿನ ಅನುಕೂಲವಿಲ್ಲದಿದ್ದರೆ ಅಂತಹ ಕಡೆಗಳಲ್ಲಿ ಪಿಟ್ ವೆಲ್ಸ್ ತೆಗೆಸುತ್ತಿದ್ದೇವೆ. ಕೆರೆ ಅಂಗಳವಲ್ಲಿ ನೀರು ಇಲ್ಲದ ಪರಿಸ್ಥಿತಿ ಹವಗೆಟ್ಟಾಗ ಇಂತಹ ಕೆಲಸವನ್ನು ಕೈಕೊಳ್ಳಬೇಕೆಂದು ನಮ್ಮ ಜಿಲ್ಲಾಧಿಕಾರಿಗಳಿಗೆ ಮತ್ತು ಸ್ಥಳದ ಅಧಿಕಾರಿಗಳಿಗೆ ನಾವು ತಿಳಿವಳಿಕೆಯನ್ನು ಕೊಟ್ಟಿದ್ದೇವೆ.

ಇನ್ನು ಶ್ರೀಮಾನ್ ದೇವೇಗೌಡರು ನೀರನ್ನು ಸಾಗಿಸುವುದಕ್ಕೆ ಈ ಹಿಂದೆ ಕ್ಷಾಮ ಬಂದಾಗ ಉಪಯೋಗ ಮಾಡುತ್ತಿದ್ದ ಲಾರಿಗಳನ್ನು ಮತ್ತು ಟ್ಯಾಂಕ್‌ಗಳನ್ನು ಈಗಲೂ ಉಪಯೋಗಿಸಿಕೊಳ್ಳಿ ಎಂದು ಹೇಳಿದರು. ಅವುಗಳನ್ನೇ ತಾವು ಉಪಯೋಗಿಸಿಕೊಳ್ಳುತ್ತಿದ್ದೇವೆ. ಆ ವಾಹನಗಳು ಎಲ್ಲಿಯೋ ಹೊರಟು ಹೋಗಿವೆ ಎಂಬಹಕ್ಕಂಥ ಅನುಮಾನವನ್ನು ಆಗಾಗ್ಗೆ ವ್ಯಕ್ತಪಡಿಸುತ್ತಿರುತ್ತಾರೆ. ಈ ಹಿಂದೆ ಸಹ ಇವುಗಳ ಬಗ್ಗೆ ನಾನು ತಿಳಿಸಿದ್ದೆ ಈ ಸಂದರ್ಭದಲ್ಲಿಯೂ ಅವುಗಳ ವಿವರಗಳನ್ನು ತಿಳಿಸುತ್ತೇನೆ. ಆ ಸಂದರ್ಭದಲ್ಲಿ ನಾವು 90 ಪೆಟ್ರೋಲ್ ಲಾರಿಗಳನ್ನು ಮತ್ತು 385 ಡೀಸಲ್ ಲಾರಿಗಳನ್ನು ಉಪಯೋಗಿಸುತ್ತಿದ್ದೆವು. ನಂತರ ಅವುಗಳ ಪೈಕಿ 46 ಪೆಟ್ರೋಲ್

ಲಾರಿಗಳನ್ನು ಮತ್ತು 231 ಡೀಸಲ್ ಲಾರಿಗಳನ್ನು ಬೇರೆ ಬೇರೆ ಇಲಾಖೆಗಳಿಗೆ ಕೊಟ್ಟಿದ್ದೇವೆ. ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟಿಗೆ 44 ಪೆಟ್ರೋಲ್ ಲಾರಿಗಳನ್ನು ಮತ್ತು 154 ಡೀಸಲ್ ಲಾರಿಗಳನ್ನು ಕೊಟ್ಟಿದ್ದೇವೆ.

ಇನ್ನು ವಾಟರ್ ಟ್ಯಾಂಕ್ಸ್ ಬಗ್ಗೆ ಹೇಳಬೇಕೆಂದರೆ, ನಾವು ಆಗ ಕೊಂಡು ಕೊಂಡಿದ್ದು ಒಂದು ಸಾವಿರ. ಅವುಗಳಲ್ಲಿ 616ನ್ನು ಬೇರೆಬೇರೆ ಇಲಾಖೆಗಳಿಗೆ ಕೊಟ್ಟಿದ್ದೇವೆ. ಉಳಿದ 384 ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟ್ ಬಳಿ ಇವೆ. ಆಗ 200 ಟ್ರ್ಯಾಕ್ಟರ್‌ಗಳನ್ನು ಇದ್ದವು. ಅವುಗಳ ಪೈಕಿ 89ನ್ನು ಇಲಾಖೆಗಳಿಗೆ ಮಾರಾಟ ಮಾಡಿದ್ದೇವೆ. ಉಳಿದ 111 ನಮ್ಮ ಹತ್ತಿರ ಇವೆ. ಈಗಲೂ ಸಹ ಈ ಟ್ಯಾಂಕುಗಳು ಮತ್ತು ಲಾರಿಗಳನ್ನು ಉಪಯೋಗಿಸಿಕೊಂಡು ನೀರನ್ನು ಒದಗಿಸುವುದಕ್ಕೆ ನಾವು ಸಿದ್ಧವಾಗಿದ್ದೇವೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ವಾಹನಗಳನ್ನು ಹುಲ್ಲನ್ನು ಸಾಗಿಸುವುದಕ್ಕೂ ಸಹ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿದೆ.

ಇನ್ನು ಮಾನ್ಯ ದೇವೇಗೌಡರು ಅವರ ಸ್ವಂತ ಕ್ಷೇತ್ರದಲ್ಲಿರತಕ್ಕಂಥ ದಂಡಿಗನಹಳ್ಳಿಯಲ್ಲಿ ಸಾಲದ ವಿತರಣೆಯನ್ನು ನಿಲ್ಲಿಸಿದ್ದಾರೆಂದು ಹೇಳಿದ್ದಾರೆ. ಆ ಬಗ್ಗೆ ನಾನು ಸಂಬಂಧಪಟ್ಟ ಇಲಾಖೆಯಿಂದ ವಿವರಗಳನ್ನು ತರಿಸಿಕೊಂಡು ಉತ್ತರ ಹೇಳಬೇಕಾಗುತ್ತದೆ.

ಇನ್ನು ಹೇಮಾವತಿ ನೀರನ್ನು ಕೆಲವು ಭಾಗಗಳಿಗೆ ಒದಗಿಸಿಕೊಡಬೇಕೆಂದು ಮಾನ್ಯ ದೇವೇಗೌಡರು ಮತ್ತು ಇನ್ನೂ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ ಈಗಾಗಲೇ ತಾವುಗಳು ಪತ್ರಿಕೆಯಲ್ಲಿ ಓದಿರಬಹುದೆಂದು ಕಾಣುತ್ತದ, ಏನೆಂದರೆ ನಾನು ಈ ಬಗ್ಗೆ ಒಂದು ವಿಷಯ ತಿಳಿಸಿದ್ದೆ. ಏನೆಂದರೆ ನಾವು ಬಡ್ಜೆಟಿನಲ್ಲಿ ಎಷ್ಟು ಹಣವನ್ನು ದೊಡ್ಡ ನೀರಾವರಿ ಕಾಮಗಾರಿಗಳಿಗೆ ಒದಗಿಸಿದ್ದೆವೋ ಅದಕ್ಕಿಂತ ಎರಡು ಕೋಟಿ ರೂ. ಗಳನ್ನು ಹೆಚ್ಚಾಗಿ ಒದಗಿಸಿ ಅಭಾವವಿರತಕ್ಕಂಥ ಪ್ರದೇಶಗಳಲ್ಲಿ ನಾಲೆಗಳನ್ನು ತೆಗೆಸುವುದರ ಮೂಲಕ ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸಬೇಕೆಂದಿದ್ದೇವೆ. ಎಲ್ಲೆಲ್ಲಿ ಈ ಕೆಲಸವನ್ನು ಕೈಕೊಳ್ಳಬಹುದೆಂಬ ಬಗ್ಗೆ ತಜ್ಞರಿಂದ ತಿಳಿದುಕೊಂಡು ಈ ಕೆಲಸವನ್ನು ಕೈಕೊಳ್ಳುತ್ತೇವೆ.

ಇನ್ನು ಮಾನ್ಯ ಶಾಮಣ್ಣನವರು ಒಂದು ಮಾತನ್ನು ಹೇಳಿದರು. ಏನೆಂದರೆ ದಾನದ ರೂಪದಲ್ಲಿ ಯಾವುದನ್ನೂ ಕೊಡಬೇಡಿ ಎಂದು ಹೇಳಿದರು. ನಾವು ಕೆಲಸ ಮಾಡಿದವರಿಗೆ ಕೂಲಿಯನ್ನು ಕೊಡುತ್ತಿದ್ದೇವೆಯೇ ಹೊರತು. ಹಣವನ್ನಾಗಲೀ ಧಾನ್ಯವನ್ನಾಗಲೀ ದಾನದ ರೂಪದಲ್ಲಿ ಕೊಡುತ್ತಿಲ್ಲ. ಆದರೂ ಹಳ್ಳಿಗಳಲ್ಲಿ ಸರ್ಕಾರದವರು ಬೇಕಾದಷ್ಟು ಹಣ ಖರ್ಚು ಮಾಡುತ್ತಿದ್ದಾರೆಂಬ ಬಗ್ಗೆ ಶಂಕೆ ಪಟ್ಟಣಗಳಲ್ಲಿರುವವರಿಗೆ ಉಂಟಾಗುತ್ತದೆ. ಆದರೆ ಅದಕ್ಕೆ ಅವಕಾಶವಿಲ್ಲ, ಕಷ್ಟಪಟ್ಟು ದುಡಿದವರಿಗೆ ಮಾತ್ರ ಕೂಲಿ ಕೊಡುತ್ತಿದ್ದೇವೆಂದು ತಿಳಿಸುವುದಕ್ಕೆ ಬಯಸುತ್ತೇನೆ.

ಇನ್ನು ಮಾನ್ಯ ಜೋಗಣ್ಣನವರು ಸಾಯಿಲ್ ಕನ್ಸರ್‌ವೇಷನ್ ಕೆಲಸಕ್ಕೆ ಸಾಕಷ್ಟು ಸಿಬ್ಬಂದಿ ಇಲ್ಲವೆಂದು ಹೇಳಿದರು. ಈಗ 1644 ಜನ ಫೀಲ್ಡ್ ಅಸಿಸ್ಟೆಂಟ್ಸ್ ಕೆಲಸ ಮಾಡುತ್ತಿದ್ದಾರೆ. ಎಷ್ಟು ಸೆಂಟರ್‌ಗಳಿವೆ, ಎಷ್ಟು ಸೆಂಟರ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆಂಬುದನ್ನು ನಾನು ನೆನ್ನೆ ದಿವಸ ಹೇಳಿದೆ. ಈಗಿರತಕ್ಕಂಥ ಸಿಬ್ಬಂದಿ ಸಾಲದೆ ಹೋದರೆ, ಇದರಲ್ಲಿ ಶಿಕ್ಷಣ ಪಡೆದಂಥವರು 400 ಮಂದಿ ಇದ್ದಾರೆ. ಆದಕಾರಣ ಅವಶ್ಯಕತೆಯಿದ್ದರೆ ಇವರುಗಳನ್ನು ಸಹ ಉಪಯೋಗಿಸಿಕೊಂಡು, ಇನ್ನೂ ಹೆಚ್ಚಿನ ಸೆಂಟರ್‌ಗಳನ್ನು ತೆಗೆದು ಕೆಲಸ ಒದಗಿಸುವುದಕ್ಕೆ ನಾವು ಸಿದ್ಧವಾಗಿದ್ದೇವೆ ಹಲವು ಗ್ರಾಮಗಳಲ್ಲಿ ನೀರಿನ ಮಾರಾಟವಾಗುತ್ತಿದೆ ಎಂಬುದಾಗಿ ಇದೇ ಮಾನ್ಯ ಸದಸ್ಯರು ಹೇಳಿದರು. ಅಂತಹ ಗ್ರಾಮಗಳಲ್ಲಿ ಬೋರ್ ವೆಲ್ಸ್ ತೆಗೆಸಬೇಕೆಂದು ಜಿಲ್ಲಾಧಿಕಾರಿಯವರಿಗೆ ನಾನು ತಿಳಿಸಿದ್ದೇನೆ.

ಇನ್ನು ಮಾನ್ಯ ಬೆಳ್ಳಿಯಪ್ಪನವರು ಮಾತನಾಡುತ್ತಾ ಸಣ್ಣ ಸಣ್ಣ ಕೆರೆಗಳ ವಿಚಾರ ಹೇಳಿದರು. ಕೆರೆಗಳಲ್ಲಿ ಹೂಳು ತೆಗೆಸುವುದಕ್ಕೆ ಒದಗಿಸಿರುವ ಹಣ ಸಾಲದೆಂದು ಅವರು ಹೇಳಿದರು. ಮತ್ತು ಸೋಮವಾರಪೇಟೆ ಮತ್ತು ವಿರಾಜಪೇಟೆಯಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಎಂಬುದಾಗಿ ಹೇಳಿದರು. ಅದಕ್ಕೆ ನಾವು ವ್ಯವಸ್ಥೆ ಮಾಡಿದ್ದೇವೆ ಮತ್ತು ಹೆಚ್ಚು ಕೆಲಸವನ್ನು ತೆಗೆದುಕೊಳ್ಳುವುದಕ್ಕೂ ವ್ಯವಸ್ಥೆ ಮಾಡಿದ್ದೇವೆ.

ಇನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಇನ್ನೂ ಅನೇಕ ಮಾನ್ಯ ಸದಸ್ಯರು ಆಗಾಗ್ಗೆ ಅಭಾವ ಉಂಟಾಗತಕ್ಕಂಥ ಪ್ರದೇಶಗಳಲ್ಲಿ ಶಾಶ್ವತ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಕೊಳ್ಳುವುದು ಅವಶ್ಯಕವೆಂದು ಹೇಳಿದರು. ಅದು ಸರ್ಕಾರದ ದೃಷ್ಟಿಯಲ್ಲಿರಬೇಕಾದಂಥ ಸಲಹೆಯಾಗಿದೆ. ಇದಕ್ಕೆ ಅವರ ಉದಾಹರಣೆ ಕೊಡುತ್ತಾ- ಉತ್ತರಪಿನಾಕಿನಿಯಲ್ಲಿ ಮೇಲುಭಾಗದಲ್ಲಿ ನೀರು ಇಲ್ಲದಿದ್ದರೂ ಸಹ ಆಳದಲ್ಲಿ ನೀರು ಇರುತ್ತದೆ. ಆದಕಾರಣ ಅದರ ಅಕ್ಕಪಕ್ಕದಲ್ಲಿ ಬಾವಿಗಳನ್ನು ತೆಗೆಸಿ ಆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ಹೇಳಿದರು. ಅದೇ ರೀತಿ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳನ್ನು ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳನ್ನು ಕೈಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ಇಂತಹ ಯೋಜನೆಗಳನ್ನೆಲ್ಲಾ ಒಂದು ಸಿದ್ಧತೆ ಮಾಡಿಕೊಂಡು ಯಾವ ಯಾವ ಭಾಗಗಳಲ್ಲಿ ಏನೇನು ಕಾರ್ಯಗಳು ಮಾಡುವುದಕ್ಕೆ ಸಾಧ್ಯ ಎನ್ನುವುದಕ್ಕೆ ಒಂದು ಸಮಗ್ರವಾದ ಯೋಜನೆ ಹಾಕತಕ್ಕಂಥದ್ದು ಅಗತ್ಯ ಎಂದು ನಾನು ಭಾವಿಸುತ್ತೇನೆ. ನಾನು ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮತ್ತು ಮಂತ್ರಿಮಂಡಲದಲ್ಲಿ ಈ ವಿಷಯವನ್ನು ಪ್ರಸ್ತಾಪಮಾಡಿ ಎಲ್ಲೆಲ್ಲಿ ಏನೇನು ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ವಿಚಾರ ಮಾಡುತ್ತೇನೆ. ಇದಕ್ಕೆ ಒಂದು ವರ್ಷ ಆಗಬಹುದು, 5 ವರ್ಷವಾಗಬಹುದು ಅಥವಾ 10 ವರ್ಷವಾಗಬಹುದು. ಒಟ್ಟಿನಲ್ಲಿ ಈ ಯೋಜನೆಯನ್ನು ರೂಪಿಸಿ ಅದನ್ನು ಕಾರ್ಯಗತ ಮಾಡತಕ್ಕಂಥಾದ್ದು ಬಹಳ ಮುಖ್ಯವಾದುದು ಎನ್ನುವುದನ್ನು ನಾನು ಒಪ್ಪುತ್ತೇನೆ. ಇದರ ಬಗ್ಗೆ ಎಲ್ಲಾ ವಿವರಗಳನ್ನು ಸಂಗ್ರಹಿಸಿ ಈ ದಿಶೆಯಲ್ಲಿ ಯೋಚನೆ ಮಾಡುತ್ತೇನೆ ಎಂದು ನಾನು ಈ ಸಭೆಗೆ ಆಶ್ವಾಸನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಮತ್ತೆ ಕೆಲವು ಭಾಗಗಳಲ್ಲಿ ಲೆವಿ ವಸೂಲು ಮಾಡಕೂಡದು ಎನ್ನುವುದನ್ನು ದೃಷ್ಟಿಯಲ್ಲಿಟ್ಟು ಕೊಂಡೇ ಮಾನ್ಯ ಸದಸ್ಯರು ಸಲಹೆ ಕೊಟ್ಟರೇನೋ ಎನ್ನುವ ಶಂಕೆ ಉಂಟಾಗಿದೆ. ಕೆಲವು ಭಾಗಗಳಲ್ಲಿ ಬೆಳೆಯಾಗಿದೆ. 16 ಆಣೆ ಬೆಳೆಯಾಗದಿದ್ದರೂ 6 ಆಣೆ, 8 ಆಣೆ, 10 ಆಣೆ ಭಾಗ ಬೆಳೆಯಾಗಿದೆ ಆದುದರಿಂದ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಬೆಳೆಯಾಗಿದೆ ಎನ್ನುವುದನ್ನು ತಿಳಿದು ಅದಕ್ಕೆ ತಕ್ಕಂತೆ ಲೆವಿಯನ್ನು ವಸೂಲು ಮಾಡುವ ಕೆಲಸವನ್ನು ಮಾಡುತ್ತಾರೆ, ಇದಕ್ಕೆ ಹೊಸದಾಗಿ ಅಧಿಕಾರಿಗಳಿಗೆ ಹೇಳಬೇಕಾದುದಿಲ್ಲ. ಇದರ ಜೊತೆಗೆ ಕಂದಾಯ ನೀರಿನ ತೆರಿಗೆಯನ್ನು ವಜಾ ಮಾಡುವ ಬಗ್ಗೆ ಆ ಆಜ್ಞೆಯನ್ನೂ ಸರಿಸಿ ಕೆಲಸಮಾಡುತ್ತಾರೆ.

ಶ್ರೀ ಎಸ್. ವೈ. ಪಾಟೀಲ್ —ಕೋ-ಆಪರೇಟೀವ್ ಸೊಸೈಟಿಗಳು ಬಹಳ ಜೋರಿನಿಂದ ಸಾಲವನ್ನು ವಸೂಲು ಮಾಡುತ್ತಾ ಇದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೋ-ಆಪರೇಟೀವ್ ಸೊಸೈಟಿಗಳು ಕೂಡ ಹಣದ ಬಾಕಿಯನ್ನು ವಸೂಲು ಮಾಡಕೂಡದು ಎಂದು ಆಜ್ಞೆ ಹೊರಟಿದೆ. ಇಂಡಿ, ಸಿಂಧಗಿಯನ್ನು ನಿನ್ನೆ ಮೊನ್ನೆ ನಮ್ಮ ಪಟ್ಟಿಯಲ್ಲಿ ತೆಗೆದುಕೊಂಡಿರುವುದು.

ಶ್ರೀ ಬಾಪೂಗೌಡ —ಗುಲ್ಬರ್ಗ ಜಿಲ್ಲೆಯಲ್ಲಿ ಮೊನ್ನೆತಾನೆ ಮಳೆ ಬಂದಿದೆ. ವಸೂಲ ಮಾತ್ರ ಜೋರಾಗಿ ನಡೆದಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಯಾವ ಭಾಗದಲ್ಲಿ ವಸೂಲು ಮಾಡಬೇಕು, ಯಾವ ಭಾಗದಲ್ಲಿ ವಸೂಲು ಮಾಡಬಾರದು ಎನ್ನುವ ವಿವೇಚನೆ ಸರ್ಕಾರಕ್ಕೆ ಇದೆ. ಇದರ ಬಗ್ಗೆ ಪಟ್ಟಿ ಇದೆ ಅದನ್ನು ಇಟ್ಟುಕೊಂಡು ಕೆಲಸ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ.—ಕೆಲವರಿಗೆ ಬಾಕಿ ಕೊಡುವುದಕ್ಕೆ ಚೈತನ್ಯವಿದೆ. ಅವರೂ ಕೂಡ ಈ ಅವಕಾಶವನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಆದುದರಿಂದ ಅವರ ಹತ್ತಿರ ಮುಲಾಜಿಲ್ಲದೆ ದಯವಿಟ್ಟು ವಸೂಲಿ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಆ ಸಲಹೆಯನ್ನು ನಾನು ಸಂಪೂರ್ಣವಾಗಿ ಅಂಗೀಕರಿಸುತ್ತೇನೆ. ಮಾನ್ಯ ಬೈರೇಗೌಡರಿಗೆ ಗೊತ್ತು ಈ ಸಂದರ್ಭದಲ್ಲಿ ಕೊಡುವುದಕ್ಕೆ ಶಕ್ತಿ ಇರುವವರೂ ಕೂಡ ವಸೂಲಿಯನ್ನು ಮುಂದಕ್ಕೆ ಹಾಕಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಸಲಹೆ ಮಾಡುತ್ತಿದ್ದಾರೆ ಎಂದು ಅನ್ನಿಸುತ್ತದೆ. ಅದನ್ನೂ ಕೂಡ ನಾನು

ದೃಷ್ಟಿಯಲ್ಲಿಟ್ಟುಕೊಳ್ಳುತ್ತಿದ್ದೇನೆ. ಮಾನ್ಯ ಸದಸ್ಯರಾದ ಮಾರ್ಗದ ಮಲ್ಲಪ್ಪನವರು ನಮ್ಮ ತಾಲ್ಲೂಕಿನಲ್ಲ ಬೋರ್‌ವೆಲ್ ತೆಗೆದಿಲ್ಲ, ಕೆಲಸ ಆಗಿಲ್ಲ ಎಂದು ಹೇಳಿದರು. ಅಲ್ಲೂ ಕೂಡ ಭಾಕಿ ಇರತಕ್ಕ ಕೆಲಸಗಳನ್ನು ತೊಡುವುದಕ್ಕೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ; ಆ ಕೆಲಸಗಳನ್ನೂ ಕೂಡ ಪೂರೈಸುತ್ತೇನೆ.

ಮತ್ತೆ ಮಾನ್ಯ ಸದಸ್ಯರೊಬ್ಬರು ದನಗಳ ಮೇವಿಗೆ ಈಚಲ ಗರಿಯನ್ನು ಉಪಯೋಗಿಸಿ ಕೊಳ್ಳುವುದಕ್ಕೆ ಅವಕಾಶಕೊಡಿ ಎಂದು ಹೇಳಿದರು. ಈಚಲ ಗರಿಯಲ್ಲಿ ಮುಳ್ಳು ಇಲ್ಲದ ಹಾಗೆ ಮಾಡಿ ಮೇಹಿಸಬಹುದು. ಅದಕ್ಕೆ ಅವಕಾಶ ಕೊಟ್ಟರೆ ಈಚಲ ಮರದಲ್ಲಿ ಒಂದು ಗರಿಯೂ ಇಲ್ಲದ ಹಾಗೆ ಕೊಯಿದುಬಿಟ್ಟು ಈಚಲ ಮರ ಹೋಗುವ ಸಾಧ್ಯತೆ ಇದೆ. ಈಚಲಗರಿ ಕಡ್ಡಿಯಿಂದ ಮಕ್ರಿ ಹೆಣೆಯುವುದಕ್ಕೆ ಸಹಾಯವಾಗುತ್ತದೆ. ಈ ಸಂದರ್ಭದಲ್ಲಿ ಆ ಕೆಲಸವನ್ನು ಶುರು ಮಾಡಿದರೆ ಸಂಪೂರ್ಣವಾಗಿ ಈಚಲ ಮರದ ಸಂಪತ್ತು ಹೋಗುತ್ತದೆ. ಅದುದರಿಂದ ಅದನ್ನು ಆಲೋಚನೆ ಮಾಡಿ ತಿಳಿಸಬೇಕಾಗುತ್ತದೆ. ಮಾನ್ಯ ಹನುಮೇಗೌಡರು ಮತ್ತು ಇನ್ನೊಬ್ಬ ಸದಸ್ಯರು ರಾಯಲ್ ಸೀಮಾದಲ್ಲಿ ಮಹಾರಾಷ್ಟ್ರದಲ್ಲಿ ಬಾವಿಗಳನ್ನು ತೆಗೆಸುವುದಕ್ಕೆ ಕಾರ್ಪೊರೇಷನ್ ಮಾಡಿರುವ ಹಾಗೆ ನಮ್ಮಲ್ಲೂ ಮಾಡುವುದಕ್ಕೆ ಏಕೆ ಆಲೋಚನೆ ಮಾಡಬಾರದು ಎಂದು ಹೇಳಿದ್ದಾರೆ. ಅಲ್ಲ ಯಾವ ರೀತಿ ಮಾಡಿದ್ದಾರೆ ಎನ್ನುವ ವಿವರವನ್ನು ತಿಳಿದುಕೊಳ್ಳಬೇಕು ಎಂದು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದನ್ನು ಯಾವ ರೀತಿ ಮಾಡಬೇಕು ಎನ್ನುವುದನ್ನು ತಿಳಿದು ಸೂಕ್ತ ಕಂಡುಬಂದಲ್ಲಿ ಆ ಕಾರ್ಯಕ್ರಮವನ್ನೂ ಕೈಗೊಳ್ಳುತ್ತೇವೆ. ಮೊದಲನಿಂದಲೂ ಅಂದರೆ ರೆಪ್ರಸೆಂಟೇಟೀವ್ ಅಸೆಂಬ್ಲಿ ಇದ್ದಾಗಿನಿಂದಲೂ ಈ ಸಲಹೆಯನ್ನು ಮಾಡುತ್ತಾ ಇದ್ದರು.

ಅದು ಆಗಿಲ್ಲ. ಅದರ ಉದ್ದೇಶ ಏನೆಂದರೆ, ಬೇರೆ ವಿಧಾನದಲ್ಲಿ ಮಾಡುವುದಕ್ಕೆ ಸಾಧ್ಯವಾದರೆ ಈ ಬೋರ್ಡಿನ ಅವಶ್ಯಕತೆ ಇಲ್ಲ ಎಂದು ಬಿಟ್ಟಿರಬಹುದು ಮಾನ್ಯ ಕೆ. ಎಚ್. ಪಾಟೀಲರು ಅಫಾರ್‌ಸ್ಟೇಷನ್ ವರ್ಕ್ ಪೂರಾ ನಿಂತುಹೋಗಿದೆ ಎಂದು ಹೇಳಿದರು. ಅಫಾರ್‌ಸ್ಟೇಷನ್ ವರ್ಕ್ ನಿಂತು ಹೋಗಿಲ್ಲ. ಅಲ್ಲಿ ನಡೆದಿರತಕ್ಕ ಕೆಲಸ ಎಷ್ಟರಮಟ್ಟಿಗೆ ಆಗಿದೆ ಎಂದು ಹೇಳಿದರೆ, ೩೦ ಸಾವಿರ ಹೆಕ್ಟೇರಿನಲ್ಲಿ ಅಫಾರ್‌ಸ್ಟೇಷನ್ ವರ್ಕ್ ನಡೆದಿದೆ, 1000 ಹೆಕ್ಟೇರಿನಲ್ಲಿ ಕ್ಯಾಷ್ಯೂ ಹಾಕಿದ್ದಾರೆ 400. ಹೆಕ್ಟೇರಿನಲ್ಲಿ ಟೀಕ್, 400. ಹೆಕ್ಟೇರಿನಲ್ಲಿ ಸಾಫ್ಟ್‌ವುಡ್, 5000 ಹೆಕ್ಟೇರಿನಲ್ಲಿ ಯೂಕಲಿಪ್ಟಿಸ್ 16000 ಹೆಕ್ಟೇರಿನಲ್ಲಿ ಮಿಸ್ಲೇನಿಯಸ್ ಫ್ಯೂಯಲ್ ಪ್ಲಾಂಟೇಷನ್ ಹಾಕಲಾಗಿವೆ. ಇಷ್ಟು ಅಫಾರ್‌ಸ್ಟೇಷನ್ ತೆಗೆದುಕೊಂಡು ಕೆಲಸ ನಡೆದಿದೆ. ಇದಕ್ಕಾಗಿ 167.31 ಲಕ್ಷ ಖರ್ಚಾಗಿದೆ. ಅಕ್ಟೋಬರ್ ತಿಂಗಳಲ್ಲಿ 29140 ಜನ ಅಫಾರ್‌ಸ್ಟೇಷನ್ ವರ್ಕ್‌ನಲ್ಲಿ ಕೆಲಸಮಾಡುತ್ತಾ ಇದ್ದಾರೆ. ಆದುದರಿಂದ ಅಫಾರ್‌ಸ್ಟೇಷನ್ ವರ್ಕ್ ನಿಂತು ಹೋಗಿದೆ ಎಂದು ಹೇಳುವಹಾಗಿಲ್ಲ.

ಮತ್ತೆ ವಿದ್ಯುಚ್ಛಕ್ತಿ ಸರಬರಾಜಿನ ವಿಷಯದಲ್ಲಿ ಮಾನ್ಯ ಸದಸ್ಯರು ಕೆಲವರು ಸಲಹೆ ಕೊಟ್ಟರು ಕಳೆದ 2 ವರ್ಷಗಳಿಂದ ಕೇವಲ ಕಂಭಗಳು ನಿಂತಿವೆ ಎಂದು ಹೇಳಿದರು. ಕಂಭ ಹಾಕಿದೆ. ಮೊದಲನೇ ಹಂತದ ಕೆಲಸಕ್ಕೆ ಬೇಕಾದ ತಂತಿ ಡೆಲ್ಲಿಗೆ ಹೋಗಿ ಬರಬೇಕಾಗಿದೆ. ಅಲ್ಲದೆ ಈಗ ಅಭಾವ ಪೀಡಿತ ಪ್ರದೇಶಗಳಿಗೆ ಆದ್ಯತೆ ಕೊಟ್ಟು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಬೇಕು ಎಂದು ತಿಳಿಸಿದ್ದೇವೆ.

ಈಗ ನನ್ನ ಹತ್ತಿರ 82 ತಾಲ್ಲೂಕುಗಳ ಪಟ್ಟಿಮಾತ್ರ ಇದೆ. ಉಳಿದ ತಾಲ್ಲೂಕುಗಳ ಪಟ್ಟಿಯನ್ನು ನಾನು ತಿಳಿದು ಹೇಳುತ್ತೇನೆ ಅವುಗಳಲ್ಲಿ ರಿಜಿಸ್ಟರ್ ಆದ ಅರ್ಜಿಗಳು 9849. ಅದರಲ್ಲಿ ಫಾರ್ಮಾಲಿಟೀಸ್ ಕಂಪ್ಲೈ ಮಾಡಿ ಸೆಪ್ಟೆಂಬರ್‌ವರೆಗೆ 3894 ಅರ್ಜಿಗಳು ಸಿದ್ಧವಾಗಿವೆ. ಅವುಗಳ ಪೈಕಿ ಸೆಪ್ಟೆಂಬರ್ ಒಂದರಲ್ಲಿ 584 ಬಾವಿಗಳಿಗೆ ಈಗ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದೇವೆ ಇನ್ನೂ 130ಕ್ಕೆ ಕೊಡಬೇಕು. ಆ ಬಾವಿಗಳಲ್ಲಿ ನೀರು ಈಗ ಯಥೇಚ್ಛವಾಗಿ ಇದೆ. ಉಳಿದ ಬಾವಿಗಳಿಗೆ ತಿಂಗಳೊಂದಕ್ಕೆ ಒಂದು ಸಾವಿರ ಬಾವಿಗಳಂತೆ ಬೇಗ ಬೇಗ ಕೆಲಸಕಾರ್ಯಗಳನ್ನು ಪೂರೈಸಬೇಕೆಂದು ತಿಳುವಳಿಕೆಯನ್ನು ಕೊಟ್ಟಿದ್ದೇವೆ. ಅವುಗಳ ಬಗ್ಗೆ ಅನೇಕ ಕೆಲಸಗಳನ್ನು ಈಗಾಗಲೇ ಮಾಡಿಸುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ — ಸುಮಾರು ಎರಡು ವರ್ಷಗಳಿಂದಲೂ ನಮ್ಮ ಕೋಲಾರ ಜಿಲ್ಲೆ ಹೆಚ್ಚು ಕ್ಷಾಮ ಪರಿಸ್ಥಿತಿಯಲ್ಲಿಯೇ ಇದೆ. ನಮ್ಮ ಜಿಲ್ಲೆಯಲ್ಲಿ ಯಾವ ಒಂದು ಕೆಲಸವೂ ಸರಿಯಾಗಿ ಆಗಿಲ್ಲ. ಈ ವಿಚಾರವನ್ನು ನಾನು ಅನೇಕ ಸಾರಿ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೂ ಸಹ ತಂದಿದ್ದೇನೆ,

1-00 P. M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಿಗೆ ಗೊತ್ತು. ಹೆಚ್ಚು ಅಭಾವ ಜಿಲ್ಲೆಯೆಂದು ಇನ್ನೂ ಕೋಲಾರ ಜಿಲ್ಲೆಯನ್ನು ಪಟ್ಟಿಯಲ್ಲಿ ಸೇರಿಸಿಲ್ಲ. ಆ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಮಾತ್ರ ಅಭಾವಸ್ಥಿತಿ ಇರುತ್ತದೆ.

ಶ್ರೀ ಸಿ ಬೈರೇಗೌಡ.— ಇನ್ನು ಕೆಲವು ತಾಲ್ಲೂಕುಗಳ ಪಟ್ಟಿ ಇದೆಯೆಂದು ಹೇಳಿದಿರಿ ಅವುಗಳಲ್ಲಿ ಯಾದರೂ ನಮ್ಮ ತಾಲ್ಲೂಕು ಸೇರಿದೆಯೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಒಟ್ಟು ತಾಲ್ಲೂಕುಗಳಲ್ಲಿ ಎಷ್ಟು ಆ ರೀತಿಯಾಗಿ ಸೇರಿವೆ ಯೆಂಬುದನ್ನು ನಾನು ತಿಳಿದು ಹೇಳಬೇಕಾಗುತ್ತದೆ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ತಿಳವಳಿಕೆ ಕೊಡುತ್ತೇನೆ. ನನಗೆ ತಿಳಿದಿರುವ ಪ್ರಕಾರ ಕೆಲವು ಕೆರೆಗಳಿಗೆ ಟೆಕ್ನಿಕಲ್ ಫೀಜಿಬಿಲಿಟಿ ಇಲ್ಲ. ಮೈನರ್ ವರ್ಕ್ಸ್‌ನಲ್ಲಿ ಸಣ್ಣ ಸಣ್ಣ ಕೆರೆಗಳ ರಿಪೇರಿಗಳನ್ನು ತೆಗೆದುಕೊಳ್ಳುತ್ತಾ ಇಲ್ಲ. ಇದರ ಬಗ್ಗೆ ಈಗಾಗಲೇ ಆಲೋಚನೆ ಮಾಡಿದ್ದೇವೆ ಇವತ್ತು ಸ್ವಲ್ಪ ಮಟ್ಟಿಗೆ ತೊಂದರೆ ಇರಬಹುದು. ಅಭಾವ ಪ್ರದೇಶಗಳಿಗೆ ಸಣ್ಣ ಸಣ್ಣ ನೀರಾವರಿ ಯೋಜನೆಯ ಕಾಮಗಾರಿಗಳ ಕೆಲಸಗಳನ್ನು ಒದಗಿಸುವುದು ಒಂದು ಸಾಧನ. ಅಂತಹ ಪ್ರದೇಶಗಳಲ್ಲಿ ಸಾಯಿಲ್ ಕನ್‌ಸರ್‌ವೇಷನ್ ಎಷ್ಟು ಮುಖ್ಯವೋ ಅದರಂತೆ ಸಣ್ಣ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳುವುದು ಸಹ ಮುಖ್ಯ ಸಾಧನ. ಎಷ್ಟು ಎಕರೆಗಳಲ್ಲಿ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅಷ್ಟನ್ನು ಮಾಡುತ್ತೇವೆ, ಅದಕ್ಕೆ ಹೆಚ್ಚು ಹಣ ಖರ್ಚುಮಾಡಿ ಎಷ್ಟು ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೋ ಅಷ್ಟು ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ತಜ್ಞರ ಸಲಹೆಯನ್ನು ಸಹ ಪಡೆಯಬೇಕೆಂದು ಈಗಾಗಲೇ ತಿಳಿಸಿದ್ದೇವೆ. ನಿನ್ನೆದಿನ ಈ ವಿಚಾರದಲ್ಲಿ ಚೀಫ್ ಇಂಜಿನಿಯರ್ ಜೊತೆಯಲ್ಲಿ ಮಾತನಾಡಿದ್ದೇನೆ. ಅವರು ಆ ಬಗ್ಗೆ ಸಲಹೆಗಳನ್ನು ಕೊಡುತ್ತೇನೆಂದು ಹೇಳಿದ್ದಾರೆ. ಕೆಲವು ಕಡೆಗಳಲ್ಲಿ ಟೆಕ್ನಿಕಲ್ ಫೀಜಿಬಿಲಿಟಿ ಇಲ್ಲವೆಂದು ಹೇಳಿದ್ದಾರೆ. ಅಂತಹ ಕಡೆಗೆ ಹೆಚ್ಚಿನ ಗಮನವನ್ನು ತೆಗೆದುಕೊಳ್ಳಬೇಕಾಗುತ್ತದೆ. ನನಗೆ ಗೊತ್ತಿರುವ ಹಾಗೆ ಅಂಜನಾಪುರ ಕೆರೆಯ ಕೆಳಗೆ ಇರತಕ್ಕ ಜಮೀನಿನ ಬೆಳೆಯನ್ನು ಉಳಿಸುವುದಕ್ಕೆ ಪ್ರಯತ್ನಮಾಡಬೇಕೆಂದು ನಾನು ಈಗಾಗಲೇ ಸೂಪರಿಂಟೆಂಡಿಂಗ್ ಇಂಜಿನಿಯರ್ ಜೊತೆಯಲ್ಲಿ ಆಲೋಚನೆಮಾಡಿ ಅನೇಕ ಪಂಪಸೆಟ್ಟುಗಳನ್ನು ಒದಗಿಸಿ ಬೆಳೆಯನ್ನು ಉಳಿಸುವುದಕ್ಕೆ ಪ್ರಯತ್ನಮಾಡಿದರೂ ಅಲ್ಲಿ ಎಷ್ಟು ಕೆಲಸವಾಗಬೇಕೋ ಅಷ್ಟು ಕೆಲಸವಾಗಿಲ್ಲ. ನಾನೇ ಅಲ್ಲಿ ಹೋಗಿ ತಿಳಿಸಿ ಬಂದಿದ್ದೇನೆ. ಅದರಂತೆ ಅಲ್ಲಿ ಏನಾಗಿದೆ ಎಂಬುದನ್ನು ತಿಳಿದು ನಾನು ಹೇಳಬೇಕಾಗುತ್ತದೆ.

ಇನ್ನು ಕೆಲವು ಮಾನ್ಯ ಸದಸ್ಯರು ಲೇಬರ್ ಕೊ ಆಪರೇಟಿವ್ ಸೊಸೈಟಿಯ ಮೂಲಕ ಏಕೆ ಕೆಲಸಗಳನ್ನು ತೆಗೆದುಕೊಳ್ಳಬಾರದೆಂದು ಹೇಳಿದರು. ಯಾವ್ಯಾವ ಸೊಸೈಟಿಗಳು ಎಷ್ಟರ ಮಟ್ಟಿಗೆ ಕೆಲಸಮಾಡುವುದಕ್ಕೆ ಸಾಧ್ಯವೆಂಬುದನ್ನು ನೋಡಬೇಕು. ಎಲ್ಲೋ ಒಂದೆರಡು ಸೊಸೈಟಿಗಳು ಆ ರೀತಿ ಇರಬಹುದು. ಆದರೆ ಲೋಕೋಪಯೋಗಿ ಇಲಾಖೆಯ ಮುಖಾಂತರ ಕೆಲಸಗಳನ್ನು ಮಾಡಿಸುವುದು ಅಪರಾಧವೆ ? ಯಾವ ಒಂದು ಅಪಾಯವಿಲ್ಲದೇ ಇರುವ ಮಾರ್ಗ ಅದು. ಆ ಒಂದು ಮಾರ್ಗದಲ್ಲಿ ಈ ಎಲ್ಲಾ ಕೆಲಸಗಳನ್ನು ಮಾಡುವುದು ಸೂಕ್ತವೆಂದು ನನ್ನ ನಿರ್ದಿಷ್ಟ ಅಭಿಪ್ರಾಯ.

ಇನ್ನು ಮಾನ್ಯ ಶ್ರೀ ದೇಸಾಯಿ ಅವರು ಅಥಣಿ ತಾಲ್ಲೂಕು ವಿಷಯವಾಗಿ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಆ ತಾಲ್ಲೂಕಿನಲ್ಲಿರುವ ಕೆಲವಾರು ಬ್ರಿಡ್ಜ್‌ಗಳನ್ನು ಎತ್ತರ ಮಾಡಿದರೆ ಇನ್ನು ಕೆಲವಾರು ಊರುಗಳಿಗೆ ಅಲ್ಲ ನಿಂತ ನೀರು ಸಿಗುತ್ತದೆಂದು ಹೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ತಜ್ಞರ ಜೊತೆಯಲ್ಲಿ ಆಲೋಚನೆಮಾಡಿ ಆ ಕಾರ್ಯಕ್ರಮವನ್ನು ಆದಷ್ಟು ಜಾಗ್ರತೆಯಾಗಿ ತೆಗೆದುಕೊಳ್ಳುತ್ತೇವೆ. ಅಂತೂ ಮಾನ್ಯ ಸದಸ್ಯರೆಲ್ಲರೂ ಕೊಟ್ಟಿರುವ ಸಲಹೆಗಳಿಗೆಲ್ಲಾ ಸಾಧ್ಯವಾದಷ್ಟು

ಮಾತಿಗೆ ಉತ್ತರ ಕೊಟ್ಟಿದ್ದೇನೆ ಮಾನ್ಯ ಸದಸ್ಯರೆಲ್ಲರಿಗೂ ನಾನು ಮತ್ತೊಮ್ಮೆ ಒಂದು ವಿಚಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ತಂತಮ್ಮ ಕ್ಷೇತ್ರದಲ್ಲಿ ಎಲ್ಲೆಲ್ಲಿ ಏನೇನು ತೊಂದರೆಗಳಿವೆಯೋ, ಏನೇನು ಕೆಲಸ ಮಾಡಬಹುದು, ಯಾವ್ಯಾವುದನು ಮಾಡುವುದರಿಂದ ಅಲ್ಲಿನ ಜನರಿಗೆ ಹೆಚ್ಚಿಗೆ ಸಹಾಯವಾಗುತ್ತದೆ, ಹೆಚ್ಚು ಉದ್ಯೋಗಗಳು ಸಿಗುತ್ತವೆ, ಹಣ ದುರುಪಯೋಗವಾಗುವುದನ್ನು ತಪ್ಪಿಸಬಹುದು ಇಂತಹ ಸಲಹೆಗಳನ್ನು ಆಗಿಂದಾಗ್ಗೆ ಅವರ ಗಮನಕ್ಕೆ ಬಂದಾಗ್ಗೆ ನನಗೆ ತಿಳಿಸಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ರಾಣಿಬೆನ್ನೂರ್ ತಾಲ್ಲೂಕಿನಲ್ಲಿ ಒಂದು ಕೆರೆ ಕೆಲಸವಾಗುವುದಕ್ಕೆ 1250 ಜನರು ಹಿಂದೆ ಕೆಲಸಮಾಡುತ್ತಿದ್ದರು. ಅವರು ಪಟ್ಟಿ ಕಾಮಗಾರಿ ಮಾಡುವಾಗ ಅವರಿಗೆ ಕೊಟ್ಟಿರತಕ್ಕ ಹಣಕ್ಕೂ, ಎಲ್ಲೋ ಒಂದು ಘನ ಅಡಿ ಮಣ್ಣನ್ನು ಎತ್ತಿ ಹಾಕಿದರೆ ಕೊಡತಕ್ಕ ಕೇವಲ 8 ರೂಪಾಯಿಗಳನ್ನು ಈಗ ಕೊಡುವುದಕ್ಕೂ ವ್ಯತ್ಯಾಸವಿದೆ ಮೊದಲು ಆ ಕೆಲಸಕ್ಕೆ 11 ರೂಪಾಯಿಗಳನ್ನು ಪೀಸ್ ವರ್ಕ್‌ನಲ್ಲಿ ಕೊಡುತ್ತಿದ್ದರು, ವ್ಯತ್ಯಾಸ ಮೂರು ರೂಪಾಯಿಗಳು ಎಂಬುದಾಗಿ ಕೇಳಿದಾಗ ಕೆಲವಾರು ವಿವರಣೆಗಳನ್ನು ಕೊಟ್ಟರು. ಇನ್‌ಕಂಟ್ಯಾಕ್ಸ್ ಮತ್ತು ರಾಯಲ್ಟಿ ಸೇರಿ ಒಟ್ಟು ಸೇಕಡಾ 7½ಯಷ್ಟು ವೇಸ್ಟೇಜ್ ಆಗುತ್ತಿದೆ. ಇನ್ನು ಕೆಲವು ಕಡೆಗಳಲ್ಲಿ ಕೇವಲ 0-78 ಪೈಸೆ ಕೂಲಿ ಕೊಡುತ್ತಿದ್ದರು. ಅದನ್ನು ಈಗ ರೂ. 2.22 ಪೈಸೆಗೆ ಏರಿಸಿದ್ದಾರೆ. ಅದರಿಂದಲಾದರೂ ಜನ ಉಳಿಯುವ ಪರಿಸ್ಥಿತಿ ಇದೆ. ಆದರೂ ಮಾರ್ಜಿನ್ ಬಹಳ ಜಾಸ್ತಿ ಇರುವುದರಿಂದ ಆ ರೀತಿ ಅನ್ಯಾಯ ಮಾಡಬಾರದೆಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ, ಸರಿಯಾದ ಲೆಕ್ಕವನ್ನು ತೆಗೆದುಕೊಂಡು ಮಾಡಬೇಕೆಂದು ನಮ್ಮ ಇಂಜಿನಿಯರುಗಳಿಗೆ ನಾವು ತಿಳಿಸಿದ್ದೇವೆ. ಇನ್ನೊಂದು ಮಾತು ಸಾಯಿಲ್ ಕನ್‌ಸರ್‌ವೇಷನ್ನಿನಲ್ಲಿ ಈಗ ಸಿಗತಕ್ಕ ಕೂಲಿ ಬಹಳ ಕಡಿಮೆ ಎಂಬುದಾಗಿ ಅನೇಕ ಜನ ಸದಸ್ಯರು ಕೆಲವಾರು ಸ್ಥಳಗಳಲ್ಲಿ ಆದರಿಂದಾಗುತ್ತಿರುವ ತೊಂದರೆಗಳನ್ನು ನೋಡಿ ಹೇಳಿದ್ದಾರೆ ಈಗ ಅವರಿಗೆ ಎಷ್ಟು ಸಿಗುತ್ತದೋ ಅದರಿಂದ ಅವರಿಗೆ ಏನೂ ಸಾಕಾಗುವುದಿಲ್ಲ, ಜೀವನಕ್ಕೆ ಬಹಳ ತೊಂದರೆಯಾಗಿದೆಯೆಂದು ಕೆಲವರು ಹೇಳಿದರು. ನಾವು ಅದನ್ನು ಗಮನದಲ್ಲಿಟ್ಟುಕೊಂಡು ನಾನು ಅಲ್ಲಿಂದ ಬಂದಕೂಡಲೇ ಇರತಕ್ಕ ಕೂಲಿದರಗಳನ್ನು ವಿಚಾರಮಾಡಿದ್ದೇನೆ. ಬ್ಲಾಕ್ ಸಾಯಿಲ್‌ಗೆ 100 ಘನ ಅಡಿ ಮಣ್ಣನ್ನು ತೆಗೆದರೆ 2.75 ಪೈಸೆ ಕೊಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಮೂರು ರೂಪಾಯಿಗಳು ಇದೆ ಇನ್ನು ಕೆಲವು ಕಡೆಗಳಲ್ಲಿ 3.25 ಇದೆ. ಕೆಂಪು ಮಣ್ಣನ್ನು ತೆಗೆದರೆ ಕೂಲಿ 3-25 ಅಥವಾ 3-50 ರೂಪಾಯಿಗಳಿವೆ. ಆದ್ದರಿಂದ ಈ ರೀತಿ ವ್ಯತ್ಯಾಸವಿರುವುದರಿಂದ ಎಲ್ಲಾ ಕಡೆಯೂ 0 50 ಪೈಸೆಯಂತೆ ಹೆಚ್ಚಿಗೆ ಸಬ್ಸಿಡಿ ರೂಪದಲ್ಲಿ ಕೊಡಬೇಕೆಂದು ನಾನು ಹೇಳುತ್ತೇನೆ 100 ಘನ ಅಡಿ ಮಣ್ಣನ್ನು ತೆಗೆಯುವುದಕ್ಕೆ ಆ ರೀತಿಯಾಗಿ ಕೊಡತಕ್ಕದ್ದೆಂದು ಹೇಳಿದ್ದೇವೆ ಅದು ಕೂಡಲೇ ಜಾರಿಗೆ ಬರುತ್ತದೆ. ಇನ್ನು ಕೆಲವು ಪ್ರದೇಶಗಳನ್ನು 100 ಘನ ಅಡಿ ಮಣ್ಣನ್ನು ತೆಗೆದುಹಾಕಿದರೆ ಕೂಲಿಗೆ ಬದಲಾಗಿ ಗೋಧಿ, ಜೋಳ ಕೊಡುವುದೂ ಉಂಟು. ಕೂಲಿಗೆ ಬದಲಾಗಿ ಕಡಿಮೆದರದಲ್ಲಿ ತೆಂಗಿನಕಾಯಿಗಳನ್ನು ಒದಗಿಸಿ ಕೊಡುತ್ತಾರೆ. ಅಥವಾ 0-78 ಪೈಸೆಗಳನ್ನು ಕೊಡುತ್ತಾರೆ. ಆದ್ದರಿಂದ ಕೂಲಿ ದರದಲ್ಲಿ ಹೊರಗಿನ ಧಾರಣೆಗೂ ಒದಗಿಸುವ ಪದಾರ್ಥಗಳನ್ನು ಹೋಲಿಸಿ ನೋಡಿದರೆ 0-78 ಪೈಸೆ ಉಳಿತಾಯವಾಗುತ್ತದೆ. ಒಟ್ಟು ಅವನಿಗೆ ನಾವು ಹೆಚ್ಚುವರಿ ಕೊಡುವ 0-50 ಪೈಸೆ ಸೇರಿ ಇದರ ಲಾಭ ನಾಲ್ಕು ರೂಪಾಯಿಗಳಿಗಿಂತ ಹೆಚ್ಚು ಸಿಗುವ ವ್ಯವಸ್ಥೆ ಯಾಗುತ್ತದೆ. ಈ ರೀತಿಯಾಗಿ ಸಾಯಿಲ್ ಕನ್‌ಸರ್‌ವೇಷನ್‌ನಲ್ಲಿ ಕೆಲಸ ಮಾಡತಕ್ಕ ಕೆಲಸಗಾರರಿಗೆ ಹೆಚ್ಚು ಹಣ ಸಿಗುವ ವ್ಯವಸ್ಥೆ ಮಾಡಿದ್ದೇವೆ. ನಿನ್ನೆದಿನ ನಾನು ಮಾನ್ಯ ಅರ್ಥಸಚಿವರಲ್ಲಿ ಮಾತನಾಡಿದ್ದೇನೆ. ಆದರೂ ಸಹ ಅದಕ್ಕೆ ಒಪ್ಪಿಗೆಯನ್ನು ಸಹ ಕೊಟ್ಟಿದ್ದಾರೆ. ಮುಂದೆ ಎಷ್ಟು ಜನರು ಕೆಲಸಕ್ಕೆ ಬಂದರೂ ಅಷ್ಟು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳ ಬೇಕೆಂದೂ ಎಲ್ಲಾ ಕಡೆಗಳಲ್ಲಿಯೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಜನಗಳಿಗೆ ಆಹಾರ ವಿತರಣೆ ವ್ಯವಸ್ಥೆಯನ್ನು ಮತ್ತು ದನಗಳಿಗೆ ಸಾಕಷ್ಟು ಮೇವನ್ನು ಈಗಾಗಲೇ ಎಲ್ಲಾ ಕಡೆಗಳಲ್ಲಿಯೂ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇವೆ.

ಆಹಾರದ ಕೊರತೆ ಜಾನುವಾರುಗಳಿಗೆ ಮೇವು ಸಾಧ್ಯವಾದಷ್ಟುಮಟ್ಟಿಗೆ ಸಹಾಯ ಮಾಡಿ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಜನರಿಗೆ ನೆಮ್ಮದಿಯನ್ನು ಉಂಟುಮಾಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆಂದು ಈ ಸಭೆಗೆ ಆಶ್ವಾಸನೆ ಕೊಟ್ಟು ಮಾನ್ಯ ಸದಸ್ಯರೆಲ್ಲರೂ ಕೊಟ್ಟಿರುವ ಸಲಹೆ

ಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸಾಧ್ಯವಾದಷ್ಟು ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿ ಮಾನ್ಯ ಸದಸ್ಯರೆಲ್ಲರಿಗೂ ಮತು . ಸಭಾಧ್ಯಕ್ಷರಿಗೂ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎಸ್. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ರೆವಿನ್ಯೂ ಸಚಿವರನ್ನು ಒಂದು ಪ್ರಶ್ನೆಯನ್ನು ಕೇಳಲು ಅವಕಾಶಬೇಕು ?

ಉಪಾಧ್ಯಕ್ಷರು —ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಸ್. ವೈ. ಪಾಟೀಲ್.—ನಿಮ್ಮ ಮಾತನ್ನು ಮನ್ನಿಸುತ್ತೇನೆ. ಆದರೆ ನನಗೆ ಸ್ವಲ್ಪ ಮಾತನಾಡಲು ಪರವಾನಗಿ ಕೊಟ್ಟರೆ ಒಂದು ಪ್ರಶ್ನೆ ಕೇಳಬೇಕು ! ತಾವು ನನಗೆ ಅವಕಾಶ ಕೊಡುವುದಿಲ್ಲವೆಂದರೆ ನಮ್ಮ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ.

ಉಪಾಧ್ಯಕ್ಷರು —ದಯಮಾಡಿ ಮಾನ್ಯಸದಸ್ಯರು ಕುಳಿತುಗೊಳ್ಳಬೇಕು.

ಶ್ರೀ ಎಸ್. ವೈ. ಪಾಟೀಲ್.—ನನಗೆ ಮಾತನಾಡಲು ಅವಕಾಶ ಕೊಡದೆ ಹೋದರೆ ಇನ್ನು ಏತಕ್ಕೆ ಇಲ್ಲಿ ಕೂಡಬೇಕು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ ಶ್ರೀಮಾನ್ ಪಾಟೀಲ್‌ರವರು ಅವರ ಕ್ಷೇತ್ರದಲ್ಲಿ ಒಂದು ದೊಡ್ಡ ಹಳ್ಳವೆಂದು ಇದೆ ಅದನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದರು...

ಶ್ರೀ ಎಸ್. ವೈ ಪಾಟೀಲ್.—ಅದು ನಾನು ಹೇಳಿದ್ದು ಅಲ್ಲ. ಸಭಾಧ್ಯಕ್ಷರೇ, ಮಾನ್ಯ ಸಚಿವರಲ್ಲಿ ಒಂದು ಪ್ರಾರ್ಥನೆ ಮಾಡುವುದು ಏನೆಂದರ ಇದುವರೆಗೂ ನನ್ನ ಕ್ಷೇತ್ರದಲ್ಲಿ ಒಬ್ಬರಿಗಾದರೂ ಕೆಲಸವಿಲ್ಲ. ಹೋದವರ್ಷ ಫೆಬ್ರವರಿಯಲ್ಲಿ ಮಳೆಬಾರದೆ ಅಭಾವದಿಂದ ಏನೂ ಬೆಳೆ ಆಗಿರಲಿಲ್ಲ. ಯಾವುದೋ "ಉದಯ" ಎನ್ನುವ ಪೇಪರ್‌ನಲ್ಲಿ ಇದುವರೆಗೆ 30 ಸಾವಿರ ಜನಕ್ಕೆ ಉದ್ಯೋಗಕೊಟ್ಟಿದ್ದಾರೆಂದು ಬಂದಿತೆಂದು ಕೇಳಿದ್ದೇನೆ. ಈ ರೀತಿ ಸುಳ್ಳು ವರದಿಯನ್ನು ಏತಕ್ಕೆ ಕೊಡಬೇಕು ?

ಶ್ರೀ ಎನ್. ಹುಚ್ಚಮಾಸ್ತಿಗೌಡ — ಮಾನ್ಯ ಪಾಟೀಲ್ ಸಾಹೇಬರೇ, ನನ್ನ ವಿನಂತಿ ಏನೆಂದರೆ 10-20 ದಿವಸಗಳ ಮುಂಚೆ ಬರಗಾಲ ಪಟ್ಟಿಯಲ್ಲಿ ಇದನ್ನು ಸೇರಿಸಿರಲಿಲ್ಲ ಆದರೆ ಸಾಮಾನ್ಯ ಸಿಂದಗಿ ತಾಲ್ಲೂಕಿನಲ್ಲಿ ಬರಗಾಲ ಬಂದಿದೆಯೆಂದು ಈ ಪಟ್ಟಿಯಲ್ಲಿ ಸೇರಿಸಿದ್ದೇವೆ. ನಾಲ್ಕು ತಾಲ್ಲೂಕನ್ನು ಸೇರಿಸಿದ್ದೇವೆ ಬಿಜಾಪುರ, ಇಂಡಿ, ಸಿಂದಗಿ ತಾಲ್ಲೂಕುಗಳನ್ನು ಕೂಡಲೇ ಬರಗಾಲ ಪ್ರದೇಶವೆಂದು ಪರಿಗಣಿಸಿ ಅಲ್ಲಿಗೆ ಬೇಕಾದ ಸೌಕರ್ಯಗಳನ್ನು ಕೂಡಲೇ ಒದಗಿಸಬೇಕೆಂದು ನಮ್ಮ ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ನಮ್ಮ ಮೇಲೆ ಭರವಸೆ ಇಟ್ಟು ಅಲ್ಲಿಗೆ ಹೋಗಿ ಜನರಿಗೆ ತಿಳಿಸಬಹುದು.

ಶ್ರೀ ಎಸ್. ವೈ. ಪಾಟೀಲ್.—ಫಾಲ್ಸ್ ಸ್ಟೇಟ್‌ಮೆಂಟ್ ಕೊಡುತ್ತಿದ್ದೀರಾ ನಾನು ಕೇಳುತ್ತೇನೆ. ರಾಜ್ಯದಲ್ಲಿ ಏನು ಫಿಗರ್ಸ್ ಮತ್ತು ಫ್ಯಾಕ್ಟ್ಸ್ ಇದೆ ಅದನ್ನು ಕೊಟ್ಟು ಹೇಳುತ್ತಿದ್ದೀರಿ. ಚೀಫ್ ಮಿನಿಷ್ಟರು ಹೇಳಿದ್ದಾರೆ ಆದರೆ ನಮ್ಮನ್ನು ನೋಡಿದರೆ ನಿಮಗೆ ಅಲಕ್ಷ್ಯ ಉಂಟಾಗುತ್ತದೆ. ನಮ್ಮ ತಾಲ್ಲೂಕುಗಳನ್ನು ಯಾವ ಲೆಕ್ಕಕ್ಕೂ ತೆಗೆದುಕೊಂಡಿಲ್ಲ. ಕಾರಣ ಎಲ್ಲಿಯವರೆಗೆ ನಮ್ಮ ತಾಲ್ಲೂಕಿನಲ್ಲಿ ಒಬ್ಬರೂ ಇಲ್ಲದ ಹಾಗೆ ಬೇರೆ ಕಡೆಗೆ ಕೆಲಸ ನೋಡಿಕೊಂಡು ಹೋಗುತ್ತಾರೆ ಅಲ್ಲಿಯವರೆಗೆ ನಮ್ಮ ಕಡೆಗೆ ಗಮನಕೊಡುವುದಿಲ್ಲವೆಂದು ತಿಳಿದಿದ್ದೇನೆ. 18 ನೇ ತಾರೀಖಿಗೆ ಅಸೆಂಬ್ಲಿ ಸೆಕ್ಷನ್ ಮುಗಿದ ಕೂಡಲೇ ಯಾರಾದರೂ ಒಬ್ಬ ಜವಾಬ್ದಾರಿ ಜನರು ಬಂದು ಹಿಂದೆ ನಡೆದಂತಹ ತಪ್ಪನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್ ಎಂ ಕೃಷ್ಣ —ಮಾನ್ಯ ಪಾಟೀಲರನ್ನು ನಾನು ಕೇಳುವುದು ಇಷ್ಟೇ. ಮಾನ್ಯ ರೆವಿನ್ಯೂ ಮಂತ್ರಿಗಳು ತಮ್ಮ ಕಷ್ಟವನ್ನು ಅರ್ಥಮಾಡಿಕೊಂಡಿದ್ದೇನೆಂದು ಹೇಳಿದ್ದಾರೆ. ಆದ್ದರಿಂದ ನೀವು ಈ ರೀತಿ ಮಾಡುವುದರಿಂದ ಅಲ್ಲಿ ಚಿತ್ರವನ್ನು ಕೊಡಲಿಕ್ಕೆ ಪ್ರಯತ್ನ ಮಾಡುವುದರ ಬದಲು ಹಾಳು ಮಾಡುತ್ತಿದ್ದೀರಿ !

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಪಾಟೀಲರು ಈ ರೀತಿ ಮಾತನಾಡಿ ಪರಿಸ್ಥಿತಿಯನ್ನು ಹದಗೆಡಿಸಿದರೂ, ಯಾರೇ ಹದಗೆಡಿಸಿದರೂ ಯಾವ ದಾಕ್ಷಿಣಕ್ಕೂ ಒಳಪಡದೆ ಆಗಬೇಕಾದಂತಹ ಸೇವೆ ಮಾಡುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಯಾವ ಯಾವ ತಾಲ್ಲೂಕುಗಳಲ್ಲಿ ಅಗತ್ಯವಾಗಿ ಏನೇನು ಕೆಲಸ ಆಗಬೇಕೋ ಅದನ್ನೆಲ್ಲಾ ಕೂಡಲೇ ಪರಿಶೀಲನೆ ಮಾಡಿ ಅಲ್ಲಿ ಕೆಲಸಗಳನ್ನು ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುತ್ತೇನೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಈ ಸಭೆಯಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ.

Election of Members to the Senates of the Bangalore, Karnataka and Mysore Universities Results' Announcement

MR. DEPUTY SPEAKER.—The Hon. Minister for Revenue has detailed out all the information and he has given a further assurance that the Hon'ble Members are at liberty to ask any amount of information about the work that is speeded up and he would supply all the information. The Hon'ble Chief Minister as well as the Hon. Finance Minister has said nothing will come in the way of talking up of the work and giving relief. What I urge upon the Hon'ble Members is to approach the Hon. Revenue minister with representation, if necessary, and discuss and get satisfied. I am sure all of them will get satisfied.

I will now read out the list of Members elected from the Assembly to the Senates of Mysore, Bangalore and Karnataka Universities.

I. **University of Mysore.**—*Sriyuths*:

1. U. T. Fareed,
2. Gatti Chandrashekar,
3. K. Venkatappa,
4. M. Venkatalingaiah,
5. B. V. Kakkilaya.

II. **Bangalore University.**—

1. K. Siddaiah,
2. V. Masiyappa,
3. B. E. Ramaiah,
4. Smt. Damayanthi Boregowd
5. T. R. Shamanna.